
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

KARNATAKA STATE OPEN UNIVERSITY
Mukthagangotri, Mysore - 570 006

# ಇತಿಹಾಸ

## ಎಂ.ಎ. (ಪ್ರಥಮ)



ಆಸ್ಟ್ರಿಯಾದ ಛಾನ್ಸಲರ್ ಮೆಟರ್ನಿಕ್

ಕೋರ್ಸ್ – 4

ಬ್ಲಾಕ್ – 2

# KSOU NATIONAL INTERNATIONAL RECOGNITION

Karnataka State Open University (KSOU) was established on 1st June 1996 with the assent of H.E. Governor of Karnataka as a full fledged University in the Academic year 1996 vide Government notification No./EDI/UOV/dated 12th February 1996 (Karnataka State Open University Act – 1992). The Act was promulgated with the object to incorporate an Open University at the State Level for the introduction and promotion of Open University and Distance Education Systems in the education pattern of the State and the Country for the Co-ordination and determination of standard of such systems.

- With the virtue of KSOU Act of 1992, Karnataka State Open University is empowered to establish, maintain or recognize Institutions, Colleges, Regional Centres and Study Centres at such places in Karnataka and also open outside Karnataka at such places as it deems fit.
- All Academic Programmes offered by Karnataka State Open University are recognized by the Distance Education Council (DEC), Ministry of Human Resource Development (MHRD), New Delhi.
- Karnataka State Open University is a regular member of the Association of Indian Universities (AIU), New Delhi, since 1999.
- Karnataka State Open University is a permanent member of Association of Commonwealth Universities (ACU), London, United Kingdom since 1999. Its member code number: ZKASOPENUINI.
- Karnataka State Open University is a permanent member of Asian Association of Open Universities (AAOU), Beijing, CHINA, since 1999.
- Karnataka State Open University has association with Commonwealth of Learning (COL), Vancouver, CANADA, since 2003. COL is an intergovernmental organization created by commonwealth Heads of Government to encourage the development and sharing of open learning distance education knowledge, resources and technologies.

Higher Education To Everyone Everywhere

ಕರ್ನಾಟಕ ರಾಜ್ಯ ಮುಕ್ತ
ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ
**ಕೋರ್ಸ್ - 4**

ಬ್ಲಾಕ್

**2**

# ಯುರೋಪಿನ ಇತಿಹಾಸ (1871 ರಿಂದ 1914 ರವರೆಗೆ)

ಘಟಕ - 100
ತೃತೀಯ ಗಣರಾಜ್ಯ: ಸಮಸ್ಯೆಗಳು ಮತ್ತು ಸಾಧನೆಗಳು

ಘಟಕ - 101
ಜರ್ಮನ್ ಸಾಮ್ರಾಜ್ಯ: ಒಟ್ಟೋವಾನ್ ಬಿಸ್ಮಾರ್ಕ್‌ನ ಕಾಲ (1871-1890)

ಘಟಕ - 102
ಜರ್ಮನ್ ಸಾಮ್ರಾಜ್ಯ: ಕೈಸರ್ ಎರಡನೇ ವಿಲಿಯಂನ ಕಾಲ

# ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಪ್ರೊ. ಎಸ್. ಎನ್. ವಿಕ್ರಂ ರಾಜ್ ಅರಸ್**
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಡಾ. ಎಂ. ಸುಶೀಲ ಅರಸ್**
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

*ವಿಷಯ ಸಂಯೋಜಕರು*

**ಡಾ. ಮಾದೇಗೌಡ**
ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

*ಸಂಪಾದಕರು*

## ಪಠ್ಯಕ್ರಮ ನಿರೂಪಕರು

1. *ಘಟಕ ಬರೆದವರು* — ಘಟಕಗಳು 100 ರಿಂದ 102

ಡಾ. ಶಿವಣ್ಣ
ಪ್ರಾಧ್ಯಾಪಕರು,
ಇತಿಹಾಸ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ. **2013**

ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ ಕುಲಸಚಿವರು (ಆಡಳಿತ)

# ಇತಿಹಾಸ

# ಬ್ಲಾಕ್ - 2

## ಪೀಠಿಕೆ

ಎರಡನೆಯ ಬ್ಲಾಕ್ ಮೂರನೆಯ ಗಣರಾಜ್ಯ : ಸಮಸ್ಯೆಗಳು ಮತ್ತು ಸಾಧನೆಗಳು, ಜರ್ಮನ್ ಸಾಮ್ರಾಜ್ಯ : ಬಿಸ್ಮಾರ್ಕನ ಕಾಲ (1871-1890) ಮತ್ತು ಜರ್ಮನ್ ಸಾಮ್ರಾಜ್ಯ : ಎರಡನೆಯ ವಿಲಿಯಂನ ಕಾಲ (1888-1918) ಎಂಬ ಮೂರು ಕಾಲ (1888-1918) ಎಂಬ ಮೂರು ಘಟಕಗಳಿಂದ ಕೂಡಿದೆ.

ಘಟಕ 100 ರಲ್ಲಿ ನೀವು ತೃತೀಯ ಗಣರಾಜ್ಯದ ಸ್ಥಾಪನೆಯ ಬಗ್ಗೆ ತಿಳಿದುಕೊಳ್ಳುವಿರಿ

ಗಣರಾಜ್ಯ ಎದುರಿಸಿದ ಸಮಸ್ಯೆಗಳಾದ ಚರ್ಚ್‌ನೊಡನೆ ಸಂಘರ್ಷ, ಬೌಲಂಜರ್ ಬಿಕ್ಕಟ್ಟು, ಪನಾಮ ಹಗರಣ ಮತ್ತು ಡ್ರೈಪಸ್ಸನ ವ್ಯವಹಾರಗಳ ಬಗ್ಗೆ ತಿಳಿದುಕೊಂಡು ಮತ್ತು ಆ ಸಮಸ್ಯೆಗಳನ್ನು ಎಷ್ಟರ ಮಟ್ಟಿಗೆ ಬಗೆಹರಿಸಿತು ಎಂಬುದನ್ನು ಈ ಘಟಕದಲ್ಲಿ ಚರ್ಚ್‌ನ ಹಿಡಿತದಿಂದ ವಿದ್ಯಾಭ್ಯಾಸವನ್ನು ಬಿಡುಗಡೆಗೊಳಿಸಿದುದರ ಗಣರಾಜ್ಯದ ಸಾಧನೆಗಳಾದ ಬಗ್ಗೆ ಕಾರ್ಮಿಕರಿಗೆ ಸಂಬಂಧಪಟ್ಟ ಶಾಸನಗಳ ಜಾರಿ, ವ್ಯವಸಾಯ ಮತ್ತು ಕೈಗಾರಿಕೆಗಳ ಬೆಳವಣಿಗೆಗೆ ನೀಡಿದ ಪ್ರೋತ್ಸಾಹ, ವಸಹಾತುಗಳ ಸ್ಥಾಪನೆ ಮತ್ತು ವಿದೇಶಾಂಗ ನೀತಿಯ ಬಗ್ಗೆ ಗ್ರಹಿಸುವಿರಿ.

ಘಟಕ 101 ರಲ್ಲಿ ನೀವು ಬಿಸ್ಮಾರ್ಕನು ಛಾನ್ಸಲರ್ ಆಗಿ ಜರ್ಮನಿಯಲ್ಲಿ 1871 ರಿಂದ 1890 ರವರೆಗೆ ಮಾಡಿದ ಸಾಧನೆಗಳ ಬಗ್ಗೆ ತಿಳಿದುಕೊಳ್ಳುವಿರಿ. ನೀವು ಜರ್ಮನ್ ಸಂಯುಕ್ತ ಸಾಮ್ರಾಜ್ಯದ ಸಂವಿಧಾನದ ಬಗ್ಗೆ ಅರ್ಥ ಮಾಡಿಕೊಳ್ಳುವಿರಿ. ಬಿಸ್ಮಾರ್ಕನು ರೋಮನ್ ಕ್ಯಾಥೋಲಿಕ್ಕರ ಮತ್ತು ಸಮಾಜವಾದಿಗಳ ವಿರುದ್ಧ ನಡೆಸಿದ ಹೋರಾಟ, ಅವನ ಸುಂಕ ನೀತಿ ಮತ್ತು ವಸಹಾತು ನೀತಿಯ ಬಗ್ಗೆ ಕಲಿಯುವಿರಿ. ಅದೇ ರೀತಿ ಬಿಸ್ಮಾರ್ಕನು ವಿದೇಶಾಂತ ನೀತಿಗೆ ಸಂಬಂಧಿಸಿದಂತೆ, ಮೂವರು ಚಕ್ರವರ್ತಿಗಳ ಲೀಗ್, ದ್ವಿರಾಷ್ಟ್ರ ಒಪ್ಪಂದ, ಮೂವರು ಚಕ್ರವರ್ತಿಗಳ ಮೈತ್ರಿ ಒಕ್ಕೂಟ ಮತ್ತು ರೀಇನ್ಶೂರೆನ್ಸ್ ಒಪ್ಪಂದಗಳನ್ನು ಮಾಡಿ ಕೊಂಡಿದುದರ ಬಗ್ಗೆ ಅರ್ಥಮಾಡಿಕೊಳ್ಳುವಿರಿ

ಘಟಕ 102 ಜರ್ಮನಿಯ ಚಕ್ರವರ್ತಿ ವಿಲಿಯಂನಿಗೆ ಸಂಬಂಧಿಸಿದುದು. ಈ ಘಟಕದಲ್ಲಿ ಕೈಸರ್ ವಿಲಿಯಂನ ಕಲಾದಲ್ಲಾದ ಕೈಗಾರಿಕಾ ಬೆಳವಣಿಗೆ ಮತ್ತು ವ್ಯವಸಾಯದ ಅಭಿವೃದ್ಧಿ, ಸೈನ್ಯ ಮತ್ತು ನೌಕಾಬಲದ ವಿಸ್ತರಣೆ, ವಸಾಹತು ನೀತಿ ಮತ್ತು ವಿದೇಶಾಂಗ ನೀತಿಯ ಬಗ್ಗೆ ಅರ್ಥ ಮಾಡಿಕೊಳ್ಳುವಿರಿ. ಅದೇ ರೀತಿ ವಿಲಿಯಂನ ಆರ್ಥಿಕ ಪೈಪೋಟಿ, ವಸಾಹತು ಪೈಪೋಟಿ, ನೌಕಾಬಲದ ಪೈಪೋಟಿ ಮತ್ತು ವಿಶ್ವ ರಾಜಕೀಯ ಹೇಗೆ ಒಂದನೆಯ ಜಾಗತಿಕ ಯುದ್ಧಕ್ಕೆ ಕಾರಣವಾದವು ಎಂಬುದನ್ನು ತಿಳಿದುಕೊಳ್ಳುವಿರಿ.

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು.

# ಘಟಕ - 100

## ತೃತೀಯ ಗಣರಾಜ್ಯ :ಸಮಸ್ಯೆಗಳು ಮತ್ತು ಸಾಧನೆಗಳು

ರಚನೆ


**100.0** ಉದ್ದೇಶಗಳು

**100.1** ಪೀಠಿಕೆ

**100.2** ರಾಷ್ಟ್ರೀಯ ಶಾಸನ ಸಭೆ - ಕಾರ್ಯಾಂಗದ ಸರ್ವೋಚ್ಚ ಅಧಿಕಾರಿಯಾಗಿ ಥಿಯರ್ಸ್

**100.2.1** ಫ್ರಾಂಕ್ ಫರ್ಟ್ ಒಪ್ಪಂದ (ಮೇ 1871)

**100.2.2** ಪ್ಯಾರಿಸ್ ಕಮ್ಯೂನ್

**100.2.3** ರಾಜನ ಅಧಿಕಾರವನ್ನು ಪುನರ್ ಸ್ಥಾಪಿಸುವುದರಲ್ಲಿ ರಾಜತ್ವವಾದಿಗಳ ವಿಫಲತೆ

**100.2.3** ಥಿಯರ್ಸ್‌ನ ಸಾಧನೆಗಳ ಮೌಲ್ಯಮಾಪನ

**100.3** ಮ್ಯಾಕ್ ಮಹೊನ್‌ನ ಕಾಲದಲ್ಲಿ ಫ್ರಾನ್ಸ್

**100.3.1** 1875ರ ಗಣರಾಜ್ಯದ ರಾಜ್ಯಾಂಗ

**100.3.2** ಹೊಸ ರಾಜ್ಯಾಂಗದ ಪ್ರಕಾರ ಚುನಾವಣೆ - ರಿಪಬ್ಲಿಕನ್ನರ ಜಯ

**100.4** ತೃತೀಯ ಗಣರಾಜ್ಯದ ಸಮಸ್ಯೆಗಳು

**100.4.1** ಬೌಲಂಜರ್ ಬಿಕ್ಕಟ್ಟು (1886-89)

**100.4.2** ಪನಾಮ ಹಗರಣ

**100.4.3** ಡ್ರೈ ಫಸ್ಸನ ವ್ಯವಹಾರ

**100.5** ಗಣರಾಜ್ಯದ ಸಾಧನೆಗಳು

**100.5.1** ಸ್ವಾತಂತ್ರ್ಯಗಳ ಘೋಷಣೆ

**100.5.2** ಪ್ರಾಥಮಿಕ ಶಾಲೆಗೆ ಸಂಬಂಧಿಸಿದ ಸುಧಾರಣೆ ಮತ್ತು ಪಾದ್ರಿಗಳ ವಿರುದ್ಧದ ಕಾಯಿದೆಗಳು

**100.5.3** ಚರ್ಚ್ ಮತ್ತು ರಾಜ್ಯಗಳ ಪ್ರತ್ಯೇಕತೆ

**100.5.4** ಭೌತಿಕ ಬೆಳವಣಿಗೆ

**100.5.5** ವಸಾಹತುಗಳ ವಿಸ್ತರಣೆ

**100.6** ವಿದೇಶಾಂಗ ನೀತಿ

**100.6.1** ಫ್ರಾನ್ಸ್ ಮತ್ತು ರಷ್ಯಾ ನಡುವಣ ಮೈತ್ರಿ ಕೂಟ

**100.6.2** ಆಂಗ್ಲೋ-ಫ್ರೆಂಚ್ ಒಪ್ಪಂದ (1904) (Anglo French Entente)

**100.6.3** ಅಲ್ಜಿ ಸಿರಾಸ್ ಸಮ್ಮೇಳನ (1906)

**100.6.4** ಅಗಡೀರ್ ಘಟನೆ

**100.7** ಸಂಕ್ಷಿಪ್ತ ಅವಲೋಕನ

**100.8** ಕ್ಲಿಷ್ಟ ಪದಗಳ ಟಿಪ್ಪಣಿ

**100.9** ಮಾದರಿ ಪ್ರಶ್ನೆಗಳು

**100.10** ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 100.0 ಉದ್ದೇಶಗಳು

ಈ ಘಟಕದ ಅಧ್ಯಯನದಿಂದ ನೀವು ತಿಳಿದುಕೊಳ್ಳುವ ಘಟನಾವಳಿಗಳೆಂದರೆ :

* ಬಿಸ್ಮಾರ್ಕ್‌ನಿಂದ ಮೂರನೆಯ ನೆಪೋಲಿಯನ್ನನ ಪರಾಜಯ ಮತ್ತು ಫ್ರಾನ್ಸ್‌ನಲ್ಲಿ ಎರಡನೆಯ ಸಾಮ್ರಾಜ್ಯದ ಪತನ.

* ಫ್ರಾನ್ಸ್‌ನಲ್ಲಿ ಹೊಸ ಸರ್ಕಾರದ ರಚನೆ ಮತ್ತು ಕಾರ್ಯಾಂಗದ ಅಧ್ಯಕ್ಷನಾಗಿ ಕೆಲಸ ನಿರ್ವಹಿಸಿದ ಅಡಾಲ್ಫ್ ಥಿಯರ್ಸ್‌ನ ಸಾಧನೆಗಳು.

* ರಾಜತ್ವವಾದಿಗಳು ರಾಜತ್ವವನ್ನು ಪುನರ್ ಸ್ಥಾಪಿಸಲು ನಡೆಸಿದ ವಿಫಲ ಯತ್ನ.

* ತೃತೀಯ ಗಣರಾಜ್ಯದ ರಾಜ್ಯಾಂಗದ ಲಕ್ಷಣಗಳು.

* ಮೂರನೆಯ ಗಣರಾಜ್ಯವು ಬೌಲಂಜರ್ ಬಿಕ್ಕಟ್ಟು, ಪನಾಮ ಹಗರಣ ಮತ್ತು ಡ್ರೈಫಸ್ಸನ ವ್ಯವಹಾರದಂತಹ ಬೃಹತ್ ಸಮಸ್ಯೆಗಳನ್ನು ಬಗೆಹರಿಸಿದ ರೀತಿ.

* ಪ್ರಾಥಮಿಕ ವಿದ್ಯಾಭ್ಯಾಸವನ್ನು ಕ್ರೈಸ್ತ ಪುರೋಹಿತ ಶಾಹಿಯಿಂದ ಬಿಡುಗಡೆಗೊಳಿಸಿದ ಸಾಧನೆ ಮತ್ತು ಚರ್ಚ್‌ನ್ನು ರಾಜ್ಯದಿಂದ ಪ್ರತ್ಯೇಕಿಸಿದ ಯಶಸ್ಸು.

* ತೃತೀಯ ಗಣರಾಜ್ಯದ ಆಳ್ವಿಕೆಯ ಕಾಲದಲ್ಲಿ ಫ್ರಾನ್ಸ್‌ನಲ್ಲಿ ಆದ ಕೈಗಾರಿಕೆ ಮತ್ತು ಕೃಷಿಯ ಅಭಿವೃದ್ಧಿ.

* ಆಫ್ರಿಕಾ ಮತ್ತು ಏಷ್ಯಾದಲ್ಲಿ ವಸಾಹತುಗಳನ್ನು ಸ್ಥಾಪಿಸಿದ ಕೀರ್ತಿ.

* ಫ್ರಾನ್ಸಿನ ಏಕಾಂಗಿತನವನ್ನು ಕೊನೆಗೊಳಿಸಿ 1893 ರಲ್ಲಿ ರಷ್ಯಾದೊಡನೆ ಮಾಡಿಕೊಂಡ ಒಪ್ಪಂದ ಹಾಗೂ 1904 ರಲ್ಲಿ ಇಂಗ್ಲೆಂಡಿನೊಡನೆ ಮಾಡಿಕೊಂಡ ಮೈತ್ರಿಕೂಟ (ಆಂಗ್ಲೋ - ಫ್ರೆಂಚ್ ಆಂತಾಂತ್)

* ಮೊರೊಕ್ಕೊ ಬಿಕ್ಕಟ್ಟಿಗೆ ಅಂತ್ಯ

## 100.1 ಪೀಠಿಕೆ

ಫ್ರಾಂಕೊ-ಪ್ರಷ್ಯನ್ ಯುದ್ಧ (1870-71) ಫ್ರಾನ್ಸಿನ ಎರಡನೆಯ ಸಾಮ್ರಾಜ್ಯದ ಹಣೆಯ ಬರಹವನ್ನು ಕೊನೆಗೊಳಿಸಿತು. ಸೆಡಾನ್ ಯುದ್ಧದ ಸೋಲು ಯೂರೋಪಿನಲ್ಲಿ ಮೂರನೆಯ ನೆಪೋಲಿಯನ್ನನ ಪ್ರತಿಷ್ಠೆಯನ್ನು ನಾಶಪಡಿಸಿತು. ಈ ಸೋಲಿನ ಸುದ್ದಿಯಿಂದ ಪ್ಯಾರಿಸ್‌ಗೆ ಸಿಡಿಲು ಬಡಿದಂತಾಯಿತು.

ಫ್ರೆಂಚ್ ಸೈನ್ಯದ ಸೋಲಿನ ನಂತರ ಉಂಟಾದ ಮೊದಲನೆಯ ಪರಿಣಾಮವೆಂದರೆ ಫ್ರಾನ್ಸಿನ ಎರಡನೆಯ ಸಾಮ್ರಾಜ್ಯವನ್ನು ಪದಚ್ಯುತಿಗೊಳಿಸಿದುದು. ಸೋಲಿನ ಸುದ್ದಿ ಪ್ಯಾರಿಸ್‌ಗೆ ತಲುಪುತ್ತಿದ್ದಂತೆಯೇ ಜನರು ದಂಗೆ ಎದ್ದು ಬೋರ್ಬನ್ ಅರಮನೆಯ ಮೇಲೆ ಧಾಳಿ ಮಾಡಿದರು. ಕೆಲವು ಶಾಸನ ಸಭೆಯ ಸದಸ್ಯರು ಕೂಡ ಜನರ ಜೊತೆ ಸೇರಿಕೊಂಡರು. ಅವರು ಎರಡನೆಯ ಸಾಮ್ರಾಜ್ಯದ ಪತನವನ್ನು ಪ್ರಕಟಿಸಿದರು. ನಂತರ ಶಾಸನ ಸಭೆಯು ಸದಸ್ಯರು ಹೋಟೆಲ್-ಡಿ-ವಿಲ್ಲೆಯಲ್ಲಿ ಸಭೆ ಸೇರಿ ರಾಷ್ಟ್ರೀಯ ರಕ್ಷಣ ಹಂಗಾಮಿ ಸರ್ಕಾರವನ್ನು ಸ್ಥಾಪಿಸಿದರು. ಈ ಶಾಸನ ಸಭೆಯಲ್ಲಿ ಪ್ರಮುಖ ವ್ಯಕ್ತಿ ಎಂದರೆ ಲಿಯಾನ್ ಗ್ಯಾಂಬೆಟ್ಟ. ಅವನು ಫ್ರಾನ್ಸನ್ನು ಸೋಲಿನ ಅಪಮಾನದಿಂದ ಬಿಡುಗಡೆಗೊಳಿಸಲು ಹಾಗೂ ಮೂರನೆಯ ಫ್ರೆಂಚ್ ಗಣರಾಜ್ಯಕ್ಕೆ ಒಂದು ಶಾಶ್ವತ ಸ್ಥಾನವನ್ನು ದೊರಕಿಸಿಕೊಡಲು ಕಾತುರನಾಗಿದ್ದನು. ಗ್ಯಾಂಬೆಟ್ಟನು ತನ್ನ ಆರು ತಿಂಗಳ ಸರ್ವಾಧಿಕಾರದ ಆಳ್ವಿಕೆಯ ಸಮಯದಲ್ಲಿ ಮೂರನೆಯ ಗಣರಾಜ್ಯವು ಕೊನೆಯವರೆಗೂ ಯುದ್ಧವನ್ನು ಮುಂದುವರಿಸುವಂತೆ ಕ್ರಮ ಕೈಗೊಂಡನು. ಆದರೆ ಜನವರಿಯ ವೇಳೆಗೆ ಫ್ರಾನ್ಸ್ ಸಂಪೂರ್ಣವಾಗಿ ನಿತ್ರಾಣಗೊಂಡಿತು. ರಾಜಧಾನಿಯಲ್ಲಿ ಕೇವಲ ಎಂಟು ದಿನಗಳಿಗೆ ಆಗುವಷ್ಟು ಆಹಾರ ಸಾಮಗ್ರಿ ಇತ್ತು. ಅಂತಿಮವಾಗಿ 1871 ರ ಜನವರಿ 28 ರಂದು ಪ್ಯಾರಿಸ್ ಯಾವುದೇ ಷರತ್ತಿಲ್ಲದೆ ಜರ್ಮನಿಗೆ ಶರಣಾಯಿತು.

ಎರಡನೆಯ ಸಾಮ್ರಾಜ್ಯದ ಪತನಾನಂತರ ಫ್ರಾನ್ಸ್‌ನಲ್ಲಿ ಮೂರನೇ ಗಣರಾಜ್ಯವನ್ನು ಸ್ಥಾಪಿಸಲಾಯಿತು. ಮೂರನೇ ಗಣರಾಜ್ಯದ ಮುಂದೆ ಇದ್ದ ಬಹಳ ಮುಖ್ಯವಾದ ಕೆಲಸವೆಂದರೆ ಯುದ್ಧದಿಂದ ತತ್ತರಿಸಿದ್ದ ಫ್ರಾನ್ಸ್‌ನ್ನು ಪುನರ್ ನಿರ್ಮಾಣ ಮಾಡುವ ಕೆಲಸ. ಇದರ ಜೊತೆಗೆ ಮೂರನೇ ಗಣರಾಜ್ಯವು ಅನೇಕ ಸಮಸ್ಯೆಗಳನ್ನು ಎದುರಿಸಿತು. ತನ್ನ ಕೆಲವು ಆಯಕಟ್ಟಿನ ಪ್ರದೇಶಗಳನ್ನು ಜರ್ಮನಿಗೆ ಫ್ರಾಂಕ್‌ಫರ್ಟ್ ಶಾಂತಿ ಒಪ್ಪಂದದ ಮೂಲಕ ನೀಡುವುದರ ಮೂಲಕ ಕಳೆದುಕೊಂಡಿತ್ತು ಮತ್ತು ಅಧಿಕ ಮೊತ್ತದ ಯುದ್ಧದ ಪರಿಹಾರ ಹಣವನ್ನು ಜರ್ಮನಿಗೆ ನೀಡಬೇಕಾಗಿತ್ತು. ಈ ಸಮಸ್ಯೆಗಳ ಜೊತೆಗೆ ಆಂತರಿಕವಾಗಿ ಬೌಲಂಜರ್ ಬಿಕ್ಕಟ್ಟು, ಡ್ರೈಫಸ್ಸನ ವ್ಯವಹಾರ, ಪನಾಮ ಕಾಲುವೆ ಹಗರಣ ಮುಂತಾದ ಬಿಕ್ಕಟ್ಟುಗಳನ್ನು ಎದುರಿಸಬೇಕಾಯಿತು. ಆರ್ಥಿಕವಾಗಿ ಫ್ರಾನ್ಸನ್ನು ಬಲಪಡಿಸಲು ವ್ಯವಸಾಯ ಮತ್ತು ಕೈಗಾರಿಕೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕಾಗಿತ್ತು. ಹತ್ತೊಂಬತ್ತನೆಯ ಶತಮಾನ ಸಾಮ್ರಾಜ್ಯ ವಿಸ್ತರಣಾ ಕಾಲವಾಗಿತ್ತು. ಯೂರೋಪಿನ ಎಲ್ಲ ರಾಜ್ಯಗಳು ಆಫ್ರಿಕಾ ಮತ್ತು ಏಷ್ಯಾ ಖಂಡಗಳಲ್ಲಿ ವಸಾಹತುಗಳನ್ನು ಸ್ಥಾಪಿಸುವುದಕ್ಕೆ ಹೋರಾಟ ನಡೆಸುತ್ತಿದ್ದವು. ಮೂರನೇ ಗಣರಾಜ್ಯವು ಕೂಡ ವಸಾಹತುಗಳನ್ನು ಸಂಪಾದಿಸಲು ಕ್ರಮಕೈಗೊಳ್ಳಬೇಕಾಗಿತ್ತು.

## 100.2 ರಾಷ್ಟ್ರೀಯ ಸಭೆ (1871-75) ಕಾರ್ಯಾಂಗದ ಸರ್ವೋಚ್ಚ ಅಧಿಕಾರಿಯಾಗಿ ಥಿಯರ್ಸ್

ಬಿಸ್ಮಾರ್ಕನು ಹಂಗಾಮಿ ಸರ್ಕಾರದೊಡನೆ ಶಾಂತಿ ಒಪ್ಪಂದ ಮಾಡಿಕೊಳ್ಳಲು ನಿರಾಕರಿಸಿದನು. ಏಕೆಂದರೆ ಅದು ಅಧಿಕೃತವಾಗಿ ಸ್ಥಾಪಿಸಲ್ಪಟ್ಟ ಸರ್ಕಾರವಾಗಿರಲಿಲ್ಲ. ಆದುದರಿಂದ 1871 ರ ಫೆಬ್ರವರಿ 8 ರಂದು ರಾಷ್ಟ್ರೀಯ ಸಭೆಗೆ ಚುನಾವಣೆಗಳು ನಡೆದವು. ಅಡಾಲ್ಫ್ ಥಿಯರ್ಸ್ ಕಾರ್ಯಾಂಗದ ಮುಖ್ಯಸ್ಥನಾಗಿ ಚುನಾಯಿಸಲ್ಪಟ್ಟನು.

### *100.2.1 ಫ್ರಾಂಕ್‌ಫರ್ಟ್ ಒಪ್ಪಂದ (ಮೇ 1871)*

ಹೊಸದಾಗಿ ಚುನಾಯಿಸಲ್ಪಟ್ಟ ಶಾಸನ ಸಭೆಯು ತಕ್ಷಣವೇ ಜರ್ಮನಿಯೊಡನೆ ಶಾಂತಿ ಒಪ್ಪಂದವನ್ನು ಮಾಡಿಕೊಂಡಿತು. ಫ್ರಾನ್ಸ್ ತನ್ನ ಪ್ರಾಂತ್ಯಗಳಾದ ಅಲ್ಸೇಸ್ ಮತ್ತು ಲೊರೈನ್‌ನ ಬಹು ಭಾಗವನ್ನು ಜರ್ಮನಿಗೆ ಬಿಟ್ಟು ಕೊಡಬೇಕಾಯಿತು. ಮೂರು ವರ್ಷಗಳಲ್ಲಿ ನಿರೀಕ್ಷೆಗೂ ಮೀರಿದ 5 ಸಾವಿರ ಮಿಲಿಯನ್ ಫ್ರಾಂಕ್‌ಗಳನ್ನು ಜರ್ಮನಿಗೆ ಯುದ್ಧದ ಪರಿಹಾರವಾಗಿ ನೀಡಬೇಕಾಯಿತು. ಇದರ ಜೊತೆಗೆ ಯುದ್ಧದ ಪರಿಹಾರವನ್ನು ನೀಡುವವರೆಗೆ ಫ್ರಾನ್ಸ್‌ನಲ್ಲಿ ಬೀಡುಬಿಟ್ಟಿದ್ದ ಜರ್ಮನ್ ಸೈನ್ಯದ ವೆಚ್ಚವನ್ನು ಫ್ರೆಂಚ್ ಸರ್ಕಾರ ಭರಿಸಬೇಕಾಗಿತ್ತು. ಯುದ್ಧದ ಪರಿಹಾರ ಹಣವನ್ನು ಸಂದಾಯ ಮಾಡಿದಂತೆ ಹಂತ ಹಂತವಾಗಿ ಈ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಳ್ಳಲಾಗುವುದೆಂದು ಒಪ್ಪಂದವನ್ನು ಜರ್ಮನಿ ಮಾಡಿಕೊಂಡಿತು.

### *100.2.2 ಪ್ಯಾರಿಸ್ ಕಮ್ಯೂನ್ (1871)*

ಫ್ರಾಂಕೊ-ಪ್ರಷ್ಯನ್ ಯುದ್ಧ ಮುಗಿಯುವುದಕ್ಕೆ ಮುಂಚೆಯೇ ಆಂತರಿಕ ಯುದ್ಧ ಪ್ಯಾರಿಸ್‌ನ ಕಮ್ಯೂನ್ ಮತ್ತು ರಾಷ್ಟ್ರೀಯ ಸಭೆಯ ನಡುವೆ ಪ್ರಾರಂಭವಾಯಿತು. ಪ್ಯಾರಿಸ್‌ನ ಕ್ರಾಂತಿಕಾರಿ ಎಡಪಂಥೀಯರು ರಾಜಧಾನಿಯ ಆಡಳಿತವನ್ನು ನಿರ್ವಹಿಸಲು ಕಮ್ಯೂನ್‌ನನ್ನು ಸ್ಥಾಪಿಸಿದರು. ಅವರು ರಾಷ್ಟ್ರೀಯ ಸಭೆಯ ವಿರುದ್ಧ ದಂಗೆ ಎದ್ದರು. ರಾಷ್ಟ್ರೀಯ ಸಭೆಯ ಅಧಿಕಾರವನ್ನು ತಿರಸ್ಕರಿಸಿ ಪ್ಯಾರಿಸ್ ನಗರವು ತನ್ನ ಸ್ವಯಂ ಆಡಳಿತವನ್ನು ಸ್ಥಾಪಿಸಿಕೊಂಡಿದೆ ಎಂದು ಸಾರಿದರು. ಪರಿಣಾಮವಾಗಿ ವರ್ಸೈಲ್ಸ್‌ನಲ್ಲಿದ್ದ ರಾಷ್ಟ್ರೀಯ ಸಭೆ ಸೈನ್ಯ ಬಲದಿಂದ ಪ್ಯಾರಿಸ್ ದಂಗೆಯನ್ನು ಅಡಗಿಸಲು ನಿರ್ಧರಿಸಿತು. ಸುಮಾರು 1871 ರ ಏಪ್ರಿಲ್ ಮತ್ತು ಮೇ ಎರಡು ತಿಂಗಳುಗಳ ಕಾಲ ಪ್ಯಾರಿಸ್‌ನ ಮೇಲೆ ದಾಳಿ ಮಾಡಲಾಯಿತು. ಅಂತಿಮವಾಗಿ ಕಮ್ಯೂನ್‌ನ ಅಧಿಕಾರವನ್ನು ಕೊನೆಗೊಳಿಸಲಾಯಿತು. ಸೈನಿಕ ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು. ಅನೇಕ ದಂಗೆಕೋರರನ್ನು ಯಾವುದೇ ವಿಚಾರಣೆ ಇಲ್ಲದೆ ಗುಂಡಿಕ್ಕಿ ಕೊಲ್ಲಲಾಯಿತು. ಸಾವಿರಾರು ದಂಗೆಕೋರರನ್ನು ಫ್ರೆಂಚ್ ಘಯಾನ ಮತ್ತು ಇನ್ನೂ ಅನೇಕ ಸ್ಥಳಗಳಿಗೆ ಗಡಿಪಾರು ಮಾಡಲಾಯಿತು. ಅಂತಿಮವಾಗಿ ಫ್ರಾನ್ಸ್‌ನಲ್ಲಿ ಶಾಂತಿ ನೆಲೆಸಿತು.

ಆದರೆ ಜರ್ಮನಿಯ ಸೈನ್ಯ ಇನ್ನೂ ಫ್ರಾನ್ಸ್‌ನಲ್ಲಿ ಬೀಡು ಬಿಟ್ಟಿತ್ತು. ಜರ್ಮನಿಯ ಸೈನ್ಯವನ್ನು ಹಿಂದಕ್ಕೆ ಕಳುಹಿಸಬೇಕಾದರೆ ಫ್ರಾನ್ಸ್ ಐದು ಸಾವಿರ ಮಿಲಿಯನ್ ಫ್ರಾಂಕ್‌ಗಳನ್ನು ಜರ್ಮನಿಗೆ ನೀಡಬೇಕಾಗಿತ್ತು. ಯುದ್ಧ ಪರಿಹಾರ ಹಣದ ಕೊನೆಯ ಕಂತನ್ನು 1873 ರ ಸೆಪ್ಟೆಂಬರ್ ತಿಂಗಳಿನಲ್ಲಿ ಜರ್ಮನಿಗೆ ಸಂದಾಯ ಮಾಡಲಾಯಿತು. ನಂತರ ಫ್ರಾನ್ಸ್‌ನಿಂದ ಜರ್ಮನಿ ತನ್ನ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಂಡಿತು. ನಂತರ ಫ್ರಾನ್ಸ್ ತನ್ನ ಸೈನ್ಯವನ್ನು ಪ್ರಷ್ಯನ್ ಮಾದರಿಯಲ್ಲಿ ಪುನರ್ ಸಂಘಟಿಸಿತು. ಯುದ್ಧದಿಂದ ಜರ್ಜರಿತವಾಗಿದ್ದ ಫ್ರಾನ್ಸ್ ಬಹುಬೇಗನೆ ಚೇತರಿಸಿಕೊಂಡು ಪುನಃ ಒಂದು ಪ್ರಬಲ ರಾಷ್ಟ್ರವಾಗಿ ಹೊರಹೊಮ್ಮಿತು.

### *100.2.3 ರಾಜನ ಅಧಿಕಾರವನ್ನು ಪುನರ್ ಸ್ಥಾಪಿಸುವುದರಲ್ಲಿ ರಾಜತ್ವವಾದಿಗಳ ವಿಫಲತೆ*

ರಾಷ್ಟ್ರೀಯ ಸಭೆಯಲ್ಲಿ ಕೇವಲ 200 ಮಂದಿ ರಿಪಬ್ಲಿಕನ್ ಸದಸ್ಯರಿದ್ದರು. ಆದರೆ ರಾಜ ಪ್ರಭುತ್ವವಾದಿಗಳ ಸಂಖ್ಯೆ 400. ಆದ್ದರಿಂದ ರಾಜನನ್ನು ಪುನಃ ಅಧಿಕಾರಕ್ಕೆ ತರಬೇಕೆಂಬ ಮಹದಾಸೆಯನ್ನು ರಾಜಪ್ರಭುತ್ವವಾದಿಗಳು ಹೊಂದಿದ್ದರು. ಆದರೆ ಅವರಲ್ಲೆ ಐಕ್ಯತೆ ಇರಲಿಲ್ಲ. ಲೆಜಿಟಿಮಿಸ್ಟ್‌ರು (ಬೋರ್ಬಾನ್ ಮನೆತನದ ಬೆಂಬಲಿಗರು) ಮತ್ತು ಆರ್ಲಿಯನ್ನಿಸ್ಟರು (ಆರ್ಲಿಯನ್ ಮನೆತನದ ಬೆಂಬಲಿಗರು) ತಮ್ಮ ತಮ್ಮಲ್ಲೆ ಯಾವ ಮನೆತನದವರನ್ನು ರಾಜನನ್ನಾಗಿ ಮಾಡಬೇಕೆಂಬುದರ ಬಗ್ಗೆ ಕಚ್ಚಾಟ ಪ್ರಾರಂಭಿಸಿದರು. ಆದ್ದರಿಂದ ರಾಜನನ್ನು ತರುವ ಅವಕಾಶವನ್ನು ಹಾಳುಮಾಡಿಕೊಂಡರು. ಉಗ್ರರಾಜಪ್ರಭುತ್ವವಾದಿಗಳು ಥಿಯರ್ಸ್ ರಾಜಪ್ರಭುತ್ವವನ್ನು ಪುನರ್ ಸ್ಥಾಪಿಸುವನೆಂಬ ಆಶಾಭಾವನೆಯಿಂದ ಅರ್ಧಮನಸ್ಸಿನಿಂದ ಸಹಕರಿಸಿದರು. ಆದರೆ ರಾಜಪ್ರಭುತ್ವದ ಬಗ್ಗೆ ಉದಾರ ಭಾವನೆ ಹೊಂದಿದ್ದ ಥಿಯರ್ಸ್ ಗಣರಾಜ್ಯದ ಸರ್ಕಾರಕ್ಕೆ ಬೆಂಬಲ ನೀಡುತ್ತಿರುವನೆಂದು ಭಾವಿಸಿ ಅವನನ್ನು ಅಧ್ಯಕ್ಷ ಸ್ಥಾನದಿಂದ 1873 ರ ಮೇ ತಿಂಗಳಿನಲ್ಲಿ ಪದಚ್ಯುತಿಗೊಳಿಸಲಾಯಿತು. ಅನಂತರ ಮಾರ್ಷಲ್ ಮ್ಯಾಕ್ ಮಹೋನ್‌ನನ್ನು ಅಧ್ಯಕ್ಷನಾಗಿ ಚುನಾಯಿಸಲಾಯಿತು.

### 100.2.3 ಥಿಯರ್ಸ್‌ನ ಸಾಧನೆಗಳ ಮೌಲ್ಯ ಮಾಪನ

ಜರ್ಮನರಿಂದ ಫ್ರಾನ್ಸ್ ಸೋಲನ್ನು ಅನುಭವಿಸಿದ ನಂತರ ಫ್ರಾನ್ಸ್‌ನಲ್ಲಿ ರಾಜಕೀಯ ಬಿಕ್ಕಟ್ಟು ಉಂಟಾಯಿತು. ಇಂತಹ ರಾಜಕೀಯ ಬಿಕ್ಕಟ್ಟಿನ ಸಮಯದಲ್ಲಿ ಥಿಯರ್ಸ್‌ನಂತಹ ಒಬ್ಬ ಅಸಾಮಾನ್ಯ ರಾಜ್ಯನೀತಿಜ್ಞನನ್ನು ಫ್ರಾನ್ಸ್ ಹೊಂದಿದ್ದುದು ಅದೃಷ್ಟ. ಇಂತಹ ಗಂಭೀರ ಪರಿಸ್ಥಿತಿಯ ಸಮಯದಲ್ಲಿ ಥಿಯರ್ಸ್ ತನ್ನ ವ್ಯಕ್ತಿತ್ವ, ಬಲ, ಶಕ್ತಿ ಮತ್ತು ಬುದ್ಧಿವಂತಿಕೆಯಿಂದ ಫ್ರಾನ್ಸ್‌ನ್ನು ಮುನ್ನಡೆಸಿದನು. ಅವನೊಬ್ಬ ನ್ಯಾಯವಾದಿ, ಪತ್ರಿಕೋದ್ಯಮಿ ಮತ್ತು ಇತಿಹಾಸಕಾರನಾಗಿದ್ದನು. ಈಗಾಗಲೇ ಮೇಲೆ ವಿವರಿಸಿರುವಂತೆ 1871 ರ ಫೆಬ್ರುವರಿಯಲ್ಲಿ ಕಾರ್ಯಾಂಗದ ಮುಖ್ಯಸ್ಥನಾಗಿ ಬಿಸ್ಮಾರ್ಕ್‌ನ ಜೊತೆ ಶಾಂತಿ ಒಪ್ಪಂದ ಮಾಡಿಕೊಳ್ಳುವ ಕೆಲಸ ನಿರ್ವಹಿಸಿದನು. 1871 ರ ಬೇಸಿಗೆಯಲ್ಲಿ ಪ್ಯಾರಿಸ್ ಕಮ್ಯೂನ್‌ನ ದಂಗೆಯನ್ನು ದಮನ ಮಾಡಿದ ನಂತರ ಅಧಿಕೃತವಾಗಿ ಫ್ರಾನ್ಸಿನ ಗಣರಾಜ್ಯದ ಅಧ್ಯಕ್ಷನಾಗಿ ನೇಮಕಗೊಂಡನು. ಆ ಪದವಿಯಲ್ಲಿ 1873 ರವರೆಗೆ ಮುಂದುವರಿದನು. ಅವನು ಅಧ್ಯಕ್ಷನಾಗಿದ್ದಾಗಲೆ ದಾಖಲೆ ಸಮಯವೆನಿಸಿಕೊಂಡ ಎರಡೂವರೆ ವರ್ಷಗಳಲ್ಲಿ ಜರ್ಮನಿಗೆ ನೀಡಬೇಕಾಗಿದ್ದ ಯುದ್ಧ ಪರಿಹಾರ ಹಣವನ್ನು ಸಂದಾಯ ಮಾಡಿದನು. ಆದುದರಿಂದಾಗಿ ಫ್ರಾನ್ಸ್‌ನ ಜನತೆ ಥಿಯರ್ಸ್‌ನನ್ನು "ತಮ್ಮ ನಾಡನ್ನು ವಿಮೋಚನೆಗೊಳಿಸಿದವನು " ಎಂಬುದಾಗಿ ಪ್ರಶಂಸಿದ್ದಾರೆ.

## 100.3 ಮ್ಯಾಕ್ ಮಹೊನ್‌ನ ಕಾಲದಲ್ಲಿ ಫ್ರಾನ್ಸ್

ರಾಜಪ್ರಭುತ್ವವಾದಿಗಳು ಅಂತಿಮವಾಗಿ ಉತ್ತರಾಧಿಕಾರತ್ವದ ಸಮಸ್ಯೆಗೆ ಸಂಬಂಧಿಸಿದಂತೆ ಒಮ್ಮತಕ್ಕೆ ಬಂದರು. ಮಕ್ಕಳಿಲ್ಲದ ಬೋರ್ಬನ್ ಮನೆತನದ 5ನೇ ಹೆನ್ರಿ ಫ್ರಾನ್ಸಿನ ರಾಜನಾಗಬೇಕು. ಅನಂತರ ಅವನಿಗೆ ಮಕ್ಕಳಿಲ್ಲದೆ ಇರುವುದರಿಂದ ಆರ್ಲಿಯನ್ ಮನೆತನಕ್ಕೆ ಸೇರಿದ್ದ ಲೂಯಿ ಫಿಲಿಪ್‌ನ ಮೊಮ್ಮಗನಾದ ಕಾಮ್ಟ್ ಡಿ ಪ್ಯಾರಿಸ್ ಫ್ರಾನ್ಸಿನ ಸಿಂಹಾಸನವನ್ನಲಂಕರಿಸಬೇಕೆಂದು ಒಪ್ಪಿಕೊಂಡರು. ಆದರೆ 5ನೆ ಹೆನ್ರಿಯು ಕ್ರಾಂತಿಕಾರಿ ತ್ರಿವರ್ಣ ಧ್ವಜವನ್ನು ಒಪ್ಪಿಕೊಳ್ಳದೆ ರಾಜಿಯಾಗದಂತಹ ಒಂದು ನಿಲುವಿಗೆ ಅಂಟಿಕೊಂಡನು. ಬೋರ್ಬನ್ ಮನೆತನದ ಲಿಲಿ ಪುಷ್ಪಗಳಿಂದ ಕೂಡಿದ ಬಿಳಿಯ ಧ್ವಜಕ್ಕೋಸ್ಕರ ಫ್ರಾನ್ಸಿನ ಸಿಂಹಾಸನವನ್ನು ತ್ಯಾಗ ಮಾಡಲು ಸಿದ್ಧ ಎಂದು ಹೇಳಿದನು. ಕ್ರಾಂತಿಕಾರರ ತ್ರಿವರ್ಣಧ್ವಜವನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲವೆಂದು ಹೇಳಿದನು. ಇಂತಹ ಪರಿಸ್ಥಿತಿಗಳಲ್ಲಿ ರಾಜತ್ವವನ್ನು ಸ್ಥಾಪಿಸುವುದು ಫ್ರಾನ್ಸ್‌ನಲ್ಲಿ ಅಸಾಧ್ಯವಾಯಿತು. ಈ ರೀತಿಯಾಗಿ ಗಣರಾಜ್ಯ ಅಧಿಕಾರದಲ್ಲಿ ಮುಂದುವರಿಯಲು ಅನುಕೂಲವಾಯಿತು.

### 100.3.1 1875 ರ ಗಣರಾಜ್ಯದ ರಾಜ್ಯಾಂಗ

ಭ್ರಮನಿರಸಗೊಂಡ ರಾಜಪ್ರಭುತ್ವವಾದಿಗಳು ಮತ್ತು ಕಾರ್ಯತಃ ಬುದ್ಧಿವಂತರಾದ ಗಣರಾಜ್ಯ ಬೆಂಬಲಿಗರ ನಡುವೆ ಸೂಚಿತ ಒಂದು ಒಪ್ಪಂದವೇರ್ಪಟ್ಟು, 1875 ರ ರಾಜ್ಯಾಂಗವನ್ನು ರಚಿಸಿದರು. 1875 ರ ರಾಜ್ಯಾಂಗವು ಎರಡು ಸದನಗಳಿಗೆ ಅವಕಾಶ ಮಾಡಿಕೊಟ್ಟಿತು. 9 ವರ್ಷಗಳ ಅವಧಿಗೆ ಚುನಾಯಿಸಲ್ಪಟ್ಟ ಮುನ್ನೂರು ಸದಸ್ಯರುಗಳಿಂದ ಕೂಡಿದ ಒಂದು ಸೆನೆಟ್ ಸಭೆ ಮತ್ತು ನಾಲ್ಕು ವರ್ಷಗಳ ಅವಧಿಗೆ ಸಾರ್ವತ್ರಿಕವಾಗಿ ಚುನಾಯಿಸಲ್ಪಟ್ಟ 610 ಸದಸ್ಯರ ಬಲವುಳ್ಳ ಚೇಂಬರ್ ಆಫ್ ಡೆಪ್ಯೂಟೀಸ್. ಚೇಂಬರ್ ಆಫ್ ಡೆಪ್ಯೂಟೀಸ್‌ನ ಸದನವನ್ನು ಸೆನೆಟ್‌ನ ಒಪ್ಪಿಗೆ ಪಡೆದು ವಿಸರ್ಜಿಸುವ ಅಧಿಕಾರ ಅಧ್ಯಕ್ಷರಿಗೆ ಮಾತ್ರ ಇತ್ತು. ಏಳು ವರ್ಷದ ಅವಧಿಗೆ ಅಧ್ಯಕ್ಷನನ್ನು ಚುನಾಯಿಸಲಾಗುತ್ತಿತ್ತು. ಅವನೇ ಕಾರ್ಯಾಂಗದ ಮುಖ್ಯಸ್ಥ. ಸೈನ್ಯ ಮತ್ತು ನೌಕಾದಳದ ಅಧಿಪತಿಯು ಕೂಡ ಅವನೇ ಆಗಿದ್ದನು. ನಾಗರಿಕ ಮತ್ತು ಸೈನ್ಯಾಧಿಕಾರಿಗಳನ್ನು ನೇಮಕ ಮಾಡುವ ಅಧಿಕಾರ ಹೊಂದಿದ್ದನು. ಆದರೆ ಈ ರೀತಿ ನೇಮಕ ಮಾಡುವಾಗ ಸಂಬಂಧಪಟ್ಟ ಮಂತ್ರಿ ಈ ನೇಮಕಗಳನ್ನು ಸ್ಥಿರೀಕರಿಸಬೇಕಾಗಿತ್ತು. (Countersigned) ಪ್ರತಿಯೊಬ್ಬ ಮಂತ್ರಿಯು ತನ್ನ ನಿರ್ಧಾರಕ್ಕೆ ತಾನೇ ಹೊಣೆಯಾಗಿರುತ್ತಿದ್ದನು. ಆದರೆ ಒಟ್ಟಿಗೆ ಎಲ್ಲಾ ಮಂತ್ರಿಗಳು ಸರ್ಕಾರದ ಸಾಮಾನ್ಯ ನೀತಿಗೆ ಅನುಗುಣವಾಗಿ ನಿರ್ಧಾರ ತೆಗೆದುಕೊಳ್ಳಬೇಕಾಗಿತ್ತು.

### 100.3.2 ಹೊಸ ರಾಜ್ಯಾಂಗದ ಪ್ರಕಾರ ಚುನಾವಣೆ- ರಿಪಬ್ಲಿಕನ್ನರ ಜಯ

1876 ರ ಪ್ರಾರಂಭದಲ್ಲೇ ಚುನಾವಣೆಗಳು ಫ್ರಾನ್ಸ್‌ನಲ್ಲಿ ಹೊಸ ರಾಜ್ಯಾಂಗದ ಪ್ರಕಾರ ನಡೆದವು. ಚುನಾವಣೆಯ ಫಲಿತಾಂಶವನ್ನು ಪ್ರಕಟಿಸಿದಾಗ ಸೆನೆಟ್‌ನಲ್ಲಿ ರಾಜಪ್ರಭುತ್ವವಾದಿಗಳು ಬಹುಮತವನ್ನು ಗಳಿಸಿದರು. ಆದರೆ ಚೇಂಬರ್ ಆಫ್ ಡೆಪ್ಯೂಟೀಸ್‌ನಲ್ಲಿ ಗಣತಂತ್ರರು ಬಹುಮತವನ್ನು ಗಳಿಸಿಕೊಂಡರು. ಅಧ್ಯಕ್ಷ ಮಾರ್ಷಲ್ ಮ್ಯಾಕ್ ಮಹೋನ್ ಸೆನೆಟ್‌ನ ಬೆಂಬಲದಿಂದ ತನ್ನ ಅಧಿಕಾರವನ್ನು ಉಳಿಸಿಕೊಂಡನು. ಅವನು ವೈಯುಕ್ತಿಕ ಘನತೆಯಿಂದ ರಾಯಲಿಸ್ಟರ ನೀತಿಗಳಿಗೆ ಬೆಂಬಲ ನೀಡಲು ತನ್ನ ಅಧಿಕಾರವನ್ನು ಬಳಸಿಕೊಂಡನು. ಕ್ಯಾಥೊಲಿಕ್ಕರ ಹಿತಾಸಕ್ತಿಗಳನ್ನು ಕಾಪಾಡಲು ಪ್ರಯತ್ನಿಸಿದನು. ಆದರೆ ಅಧ್ಯಕ್ಷ ಮ್ಯಾಕ್ ಮಹೋನ್ ರಿಪಬ್ಲಿಕನ್ನರ ಭಾವನೆಗಳಿಗೆ ಯಾವ ಮನ್ನಣೆಯನ್ನು ಕೊಡದೆ ನಿರಂಕುಶವಾಗಿ ಆಳ್ವಿಕೆ ನಡೆಸಿದನು. ಸ್ವಾಭಾವಿಕವಾಗಿ ಇಂತಹ ವರ್ತನೆ ಶಾಸನ ಸಭೆಯ ಸದಸ್ಯರೊಂದಿಗೆ ಘರ್ಷಣೆಗೆ ಅವಕಾಶ ಮಾಡಿಕೊಟ್ಟಿತು. ಚೇಂಬರ್ ಆಫ್ ಡೆಪ್ಯೂಟೀಸ್‌ನಲ್ಲಿ ರಿಪಬ್ಲಿಕನ್ ಪಕ್ಷದ ನಾಯಕನಾಗಿದ್ದ ಗ್ಯಾಂಬೆಟ್ಟನು ಮ್ಯಾಕ್ ಮಹೋನ್‌ನ ನೀತಿಗಳನ್ನು ವಿರೋಧಿಸಿದನು. ರಾಯಲಿಸ್ಟರು ಚರ್ಚ್‌ಗೆ ಸಹಾಯ ಮಾಡುತ್ತಿದ್ದುದರಿಂದ ಅವರ ವಿರುದ್ಧ ರಾಷ್ಟ್ರದಾದ್ಯಂತ ಹಾಗೂ ಚೇಂಬರ್ ಆಫ್ ಡೆಪ್ಯೂಟೀಸ್‌ನಲ್ಲಿ ಗ್ಯಾಂಬೆಟ್ಟ ತನ್ನ ಆಕ್ರಮಣವನ್ನು ಮುಂದುವರಿಸಿದನು. ಆದುದರಿಂದಾಗಿ ಗ್ಯಾಂಬೆಟ್ಟ ಮತ್ತು ರಾಯಲಿಸ್ಟ್ ಮ್ಯಾಕ್ ಮಹೋನ್‌ನ ನಡುವೆ ಬಲಪರೀಕ್ಷೆ ನಡೆಯಿತು. 1877 ಮೇ ಹದಿನಾರರಂದು ಮ್ಯಾಕ್ ಮಹೋನ್ ರಾಯಲಿಸ್ಟ್ ಮಂತ್ರಿ ಮಂಡಲ (ರಾಜತ್ವ ಪರಇದ್ದ) ವನ್ನು ನೇಮಕ ಮಾಡಿದನು. ಚೇಂಬರ್ ಆಫ್ ಡೆಪ್ಯೂಟೀಸ್‌ನನ್ನು ಸೆನೆಟ್‌ನ ಅನುಮತಿ ಪಡೆದು ವಿಸರ್ಜಿಸಿ ಹೊಸದಾಗಿ ಚುನಾವಣೆ ನಡೆಸಲು ಆಜ್ಞೆ ಹೊರಡಿಸಿದನು. ಈ ಚುನಾವಣೆಯಲ್ಲಿ ರಿಪಬ್ಲಿಕನ್ನರು ಬಹುಮತವನ್ನು ಗಳಿಸಿಕೊಂಡರು. ಈ ಫಲಿತಾಂಶ ಮ್ಯಾಕ್ ಮಹೋನನಿಗೆ ಆಶ್ಚರ್ಯವನ್ನುಂಟುಮಾಡಿತು. ಇದುವರೆವಿಗೂ ಮ್ಯಾಕ್ ಮಹೋನನ ರಾಯಲಿಸ್ಟ್ ನೀತಿಗಳನ್ನು ವಿರೋಧಿಸುತ್ತಿದ್ದ ರಿಪಬ್ಲಿಕನ್ನರು ಪುನಃ ಹೊಸ ಚೇಂಬರ್ ಆಫ್ ಡೆಪ್ಯೂಟೀಗಳ ಸಭೆ ಸಮಾವೇಶಗೊಂಡಾಗ ಅವನ ರಾಜಿನಾಮೆಗೆ ಒತ್ತಾಯಿಸಿದರು. ಆದರೆ ಅವನು ಸೆನೆಟ್‌ನಲ್ಲಿ ಅಧಿಕ ಸಂಖ್ಯೆಯಲ್ಲಿದ್ದ ರಾಯಲಿಸ್ಟರ ಬೆಂಬಲ ಪಡೆದು ಒಂದು ವರ್ಷದವರೆಗೆ ಮುಂದುವರಿದನು. ಆದರೆ 1879 ರಲ್ಲಿ ಭಾಗಶಃ ಸೆನೆಟ್‌ಗಾಗಿ ನಡೆದ ಚುನಾವಣೆ ಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರಿಪಬ್ಲಿಕನ್ನರು ಚುನಾಯಿಸಲ್ಪಟ್ಟಿದುದರಿಂದ ಸೆನೆಟ್ ಕೂಡ ರಿಪಬ್ಲಿಕನ್ನರ ಹಿಡಿತಕ್ಕೊಳಪಟ್ಟಿತು. ಆದುದರಿಂದ ರಾಯಲಿಸ್ಟ್ ಅಧ್ಯಕ್ಷನು ಹತಾಶನಾಗಿ ರಾಜೀನಾಮೆಯನ್ನು ನೀಡಿದನು. ಅವನ ಸ್ಥಳದಲ್ಲಿ ರಿಪಬ್ಲಿಕನ್ ಪಕ್ಷದ ಜೂಲ್ಸ್‌ಗ್ರೇವಿ ಅಧ್ಯಕ್ಷನಾಗಿ ಚುನಾಯಿಸಲ್ಪಟ್ಟನು. ಸರ್ಕಾರದ ಕೇಂದ್ರ ಸ್ಥಾನವನ್ನು ರಾಜಪ್ರಭುತ್ವವಾದಿಗಳ ಕೇಂದ್ರ ಸ್ಥಾನವಾಗಿದ್ದ ವರ್ಸೈಲ್ಸ್‌ನಿಂದ ರಿಪಬ್ಲಿಕನ್ನರ ಕೇಂದ್ರಸ್ಥಾನ ಪ್ಯಾರಿಸ್‌ಗೆ ವರ್ಗಾಯಿಸಲಾಯಿತು.

## 100.4 ತೃತೀಯ ಗಣರಾಜ್ಯದ ಸಮಸ್ಯೆಗಳು

ಮೂರನೇ ಗಣರಾಜ್ಯವು ಪ್ರಾರಂಭಿಕ ವರ್ಷಗಳಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ರಿಪಬ್ಲಿಕನ್ ಪಕ್ಷವೇ ಅನೇಕ ಗುಂಪುಗಳಾಗಿ ಒಡೆದು ಹೋಗಿತ್ತು. ಮಂದಗಾಮಿಗಳು ಮತ್ತು ತೀವ್ರ ಸುಧಾರಣ ರಿಪಬ್ಲಿಕನ್ನರು ರಿಪಬ್ಲಿಕನ್ ಪಕ್ಷದ ಪ್ರಮುಖ ಗುಂಪುಗಳು. ಮಂದಗಾಮಿಗಳು ಆಸ್ತಿವಂತರಿಗೆ ಸಂಪ್ರದಾಯಬದ್ಧ ಉದಾರಿ ನೀತಿಯನ್ನು ಅನುಸರಿಸಲಾಗುವುದೆಂದು ಆಶ್ವಾಸನೆ ನೀಡಿದರು. ಆದರೆ ತೀವ್ರ ಸುಧಾರಣ ಪ್ರಿಯರು (Radicals) ಜಾಕೋಬಿನ್ ತತ್ವ ಮತ್ತು ಫ್ರಾನ್ಸ್ ಜನಾಂಗದ ಬಲವರ್ಧನೆಯ ಕಾರಣವನ್ನು ಸಮರ್ಥಿಸಿಕೊಂಡರು.

ಅನೇಕ ಹಗರಣಗಳಿಂದಾಗಿ ಮೂರನೇ ಗಣರಾಜ್ಯದ ಸ್ಥಿರತೆಗೆ ಭೀತಿ ಉಂಟಾಯಿತು. ಈ ಕಳಂಕಗಳು ಗಣರಾಜ್ಯಕ್ಕಿದ್ದ ಒಳ್ಳೆಯ ಹೆಸರಿಗೆ ಮಸಿಬಳಿದವು. ಆದುದರಿಂದ ಗಣರಾಜ್ಯದಲ್ಲಿದ್ದ ವಿಶ್ವಾಸವನ್ನು ಜನರು ಕಳೆದುಕೊಳ್ಳಲು ಪ್ರಾರಂಭಿಸಿದರು.

### 100.4.1 *ಬೌಲಂಜರ್ ಬಿಕ್ಕಟ್ಟು (1886-1889) (Boulanger Crisis)*

ಬೌಲಂಜರ್ ರಾಜಕೀಯ ರಂಗ ಪ್ರವೇಶಿಸಿದ ನಂತರ ಮೂರನೆಯ ಗಣರಾಜ್ಯಕ್ಕೆ ಇನ್ನೂ ಹೆಚ್ಚಿನ ಅಪಾಯ ಕಾಣಿಸಿಕೊಂಡಿತು. ಅವನು ಒಬ್ಬ ದಂಡನಾಯಕನಾಗಿದ್ದು ಟೂನಿಸ್ ಮತ್ತು ಫ್ರಾಂಕೊ-ಜರ್ಮನ್ ಯುದ್ಧದಲ್ಲಿ ಭಾಗವಹಿಸಿದ್ದನು. ಸೈನ್ಯದ ಅಧಿಕಾರಿಗಳ ನಡುವೆ ನೆಚ್ಚಿನ ದಂಡನಾಯಕನಾಗಿದ್ದನು. ಅವನು ರಾಜತ್ವದ ಶತೃವಾಗಿದ್ದು ಗಣರಾಜ್ಯದ ಬೆಂಬಲಿಗನಾಗಿದ್ದನು. 1886 ರಲ್ಲಿ ಯುದ್ಧ ಮಂತ್ರಿಯಾಗಿ ನೇಮಕಗೊಂಡನು. ಈ ಸಾರ್ವಜನಿಕ ಹುದ್ದೆಯನ್ನು ತನ್ನ ಸ್ವಪ್ರತಿಷ್ಠೆ ಹೆಚ್ಚಿಸಿಕೊಳ್ಳಲು ಬಳಸಿಕೊಂಡನು. ಸೈನಿಕರ ಮುಂದೆ ಬೂಟಾಟಿಕೆಯ ಸೋಗು ಹಾಕಲು ಪ್ರಾರಂಭಿಸಿದನು. ಅವನು ಜರ್ಮನಿಯ ವಿರುದ್ಧ ಸೇಡು ತೀರಿಸಿಕೊಳ್ಳಲು ಯುದ್ಧ ಮಾಡಬೇಕೆಂದು ವಾದಿಸಲು ಪ್ರಾರಂಭಿಸಿದನು. ಜನಪ್ರಿಯ ಸರದಾರನಾಗಿ ಕುದುರೆಯ ಮೇಲೆ ಸವಾರಿ ಮಾಡುತ್ತಿದ್ದ ಬಾಲಂಜರ್ ಬಗ್ಗೆ ಗಣರಾಜ್ಯದ ನಾಯಕರುಗಳಲ್ಲಿ ಭಯಉಂಟಾಯಿತು. ಒಂದನೆಯ ನೆಪೋಲಿಯನ್ ಯಾವ ರೀತಿ ಅಧಿಕಾರಕ್ಕೆ ಬಂದಿದ್ದ ಎಂಬ ನೆನಪು ಇನ್ನೂ ಅವರ ಮನಸ್ಸಿನಿಂದ ಮಾಸಿರಲಿಲ್ಲ. ಆದುದರಿಂದ ಅವರು ಬೌಲಂಜರ್ ರಾಜೀನಾಮೆ (1887) ನೀಡುವಂತೆ ಮಾಡಿದರು ಹಾಗೂ ದಂಡನಾಯಕನ ಹುದ್ದೆಯಿಂದ ತ್ಯಜಿಸುವಂತೆ ಕ್ರಮಕೈಗೊಂಡರು. ಅಧಿಕಾರವನ್ನು ಕಳೆದುಕೊಂಡ ಬೌಲಂಜರ್ ಆರ್ಲಿಯನಿಸ್ಟ್ ಮತ್ತು ಬೊನಾಪಾರ್ಟಿಸ್ಟ್ ಗುಂಪುಗಳ ಬೆಂಬಲ ಪಡೆದು ಸಂವಿಧಾನವನ್ನು ಪರಿಷ್ಕರಿಸುವಂತೆ ಗಣರಾಜ್ಯವನ್ನು ಒತ್ತಾಯಪಡಿಸಲು ಪ್ರಾರಂಭಿಸಿದನು. ಎಲಿಸೀ ಅರಮನೆಯಲ್ಲಿ ವಾಸಿಸುತ್ತಿದ್ದ ಅಧ್ಯಕ್ಷ ಗ್ರೇವಿಯ ಅಳಿಯ ಹಣಕಾಸಿನ ವ್ಯವಹಾರದ ಹಗರಣಕ್ಕೊಳಗಾಗಿದ್ದುದು ಬೆಳಕಿಗೆ ಬಂದಾಗ ಬೌಲಂಜರ್ ಚಳುವಳಿ ಮತ್ತಷ್ಟು ಚುರುಕುಗೊಳ್ಳಲು ಕಾರಣವಾಯಿತು. ಗ್ರೇವಿ ದೋಷಾರೋಪಣೆಗೆ ಒಳಗಾಗಿಲ್ಲದೆ ಇದ್ದರೂ, ಅವನು ಅಧ್ಯಕ್ಷ ಪದವಿಯನ್ನು ತ್ಯಜಿಸಬೇಕಾಯಿತು. ಈಘಟನೆ ಗಣರಾಜ್ಯಕ್ಕೆ ಮತ್ತಷ್ಟು ಅಪಖ್ಯಾತಿ ತಂದಿತು. ಗ್ರೇವಿಯ ಸ್ಥಾನಕ್ಕೆ ಸಾದಿಯನ್ನು ಗಣರಾಜ್ಯದ ಅಧ್ಯಕ್ಷನನ್ನಾಗಿ ಚುನಾಯಿಸಲಾಯಿತು.

ಅತ್ಯಂತ ಉತ್ಸಾಹದಿಂದ ಕೂಡಿದ್ದ ಹಾಗೂ ಅನೇಕ ಮುಖಂಡರ ಬೆಂಬಲ ಪಡೆದಿದ್ದ ಬೌಲಂಜರ್ ಶಾಸನ ಸಭೆಗೆ ಹೊಸದಾಗಿ ಚುನಾವಣೆಗಳನ್ನು ನಡೆಸುವಂತೆ ಹೋರಾಟ ಪ್ರಾರಂಭಿಸಿದನು. ಇದೇ ಸಮಯದಲ್ಲಿ ಉಪಚುನಾವಣೆಗಳು ನಡೆದಾಗ ಅನೇಕ ಕಡೆಗಳಿಂದ ಸ್ಪರ್ಧಿಸಿ ಬಹುತೇಕ ಎಲ್ಲಾ ಕಡೆಗಳಲ್ಲೂ ಜಯ ಗಳಿಸಿದನು. ಅದರಲ್ಲೂ ಪ್ಯಾರಿಸ್‌ನಲ್ಲಿ ನಡೆದ ಉಪಚುನಾವಣೆಯಲ್ಲಿ ಹೆಚ್ಚಿನ ಬಹುಮತದಿಂದ ಜಯಗಳಿಸಿದನು. ಅವನ ಜನಪ್ರಿಯತೆಯನ್ನು ನೋಡಿ ರಿಪಬ್ಲಿಕನ್ ಸರ್ಕಾರಕ್ಕೆ ಭಯ ಉಂಟಾಯಿತು. ಸರ್ಕಾರಕ್ಕೆ ಅವನ ಉದ್ದೇಶಗಳು ಅರ್ಥವಾಗಲಿಲ್ಲ. ಅಂತಿಮವಾಗಿ ರಾಜ್ಯದ ವಿರುದ್ಧ ನಡೆಸಿದ ಒಳಸಂಚಿನ ಆರೋಪವನ್ನು ಹೊರಿಸಿ ಬೌಲಂಜರ್‌ನನ್ನು ಬಂಧಿಸುವಂತೆ ಸರ್ಕಾರ ಆಜ್ಞೆ ಹೊರಡಿಸಿತು. ಬಂಧನದ ಆಜ್ಞೆಯನ್ನು ತಿಳಿದ ತಕ್ಷಣವೇ ಅವನು ವಿದೇಶಕ್ಕೆ ಪಲಾಯನ ಮಾಡಿದನು. ಎರಡು ವರ್ಷಗಳ ತರುವಾಯ ತನ್ನ ಮಡದಿಯ ಸಮಾಧಿಯ ಮೇಲೆ ಬೌಲಂಜರ್ ಆತ್ಮಹತ್ಯೆ ಮಾಡಿಕೊಂಡನು. ಈ ರೀತಿಯಾಗಿ ಬೌಲಂಜರ್ ಚಳುವಳಿ ವಿಫಲವಾಯಿತು. ಆದರೆ ಈ ಘಟನೆಯು ಗಣರಾಜ್ಯಕ್ಕೆ ಅವಿಧೇಯತೆಯಿಂದ ನಡೆದುಕೊಳ್ಳುತ್ತಿದ್ದ ವ್ಯಕ್ತಿಗಳನ್ನು ಬಯಲಿಗೆಳೆಯಿತು. ಬೌಲಂಜರ್ ಚಳುವಳಿಯ ಮತ್ತೊಂದು ಫಲಿತಾಂಶವೆಂದರೆ ಗಣರಾಜ್ಯದಲ್ಲಿ ನಂಬಿಕೆ ಇಟ್ಟಿದ್ದವರು ಪುನಃ ಒಟ್ಟುಗೂಡಿ ಅದಕ್ಕೆ ಪ್ರಾಮಾಣಿಕವಾಗಿ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು.

### 100.4.2 *ಪನಾಮ ಹಗರಣ*

ರಿಪಬ್ಲಿಕನ್ ಸರ್ಕಾರಕ್ಕೆ 1892 ರಲ್ಲಿ ಸಂಭವಿಸಿದ ಪನಾಮ ಹಗರಣ ಮತ್ತೊಂದು ಗಂಭೀರ ಸಮಸ್ಯೆಯನ್ನು ಒಡ್ಡಿತು. ಫ್ರೆಂಚ್ ಇಂಜಿನಿಯರ್ ಡಿ ಲಿಸ್ಸೆಪ್ಸ್ ಮೇಲ್ವಿಚಾರಣೆಯಲ್ಲಿ ಸೂಯೆಜ್ ಕಾಲುವೆಯ ನಿರ್ಮಾಣ ಕೆಲಸವನ್ನು ಫ್ರೆಂಚರು ಪೂರ್ಣಗೊಳಿಸಿದರು. ಈ ಯಶಸ್ಸು ಲಿಸ್ಸೆಪ್ಸ್‌ನ ಪ್ರತಿಷ್ಠೆಯನ್ನು ಹೆಚ್ಚಿಸುವುದರ ಜೊತೆಗೆ ಫ್ರೆಂಚ್ ಗಣರಾಜ್ಯದ ಕೀರ್ತಿಯನ್ನು ಕೂಡ ಹೆಚ್ಚಿಸಿತು. ಅನಂತರ ಅವನ ಮೇಲ್ವಿಚಾರಣೆಯಲ್ಲಿ ಪನಾಮದ ಇಸ್ತಮಸ್ ಮೂಲಕ ಒಂದು ಕಾಲುವೆಯನ್ನು

ನಿರ್ಮಿಸಲು ಫ್ರಾನ್ಸ್‌ನಲ್ಲಿ ಒಂದು ಕಂಪನಿಯನ್ನು ಸ್ಥಾಪಿಸಲಾಯಿತು. ಆದರೆ ಈ ಯೋಜನೆಯ ಅಂದಾಜನ್ನು ಸರಿಯಾಗಿ ಸಿದ್ಧಪಡಿಸದೆ ಇದ್ದುದರಿಂದ ಹಾಗೂ ಇನ್ನಿತರ ಕಾರಣಗಳಿಂದಾಗಿ ಈ ಯೋಜನೆಯನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ. ಪನಾಮ ಕಾಲುವೆಯ ಕೆಲಸ ಇದ್ದಕ್ಕಿದ್ದಂತೆ ನಿಂತು ಹೋಯಿತು. ಪನಾಮ ಕಂಪನಿಯು ದಿವಾಳಿಯಾಯಿತು. ಸರ್ಕಾರ ವಿಚಾರಣೆಯನ್ನು ಪ್ರಾರಂಭಿಸಿತು. ಈ ವಿಚಾರಣೆಯಿಂದ ಹಲವು ಮಂತ್ರಿಗಳು ಹಾಗೂ ಡೆಪ್ಯೂಟಿಗಳು ಕಂಪನಿಯ ನಿರ್ದೇಶಕರುಗಳಿಂದ ಲಂಚವನ್ನು ಸ್ವೀಕರಿಸಿದ್ದುದು ಬಹಿರಂಗವಾಯಿತು. ಲಂಚವನ್ನು ತೆಗೆದುಕೊಂಡಿರುವ ಆಪಾದನೆಗೆ ಡಿ ಲಿಸ್ಸೆಪ್ಸನು ಒಳಗಾದನು. ಅವನನ್ನು ಬಂಧಿಸಿ 5 ವರ್ಷಗಳ ಕಾರಾಗೃಹ ಶಿಕ್ಷೆಗೆ ಗುರಿಪಡಿಸಲಾಯಿತು. ವೃದ್ಧ ಇಂಜಿನಿಯರ್‌ನ ಮಗನಾದ ಚಾರ್ಲ್ಸ್.ಡಿ. ಲಿಸ್ಸೆಪ್ಸನು ತನ್ನ ತಂದೆಗೆ ಸಂಬಂಧಿಸಿದ ಎಲ್ಲಾ ತಪ್ಪುಗಳಿಗೆ ತಾನೆ ಹೊಣೆ ಎಂಬುದಾಗಿ ವಾದಿಸಿದನು. ಇದಲ್ಲದೆ ಹಲವು ಮಂತ್ರಿಗಳು ಮತ್ತು ಹಲವು ಡೆಪ್ಯೂಟಿಗಳು ರಾಜೀನಾಮೆ ನೀಡಿದರು. ಸಾವಿರಾರು ಬಂಡವಾಳ ಹೂಡಿಕೆದಾರರು ತಮ್ಮ ಹಣವನ್ನು ಕಳೆದುಕೊಂಡರು. ಇಂತಹ ಹಗರಣ ನಡೆದರೂ ಕೂಡ ಗಣರಾಜ್ಯ ಮುಂದುವರಿಯಿತು. ಆದರೆ ಈ ಹಗರಣ ಗಣರಾಜ್ಯಕ್ಕೆ ಹೆಚ್ಚು ಕಳಂಕವನ್ನುಂಟು ಮಾಡಿತು.

### *100.4.3 ಡ್ರೈಫಸ್ಸನ ವ್ಯವಹಾರ ( Dreyfus Affair)*

ಪನಾಮ ಹಗರಣ ಮುಗಿಯುತ್ತಿದ್ದಂತೆಯೆ ಫ್ರಾನ್ಸಿನ ಗಣರಾಜ್ಯ ಮತ್ತೊಂದು ಹಗರಣದಲ್ಲಿ 1894 ರಲ್ಲಿ ಸಿಲುಕಿತು. ಇದೇ ಡ್ರೈಫಸ್ಸನ ವ್ಯವಹಾರ. ಈ ಹಗರಣ ಫಾರೆ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ಸಂಭವಿಸಿತು. ಡ್ರೈಫಸ್ಸನ ಪ್ರಕರಣವು ಸುಮಾರು ಹನ್ನೆರಡು ವರ್ಷಗಳ ಕಾಲ ಫ್ರಾನ್ಸ್‌ನಲ್ಲಿ ಚರ್ಚೆಗೊಳಪಟ್ಟಿತು. ಈ ಪ್ರಕರಣ ಫ್ರೆಂಚ್ ಸಮಾಜವನ್ನು ಎರಡು ಗುಂಪುಗಳನ್ನಾಗಿ ವಿಭಾಗ ಮಾಡಿತು. ಡ್ರೈಫಸ್ಸನು ಫಿರಂಗಿ ದಳದ ಕ್ಯಾಪ್ಟನ್ ಆಗಿದ್ದನು. ಅಲ್ಲದೆ ಈತನು ಯೆಹೂದಿ ಆಗಿದ್ದನು. ವಿದೇಶಿ ರಾಷ್ಟ್ರಕ್ಕೆ ಸೈನಿಕ ರಹಸ್ಯಗಳನ್ನು ಒದಗಿಸಿದ್ದನೆಂಬ ಆಪಾದನೆಯ ಮೇಲೆ ಈತನನ್ನು 1894 ರಲ್ಲಿ ಸೈನಿಕ ವಿಚಾರಣೆಗೆ ಗುರಿಪಡಿಸಲಾಯಿತು. ಆ ವಿದೇಶ ರಾಷ್ಟ್ರ ಜರ್ಮನಿ ಎಂದು ಭಾವಿಸಲಾಗಿತ್ತು. ಅವನ ಕೈ ಬರವಣಿಗೆಯಲ್ಲಿಯೇ ಇದ್ದಿತೆಂದು ಹೇಳಲಾಗಿದ್ದ ಬೋರ್ಡರೋ ಎಂಬ ದಾಖಲೆಯೇ ಮುಖ್ಯ ಪ್ರಮಾಣವಾಗಿತ್ತು. ಸೈನಿಕ ನ್ಯಾಯಾಲಯವು ಅವನನ್ನು ವಿಚಾರಣೆಗೆ ಒಳಪಡಿಸಿತು. ಈ ವ್ಯವಹಾರದಲ್ಲಿ ಡ್ರೈಫಸ್ ಭಾಗಿಯಾಗಿರುವನೆಂದು ಸೈನಿಕ ನ್ಯಾಯಾಲಯವು ತೀರ್ಪನ್ನು ನೀಡಿತು. ಅನಂತರ ಅವನನ್ನು ಬಂಧಿಸಿ ಫ್ರೆಂಚ್ ಗಯಾನಾದ ಆಚೆ ಇದ್ದ ಡೆವಿಲ್ಸ್ ದ್ವೀಪದಲ್ಲಿ ಸೆರೆಮನೆಯಲ್ಲಿಡಲಾಯಿತು. ಡ್ರೈಫಸ್ಸನು ಈ ವ್ಯವಹಾರದಲ್ಲಿ ಭಾಗಿಯಾಗಿಲ್ಲವೆಂದೂ ಹಾಗೂ ತಾನು ನಿರಪರಾಧಿ ಎಂದು ಒತ್ತಿ ಹೇಳಿದನು. ಆದರೆ ಅವನ ವಿಚಾರಣಾ ಕಾಲದಲ್ಲಿ ಅವನನ್ನು ಯಾರೂ ನಂಬಲಿಲ್ಲ.

1896 ರಲ್ಲಿ ಕರ್ನಲ್ ಪಿಕರ್ಟ್ ಡ್ರೈಫಸ್ಸ್‌ನ ಮುಗ್ಧತೆಯನ್ನು ಪ್ರತಿಪಾದಿಸಿದನು. ಡ್ರೈಫಸ್ಸ್‌ನ ವಿರುದ್ಧ ಸಾಕ್ಷ್ಯವನ್ನು ಒದಗಿಸುವುದರ ಸಲುವಾಗಿ ಬೋರ್ಡರೋವನ್ನು ಬರೆದವನು ಮೇಜರ್ ಎಸ್ಟರಂಹಜೆ ಎಂದು ಈತನು ವಾದಿಸಿದನು. ಆದರೆ ಎಸ್ಟರ್ ಹಜೆಯನ್ನು ಖುಲಾಸೆಗೊಳಿಸಲಾಯಿತು. ಆ ವಿಚಾರಣೆ ಕೇವಲ ನಟನೆಯಾಗಿತ್ತು. ಪಿಕರ್ಟ್‌ನಿಗೆ ಅಪಮಾನವಾಯಿತು. ಅನಂತರ ಡ್ರೈಫಸ್ಸನು ನಿರಪರಾಧಿ ಎಂದು ವಾದಿಸಲು ಕೆಲವರು ಬುದ್ಧಿ ಜೀವಿಗಳು ಮುಂದೆ ಬಂದರು. ಅಂತಹವರಲ್ಲಿ ಪ್ರಮುಖನಾದವನು ಕಾದಂಬರಿಕಾರ ಎಮಿಲೆ ಜೋಲಾ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಒಂದು ಪತ್ರವನ್ನು ಪ್ರಕಟಿಸಿದನು. ಡ್ರೈಫಸ್ ಹಾಗೂ ಎಸ್ಟರಹಜೆ ಸೈನಿಕ ವಿಚಾರಣೆ ನಡೆಸಿದ ಎರಡೂ ಪಕ್ಷದ ನ್ಯಾಯಾಧೀಶರ ವಿಷಯದಲ್ಲಿ ಆಪಾದನೆ ಹೊರಿಸಿದನು. ಅವನನ್ನು ವಿಚಾರಣೆಗೆ ಒಳಪಡಿಸಿ ಖಂಡಿಸಲಾಯಿತು. ಆದರೆ ಆತನು ಗ್ರೇಟ್‌ಬ್ರಿಟನ್ನಿಗೆ ಓಡಿಹೋದನು. ಡ್ರೈಫಸ್ ಮಾಡಿರುವನೆಂದು ಆಪಾದಿಸಲಾದ ಮೂರು ತಪ್ಪುಗಳನ್ನು ಡೆಪ್ಯೂಟಿಗಳ ಸಭೆಯ ಮುಂದೆ ಸರ್ಕಾರ ಮಂಡಿಸಿತು. ಇದರಲ್ಲಿರುವ ಎರಡು ಆಪಾದನೆಗಳು ಈ ಪ್ರಕರಣಕ್ಕೆ ಸಂಬಂಧಿಸಿಲ್ಲವೆಂದು ಕರ್ನಲ್ ಪಿಕರ್ಟ್ ಸಾಧಿಸಿದನು. ಮೂರನೆಯ ಪ್ರಕರಣ ಸ್ಪಷ್ಟನೆ ಎಂದು

ಪ್ರತಿಪಾದಿಸಿದನು. ಇದಾದ ಕೆಲವೇ ದಿನಗಳಲ್ಲಿ ಕರ್ನಲ್ ಹೆನ್ರಿ ತಾನೇ ಸೃಷ್ಟಿಸಿರುವುದಾಗಿ ಹೇಳಿ ಆತ್ಮಹತ್ಯೆ ಮಾಡಿಕೊಂಡನು. ಡ್ರೈಪಸ್ಸ್ ತಪ್ಪಿಗೂ ಈ ಸ್ಪಷ್ಟನೆಗೂ ಯಾವುದೇ ವಿಧವಾದ ಭಿನ್ನಬೇಧವಿಲ್ಲವೆಂದು ಸರ್ಕಾರ ವಾದಿಸಿದರೂ ಈ ಪ್ರಕರಣವನ್ನು ಮೇಲ್ಮನೆಯ ನ್ಯಾಯಾಲಯವು ಪರಿಶೀಲಿಸಿತು. ಎಸ್ಟರ್ ಹಚೆ ಇಂಗ್ಲೆಂಡಿಗೆ ಓಡಿಹೋಗಿ ಬೋರ್ಡೆರೋವನ್ನು ತಾನು ಸೃಷ್ಟಿ ಮಾಡಿದ್ದಾಗಿ ಒಪ್ಪಿಕೊಂಡನು. ಈ ಮುಂಚೆ ಡ್ರೈಪಸ್ ಮೇಲೆ ಸೈನಿಕ ನ್ಯಾಯಾಲಯವು ಕೈಗೊಂಡಿದ್ದ ನಿರ್ಣಯವನ್ನು ಮೇಲ್ಮನೆಯ ನ್ಯಾಯಾಲಯವು ರದ್ದುಗೊಳಿಸಿತು. ಈ ಪ್ರಕರಣದ ಮರು ವಿಚಾರಣೆಗೆ ಆಜ್ಞೆ ಮಾಡಿತು. ಖೈದಿಯನ್ನು ಫ್ರಾನ್ಸಿಗೆ ಪುನಃ ಕರೆತರಲಾಯಿತು. ರೆನ್ನೆಸ್‌ನಲ್ಲಿ ಎರಡನೆಯ ಬಾರಿಗೆ ವಿಚಾರಣೆಗೆ ಗುರಿ ಪಡಿಸಲಾಯಿತು. ಎರಡನೆಯ ಬಾರಿ ಈತನನ್ನು ಅಪರಾಧಿ ಎಂದು ಸಾಬೀತು ಮಾಡಲು ಇವನ ವಿರೋಧಿಗಳು ಬಹುವಾಗಿ ಶ್ರಮಿಸಿದರು. ಈಗಲೂ ಕೂಡ ಸೈನಿಕ ನ್ಯಾಯಾಲಯವು ಅವನು ಅಪರಾಧಿ ಎಂದು ತೀರ್ಪನ್ನು ನೀಡಿತು. ಆದರೂ ಕೂಡ ಅವನ ತಪ್ಪುಗಳು ಕಡಿಮೆ ಎಂಬ ಸನ್ನಿವೇಶಗಳು ಕಂಡು ಬರುವುದರಿಂದ ಅವನಿಗೆ ಕ್ಷಮಾದಾನ ನೀಡಬಹುದೆಂದು ಸೈನಿಕ ನ್ಯಾಯಾಲಯ ಶಿಫಾರಸ್ಸು ಮಾಡಿತು. ಇದನ್ನನುಸರಿಸಿ ಅಧ್ಯಕ್ಷ ಫಾರೆಯ ಉತ್ತರಾಧಿಕಾರಿಯಾಗಿ ಬಂದಿದ್ದ ಅಧ್ಯಕ್ಷ ಡ್ರೈಪಸ್ಸ್‌ನಿಗೆ ಕ್ಷಮಾದಾನ ನೀಡಿದನು. ಸುಪ್ರೀಂ ಕೋರ್ಟ್ ಕೂಡ ಡ್ರೈಫಸ್ಸನು ಅಪರಾಧಿಯಲ್ಲವೆಂದು ಘೋಷಿಸಿತು. ಅವನ ಹುದ್ದೆಗೆ ಪುನಃ ನೇಮಕ ಮಾಡಲಾಯಿತು. ಅವನಿಗೆ ಬಡ್ತಿಯೂ ದೊರಕಿತು. ಈ ಪ್ರಕರಣದಿಂದಾಗಿ ಫ್ರೆಂಚ್ ರಾಜಕೀಯದ ಮೇಲೆ ಒಂದು ಅದ್ಭುತ ಪರಿಣಾಮ ಉಂಟಾಯಿತು. ಗಣರಾಜ್ಯವನ್ನು ರಕ್ಷಿಸಲು ಹಾಗೂ ಸರ್ಕಾರದ ಅಧೀನಕ್ಕೆ ಸೇನೆ ಒಳಪಟ್ಟಿರಬೇಕೆಂದು ವಾದಿಸಲು ರಿಪಬ್ಲಿಕನ್ ಹಾಗೂ ಸಮಾಜವಾದಿ ಗುಂಪುಗಳು ಒಟ್ಟುಗೂಡಿದವು.

## 100.5 ಗಣರಾಜ್ಯದ ಸಾಧನೆಗಳು

### *100.5.1 ಸ್ವಾತಂತ್ರ್ಯಗಳ ಘೋಷಣೆ*

ಮೂರನೆಯ ಗಣರಾಜ್ಯವು ಜನರಿಗೆ ಅನೇಕ ಸ್ವಾತಂತ್ರ್ಯಗಳನ್ನು ಘೋಷಿಸಿತು. ಸರ್ಕಾರದ ಅನುಮತಿ ಪಡೆಯದೆ ಸಭೆಗಳನ್ನು ನಡೆಸುವ ಸ್ವಾತಂತ್ರ್ಯವನ್ನು ನೀಡಲಾಯಿತು. ಪತ್ರಿಕಾ ಸ್ವಾತಂತ್ರ್ಯವನ್ನು ಘೋಷಿಸಲಾಯಿತು. ಕಾರ್ಮಿಕರು ತಮ್ಮದೇ ಆದ ಕಾರ್ಮಿಕ ಸಂಘಗಳನ್ನು ಸ್ಥಾಪಿಸಿಕೊಳ್ಳಲು ಅನುಮತಿ ನೀಡಲಾಯಿತು.

### *100.5.2 ಪ್ರಾಥಮಿಕ ವಿದ್ಯಾಭ್ಯಾಸದ ಸುಧಾರಣೆ ಮತ್ತು ಕ್ರೈಸ್ತ ಪುರೋಹಿತಶಾಹಿ ವಿರುದ್ಧದ ಕಾನೂನುಗಳು*

ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಮೂರನೇ ಗಣರಾಜ್ಯ ಪ್ರಮುಖವಾಗಿ ಗಮನ ಹರಿಸಬೇಕಾಗಿತ್ತು. ಒಂದನೆ ನೆಪೊಲಿಯನ್ನನ ಕಾಲದಿಂದಲೂ ಫ್ರೆಂಚ್ ಶಾಲೆಗಳಲ್ಲಿ ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದಂತೆ ಬೋಧನೆ ನೀಡಲಾಗುತ್ತಿತ್ತು. ಮೂರನೆಯ ನೆಪೋಲಿಯನ್ನನ ಆಳ್ವಿಕೆಯ ಕಾಲದಲ್ಲಿ ಕ್ರೈಸ್ತ ಬೋಧನಾ ಸಂಸ್ಥೆಗಳು ನಡೆಸುತ್ತಿದ್ದ ಶಾಲೆಗಳ ಸಂಖ್ಯೆ ಹೆಚ್ಚಾಯಿತು. ಪ್ರತಿಯೊಬ್ಬ ಬಾಲಕ ಮತ್ತು ಬಾಲಕಿಗೆ ಕಡ್ಡಾಯ ಶಿಕ್ಷಣ ನೀಡಬೇಕೆಂಬುದು ಮೊದಲನೆಯ ಬೇಡಿಕೆಯಾಗಿತ್ತು. ಪಾದ್ರಿಗಳು ಪಾಠಶಾಲೆಗಳಲ್ಲಿ ಹೊಂದಿರುವ ಪ್ರಭಾವವನ್ನು ಕೊನೆಗೊಳಿಸಿ ಸಾಮಾನ್ಯರ ಶ್ರೇಷ್ಠತೆಯನ್ನು ಸ್ಥಾಪಿಸಬೇಕೆಂಬುದು ಎರಡನೆಯ ಬೇಡಿಕೆ. ಪ್ರತಿಯೊಬ್ಬ ಬಾಲಕ ಮತ್ತು ಬಾಲಕಿ ರಿಪಬ್ಲಿಕನ್ ಗುಣಗಳನ್ನು ಅಳವಡಿಸಿಕೊಳ್ಳುವಂತೆ ಮಾಡಬೇಕು ಮತ್ತು ಅವರಲ್ಲಿ 'ಪ್ರತಿಗಾಮಿ'(ಪ್ರಗತಿ ವಿರೋಧಿ) ಗುಣ ಅಂಟದಂತೆ ರಕ್ಷಣೆ ನೀಡಬೇಕು ಎಂಬುದು ಗಣರಾಜ್ಯದ ಧ್ಯೇಯವಾಗಿತ್ತು.

1880 ರ ದಶಕದ ಪ್ರಾರಂಭದಲ್ಲಿ ಸಾರ್ವಜನಿಕ ಶಿಕ್ಷಣ ಮಂತ್ರಿಯಾಗಿದ್ದ ಜೂಲ್ಸ್ ಪೆರ್ರಿ ಪಾರ್ಲಿಮೆಂಟಿನಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತಹ ಅನೇಕ ಕಾನೂನುಗಳನ್ನು ಹೊರಡಿಸುವುದಕ್ಕೆ ಕಾರಣನಾದನು. ಕೆಲವು ಶಾಲೆಗಳಲ್ಲಿ ಕಡ್ಡಾಯ ಹಾಜರಾತಿಯನ್ನು ವಿಧಿಸಲಾಯಿತು. ಪೋಷಕರು ಬೇಕಾದರೆ ಕ್ರೈಸ್ತ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸಬಹುದು. ಆದರೆ ಆ ರೀತಿ ಅವರು ಆ

ಶಾಲೆಗಳಿಗೆ ಕಳುಹಿಸಿದರೆ ಅವರೇ ಧನಸಹಾಯ ನೀಡಿ ಆ ಶಾಲೆಗಳನ್ನು ನೋಡಿಕೊಳ್ಳಬೇಕು. ಮತ್ತೊಂದೆಡೆ "ಸಾರ್ವಜನಿಕ"ಅಥವಾ "ರಾಷ್ಟ್ರೀಯ"ಪದ್ಧತಿಯ ಶಾಲೆಗಳನ್ನು ಸ್ಥಾಪಿಸಲಾಯಿತು. ಈ ಶಾಲೆಗಳಿಗೆ ಸರ್ಕಾರ ಧನಸಹಾಯ ಮಾಡುತ್ತದೆ ಮತ್ತು ಗಣರಾಜ್ಯದ ನಿರ್ದೇಶನದಂತೆ ಈ ಶಾಲೆಗಳು ನಡೆಯುತ್ತವೆ. ಈ ಶಾಲೆಗಳಲ್ಲಿ ಹಾಜರಾತಿಗೆ ಸ್ವಾತಂತ್ರ್ಯವುಂಟು. ಆದರೆ ಸರ್ಕಾರ ನೇಮಕ ಮಾಡುವ ಸಾಮಾನ್ಯ ವರ್ಗಕ್ಕೆ ಸೇರಿದ ಶಿಕ್ಷಕರು ಬೋಧಿಸುವರು ಮತ್ತು ಧಾರ್ಮಿಕ ಬೋಧನೆಗೆ ಅವಕಾಶವಿರುವುದಿಲ್ಲ. ಪೆರ್ರಿ ಮತ್ತು ಅವನ ಸಹಪಾಠಿಗಳು ಪ್ರಾಥಮಿಕ ಶಾಲೆಗೆ ಸಂಬಂಧಿಸಿದ ಸುಧಾರಣೆಗಳನ್ನು ಜಾರಿಗೆ ತಂದ ಸಮಯದಲ್ಲೇ ಕ್ರೈಸ್ತ ಪಾದ್ರಿಗಳ ವಿರುದ್ಧವು ಕೂಡ ಅನೇಕ ಕ್ರಮಗಳನ್ನು ತೆಗೆದುಕೊಳ್ಳಲಾಯಿತು.

ಕ್ರೈಸ್ತ ಪಾದ್ರಿಗಳು ಹೊಂದಿದ್ದ ಇನ್ನೂ ಅನೇಕ ಸವಲತ್ತುಗಳನ್ನು ಮೊಟಕುಗೊಳಿಸಲಾಯಿತು. ಪಾರ್ಲಿಮೆಂಟಿನಲ್ಲಿ ಹೊರಡಿಸಿದ ಒಂದು ಶಾಸನದ ಪ್ರಕಾರ ವಿವಾಹಗಳು ಕಾನೂನು ಬದ್ಧವಾಗಿರಬೇಕಾದರೆ ಅವುಗಳನ್ನು ಒಬ್ಬ ಸಿವಿಲ್ ನ್ಯಾಯಾಧೀಶನ ಮುಂದೆ ನೆರವೇರಿಸಬೇಕು. ಮತ್ತೊಂದು ಶಾಸನದ ಪ್ರಕಾರ ಕೇವಲ ಸಿವಿಲ್ ನ್ಯಾಯಾಲಯಗಳು ಮಾತ್ರ ವಿವಾಹ ವಿಚ್ಛೇದನ ನೀಡುವ ಮತ್ತು ವಿವಾಹವನ್ನು ರದ್ದು ಪಡಿಸುವ ಅಧಿಕಾರ ಹೊಂದಿವೆ ಎಂದು ತಿಳಿಸಲಾಯಿತು. ವಿದ್ಯಾಭ್ಯಾಸ ಮತ್ತು ವಿವಾಹಕ್ಕೆ ಸಂಬಂಧಿಸಿದ ಈ ಎಲ್ಲಾ ಕ್ರಮಗಳನ್ನು ಲೈಕ್ ಕಾನೂನುಗಳು (Laic Laws) ಎಂದು ಕರೆಯಲಾಗಿದೆ.

1871 ರಿಂದಲೂ ಕ್ಲೆರಿಕಲ್ ಪಕ್ಷ ರಾಜಕೀಯದಲ್ಲಿ ಬಹಳ ಚಟುವಟಿಕೆಯಿಂದ ಕೂಡಿತ್ತು. ಈ ಪಕ್ಷ ರಾಜಪ್ರಭುತ್ವವಾದಿಗಳಿಗೆ ಬೆಂಬಲ ನೀಡುತ್ತಾ ರಿಪಬ್ಲಿಕರನ್ನು ವಿರೋಧಿಸಿತ್ತು. ರಿಪಬ್ಲಿಕನ್ನರು ಹೆಚ್ಚು ಅಧಿಕಾರ ಹೊಂದಿರುವ ಧಾರ್ಮಿಕ ಸಂಸ್ಥೆಗಳಿಂದ ಫ್ರೆಂಚ್ ಗಣರಾಜ್ಯಕ್ಕೆ ಅಪಾಯವಿದೆ ಎಂದು ಮನಗಂಡರು. ಧಾರ್ಮಿಕ ಸಂಸ್ಥೆಗಳು ಅಪಾರ ಸಂಪತ್ತನ್ನು ಹೊಂದಿದ್ದವು. ಈ ರೀತಿ ಸಂಪತ್ತು ಧಾರ್ಮಿಕ ಸಂಸ್ಥೆಗಳಲ್ಲಿ ಕೇಂದ್ರೀಕೃತವಾಗಿರುವುದು ರಾಜ್ಯಕ್ಕೆ ಅಪಾಯ ಎಂದು ಭಾವಿಸಿದರು. ರಿಪಬ್ಲಿಕನ್ ಸರ್ಕಾರಿ ವಿದ್ಯಾಭ್ಯಾಸವನ್ನು ಪಾದ್ರಿಗಳಿಂದ ಬಿಡುಗಡೆಗೊಳಿಸಿ ಮಕ್ಕಳಲ್ಲಿ ರಾಷ್ಟ್ರೀಯತೆಯ ಭಾವನೆ ಮೂಡುವಂತೆ ಕ್ರಮ ಕೈಗೊಳ್ಳಲು ನಿರ್ಧರಿಸಿದರು.

ಗಣರಾಜ್ಯ ಸರ್ಕಾರವು ಅನೇಕ ಮಸೂದೆಗಳನ್ನು ಹೊರಡಿಸುವುದರ ಮೂಲಕ ವಿದ್ಯಾಭ್ಯಾಸದ ಮೇಲೆ ಚರ್ಚ್‌ನ ಪ್ರಭಾವವನ್ನು ಕೊನೆಗೊಳಿಸಲು ಕ್ರಮಕೈಗೊಂಡಿತು. 1901 ರಲ್ಲಿ ಲಾ ಆಫ್ ಅಸೋಸಿಯೇಷನ್ ಮಸೂದೆಯನ್ನು ಹೊರಡಿಸಿತು. ಈ ಕಾನೂನು ಫ್ರಾನ್ಸ್‌ನಲ್ಲಿ ಯಾವ ಧಾರ್ಮಿಕ ಸಂಸ್ಥೆಯು ಸರ್ಕಾರದ ಅನುಮತಿ ಇಲ್ಲದೆ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ ಎಂದು ತಿಳಿಸಿತು. ಅನೇಕ ಧಾರ್ಮಿಕ ಸಂಸ್ಥೆಗಳು ಮುಚ್ಚಿದುದರಿಂದ ಸಾವಿರಾರು ಸಂಖ್ಯೆಯಲ್ಲಿ ಪಾದ್ರಿಗಳು ಮತ್ತು ಸನ್ಯಾಸಿಯರು ಅವುಗಳನ್ನು ತ್ಯಜಿಸಬೇಕಾಯಿತು. 1904 ರಲ್ಲಿ ಹೊರಡಿಸಿದ ಮತ್ತೊಂದು ಶಾಸನವು ಹತ್ತು ವರ್ಷಗಳಲ್ಲಿ ಎಲ್ಲಾ ರೀತಿಯ ಬೋಧನೆ ಧಾರ್ಮಿಕ ಸಂಸ್ಥೆಗಳಲ್ಲಿ ಕೊನೆಗೊಳ್ಳಬೇಕೆಂದು ತಿಳಿಸಲಾಯಿತು. ಇದರ ಪರಿಣಾಮವಾಗಿ ಸುಮಾರು 500 ಬೋಧನಾ ಮತ್ತು ಧರ್ಮೋಪದೇಶ ಮಾಡುತ್ತಿದ್ದ ಧಾರ್ಮಿಕ ಸಂಸ್ಥೆಗಳು ಮುಚ್ಚಲ್ಪಟ್ಟವು. ಒಟ್ಟಾರೆ ಕ್ರೈಸ್ತ ವಿರೋಧಿ ಶಾಸನಗಳನ್ನು ಜಾರಿಗೆ ತಂದ ಪರಿಣಾಮವೇನೆಂದರೆ 1909-10 ರಲ್ಲಿ 5000,000 ಮಕ್ಕಳು ಸಾರ್ವಜನಿಕ ಶಾಲೆಗಳಲ್ಲಿ ಓದುತ್ತಿದ್ದರೆ, ಕ್ರೈಸ್ತ ಧಾರ್ಮಿಕ ಸಂಸ್ಥೆಗಳು ನಡೆಸುತ್ತಿದ್ದ ಶಾಲೆಗಳನ್ನು ಕೇವಲ 100,000 ಮಕ್ಕಳು ಓದುತ್ತಿದ್ದರು.

### *100.5.3 ರಾಜ್ಯ ಮತ್ತು ಚರ್ಚ್ ಪ್ರತ್ಯೇಕತೆ*

1801 ರಲ್ಲಿ ಪೋಪನೊಡನೆ ನೆಪೋಲಿಯನ್ ಮಾಡಿಕೊಂಡಿದ್ದ ಕಾಂಕರ್ಡಾಟ್ (Concordat) ಒಪ್ಪಂದವನ್ನು 1905 ರಲ್ಲಿ ಮೂರನೇ ಗಣರಾಜ್ಯ ರದ್ದುಗೊಳಿಸಿತು. ಬಿಷಪ್ಪರುಗಳನ್ನು ನೇಮಕ ಮಾಡುವ ವಿಷಯದಲ್ಲಿ ಪೋಪ್ ಮತ್ತು ಗಣರಾಜ್ಯದ ನಡುವೆ

ಭಿನ್ನಾಭಿಪ್ರಾಯಗಳು ತಲೆದೋರಿದವು. ವ್ಯಾಟಿಕನ್‌ನಿಂದ ಫ್ರೆಂಚ್ ರಾಯಭಾರಿಯನ್ನು ಹಿಂದಕ್ಕೆ ಕರೆಯಿಸಿಕೊಳ್ಳಲಾಯಿತು. 1905 ರಲ್ಲಿ ಪ್ರತ್ಯೇಕತಾ ಕಾನೂನನ್ನು ಜಾರಿಗೆ ತರಲಾಯಿತು. ಪಾದ್ರಿಗಳಿಗೆ ಸರ್ಕಾರ ನೀಡುತ್ತಿದ್ದ ಸಂಬಳವನ್ನು ನಿಲ್ಲಿಸಿತು. ಆದರೆ ವೃದ್ಧರಿಗೆ ನಿವೃತ್ತಿ ವೇತನವನ್ನು ಹಾಗೂ ಯುವಕರಿಗೆ ಪರಿಹಾರ ಹಣವನ್ನು ಕೊಡುವುದರ ಮೂಲಕ ಅಸ್ತಿತ್ವದಲ್ಲಿದ್ದ ಪುರೋಹಿತ ವರ್ಗದ ರಕ್ಷಣೆಯನ್ನು ಕೈಗೊಂಡಿತು. ಚರ್ಚ್‌ಗೆ ಸಂಬಂಧಪಟ್ಟ ಎಲ್ಲ ಆಸ್ತಿಯು ಫ್ರಾನ್ಸಿನ ರೋಮನ್ ಕ್ಯಾಥೊಲಿಕ್ ಚರ್ಚ್‌ನ ವಶದಲ್ಲಿರಬೇಕೆಂದು ತಿಳಿಸಿತು. ಈ ಆಸ್ತಿಯ ನಿರ್ವಹಣೆಯನ್ನು ಸಾಮಾನ್ಯ ಜನರಿಂದ ಕೂಡಿದ್ದ 'ಅಸೋಸಿಯೇಷನ್ ಆಫ್ ವರ್ಷಿಪ್' (ಸಾರ್ವಜನಿಕ ಆರಾಧನಾ ಸಂಸ್ಥೆ) ನೋಡಿಕೊಳ್ಳಬೇಕೆಂದು ಪ್ರತ್ಯೇಕತಾ ಕಾನೂನು ತಿಳಿಸಿತು. ಈ ಪ್ರತ್ಯೇಕತಾ ಕಾನೂನನ್ನು ಹತ್ತನೆ ಪಯಸ್ ಖಂಡಿಸಿದನು. 1905 ರ ಕಾಯಿದೆಯನ್ನು ತಿರಸ್ಕರಿಸಿದನು. ಫ್ರೆಂಚ್ ಸರ್ಕಾರ ಇದಕ್ಕೆ ಪ್ರತಿಕ್ರಿಯಿಸಿ ಮತ್ತೊಂದು ಕಾಯಿದೆಯನ್ನು 1907 ರಲ್ಲಿ ಹೊರಡಿಸಿತು. 1905ರ ಕಾಯಿದೆಯಲ್ಲಿ ನೀಡಿದ್ದ ಹಲವು ಹಕ್ಕುಗಳನ್ನು ಈ ಹೊಸ ಕಾನೂನಿನಿಂದ ರದ್ದುಪಡಿಸಲಾಯಿತು. ಇದರಿಂದಾಗಿ ಫ್ರಾನ್ಸ್‌ನ ಒಳಗಡೆಯೇ ರೋಮನ್ ಕ್ಯಾಥೊಲಿಕ್ಕರಿಂದ ವಿರೋಧ ವ್ಯಕ್ತವಾಯಿತು. ಪ್ರತ್ಯೇಕತಾ ಕಾನೂನಿನ ವಿರುದ್ಧ ಅನೇಕ ಚಳುವಳಿಗಳು ನಡೆದವು. ಇಂತಹ ಪ್ರತಿಭಟನೆಗಳಿಂದ ಅತೃಪ್ತಿಗೊಂಡ ಸರ್ಕಾರವು ರೋಮನ್ ಕ್ಯಾಥೊಲಿಕ್ಕರಿಗೆ ನೀಡಿದ್ದ ಎಲ್ಲ ಸವಲತ್ತುಗಳನ್ನು ಸಂಪೂರ್ಣವಾಗಿ ರದ್ದುಪಡಿಸಿತು. ಚರ್ಚ್ ಸಾರ್ವಜನಿಕರ ಸಂಪತ್ತು, ಸಾರ್ವಜನಿಕರು ಅದನ್ನು ಆರಾಧನೆಗೆ ಬಳಸಬಹುದು ಎಂದು ತಿಳಿಸಿತು. ಆ ರೀತಿಯಾಗಿ ಚರ್ಚ್‌ನ್ನು ರಾಜ್ಯದಿಂದ ಪ್ರತ್ಯೇಕಿಸಲಾಯಿತು. ಸರ್ಕಾರ ಯಾವುದೇ ಸಂಬಳವನ್ನು ನೀಡುವ ಹಾಗಿರಲಿಲ್ಲ. ಸರ್ಕಾರ ತನ್ನ ಸಾರ್ವಭೌಮತ್ವವನ್ನು ಚರ್ಚ್ ಮೇಲೆ ಸ್ಥಾಪಿಸಿತು.

### *100.5.4 ಭೌತಿಕ ಬೆಳವಣಿಗೆ*

ರಿಪಬ್ಲಿಕನ್ನರು ಕೈಗಾರಿಕೆ, ವ್ಯವಸಾಯ ಮತ್ತು ವ್ಯಾಪಾರಕ್ಕೆ ಪ್ರೋತ್ಸಾಹ ನೀಡಿದರು. ಅವರ ಕಾಲದಲ್ಲಿ 30,000 ಕಿಲೋಮೀಟರ್ ಉದ್ದದ ಹೊಸರೈಲ್ವೆ ಮಾರ್ಗವನ್ನು ನಿರ್ಮಿಸಲಾಯಿತು. ಹಳೆಯ ಬಂದರುಗಳ ಆಳವನ್ನು ಹೆಚ್ಚಿಸುವುದರ ಮೂಲಕ ನವೀಕರಿಸಲಾಯಿತು. ಲೆ ಹಾರ್ವೆ ಮತ್ತು ನಜೈರೆಯಲ್ಲಿ ವಿಶಾಲವಾದ ಬಂದರುಗಳನ್ನು ನಿರ್ಮಿಸಲಾಯಿತು. ಪ್ಯಾರಿಸ್ ನಗರದ ವಿಸ್ತರಣೆ ಮತ್ತು ಸೌಂದರ್ಯವನ್ನು ಹೆಚ್ಚಿಸುವುದರ ಕಡೆ ಗಮನ ಹರಿಸಲಾಯಿತು. 1878, 1889 ಮತ್ತು 1900 ರಲ್ಲಿ ಪ್ಯಾರಿಸ್‌ನಲ್ಲಿ ದೊಡ್ಡ ವಸ್ತು ಪ್ರದರ್ಶನಗಳು ಏರ್ಪಟ್ಟವು. ಅಧಿಕ ಸಂಖ್ಯೆಯಲ್ಲಿದ್ದ ಕೃಷಿಕರ ಬಗ್ಗೆ ಸಂಸತ್ ಮತ್ತು ಮಂತ್ರಿಗಳು ಮೃದು ಭಾವನೆಯನ್ನು ಹೊಂದಿದ್ದರು. ಸರ್ಕಾರವು ಕೃಷಿಕರಿಂದ ಅನೇಕ ತೆರಿಗೆಗಳನ್ನು ವಸೂಲಿ ಮಾಡುತ್ತಿದ್ದರೂ, ಅವರಿಗೆ ಸಹಾಯ ಹಸ್ತ ಚಾಚುವುದನ್ನು ಮರೆಯಲಿಲ್ಲ. ದ್ರಾಕ್ಷಿ ಬೆಳೆಗಾರರಿಗೆ ಹಣದ ಸಹಾಯವನ್ನು ನೀಡಿದರು. ರೇಷ್ಮೆ, ಅಗಸೆ ಮತ್ತು ಸೆಣಬಿನ ಕೃಷಿಗಾಗಿ ಸರ್ಕಾರ ಪ್ರೋತ್ಸಾಹ ಹಣ ನೀಡಿತು. ಕುದುರೆಯ ಸಾಗಾಣಿಕೆಗಾಗಿಯು ಕೂಡ ಪ್ರೋತ್ಸಾಹ ಧನ ನೀಡಿತು. ರೈತರು ತಾವು ಬೆಳೆದುದನ್ನು ಮಾರಾಟ ಮಾಡಲು ಮತ್ತು ಬೇಕಾದ ಸಹಾಯಧನಗಳನ್ನು ಕೊಂಡುಕೊಳ್ಳಲು ಅನುಕೂಲವಾಗುವಂತೆ ರೈತರ ಸಹಕಾರ ಸಂಘಗಳನ್ನು ಸರ್ಕಾರ ಪ್ರೋತ್ಸಾಹ ನೀಡಿತು. ಭೂಮಾಲೀಕರಿಗೆ ಸಹಾಯ ಮಾಡಲು ಸರ್ಕಾರದ ಭದ್ರತೆಯ ಆಧಾರದ ಮೇಲೆ ಪರಸ್ಪರ ಸಾಲ ನೀಡುವ ಬ್ಯಾಂಕ್‌ಗಳನ್ನು (Mutual Loan Banks) ಮತ್ತು ವಿಮಾ ನಿಯೋಗಗಳನ್ನು ಸ್ಥಾಪಿಸಲಾಯಿತು (1894). ವ್ಯವಸಾಯ ಶಾಲೆಗಳನ್ನು ಸ್ಥಾಪಿಸಿ ಅವುಗಳಿಗೆ ಸಹಾಯಧನ ನೀಡಿತು. 1885 ರ ಕಾನೂನಿನ ಪ್ರಕಾರ ಕೃಷಿಗೆ ಇನ್ನೂ ಹೆಚ್ಚಿನ ಸುಂಕ ರಕ್ಷಣೆ ನೀಡಲಾಯಿತು. ಇಂತಹ ಸುಂಕ ರಕ್ಷಣಾ ನೀತಿಯ ಪರಿಣಾಮವೇನೆಂದರೆ ಅಧಿಕ ಸಂಖ್ಯೆಯಲ್ಲಿ ರೈತರು, ವಿಶೇಷವಾಗಿ ಮಧ್ಯ ಮತ್ತು ದಕ್ಷಿಣ ಫ್ರಾನ್ಸಿನ ರೈತರು ಗಣರಾಜ್ಯಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದರು. ದೇಶದ ವ್ಯವಸಾಯೋತ್ಪನ್ನದ ಮೌಲ್ಯ 1800 ಮತ್ತು 1860 ರ ನಡುವೆ ನಾಲ್ಕು ಬಿಲಿಯನ್ ಫ್ರಾಂಕ್‌ಗಳಿಂದ 6 ಬಿಲಿಯನ್ ಫ್ರಾಂಕ್‌ಗಳಿಗೇರಿತು. 1913 ರ ವೇಳೆಗೆ ಈ ಮೌಲ್ಯ ಹನ್ನೊಂದು ಬಿಲಿಯನ್ ಮೀರಿತು.

ಮೂರನೇ ಗಣರಾಜ್ಯದ ಆಳ್ವಿಕೆಯ ಕಾಲದಲ್ಲಿ ಕೃಷಿ ಕ್ಷೇತ್ರದಲ್ಲಿ ಉಂಟಾದ ಪ್ರಗತಿಯಂತೆ, ಫ್ರಾನ್ಸಿನ ಯಂತ್ರ ಕೈಗಾರಿಕೆ ಮತ್ತು ನಗರಗಳ ಬೆಳವಣಿಗೆಯಲ್ಲಿಯೂ ಇನ್ನೂ ಗಮನಾರ್ಹ ಸಾಧನೆಯಾಯಿತು. ಅಶ್ವ ಶಕ್ತಿಗೆ ಸಂಬಂಧಿಸಿದಂತೆ ಯಂತ್ರಗಳು ಕಾರ್ಖಾನೆಗಳಲ್ಲಿ ಹತ್ತುಪಟ್ಟು ಅಧಿಕಗೊಂಡವು. ಕಲ್ಲಿದ್ದಲು ಗಣಿಯ ಉತ್ಪಾದನೆ ದ್ವಿಗುಣಗೊಂಡಿತು. ಲೋಹ ಕರಗಿಸುವ ಕುಲುಮೆ ಆರುಪಟ್ಟು ಹೆಚ್ಚಾಯಿತು. ಫ್ರಾನ್ಸಿನ ಸಿದ್ಧವಸ್ತುಗಳನ್ನು ಪ್ರಮುಖವಾಗಿ ದೇಶೀಯ ಮಾರುಕಟ್ಟೆಗೋಸ್ಕರ ತಯಾರಿಸಲ್ಪಟ್ಟಿದ್ದರೂ, ಉತ್ಪಾದನೆಯ ಶೇ.25 ರಷ್ಟನ್ನು ರಫ್ತು ಮಾಡಲಾಗುತ್ತಿತ್ತು.

ಫ್ರಾನ್ಸ್‌ನಲ್ಲಿ ಬಂಡವಾಳದ ಸಂಗ್ರಹಣೆಯು ಕೂಡ ಹೆಚ್ಚಾಯಿತು. ಈ ಹೆಚ್ಚಳ ಮುಖ್ಯವಾಗಿ ಕೈಗಾರಿಕೋದ್ಯಮದಿಂದ ಬಂದ ಲಾಭ ಮತ್ತು ಭಾಗಶಃ ರೈತರ, ಕರಕುಶಲ ಕೆಲಸಗಾರರ ಮತ್ತು ಅಂಗಡಿ ಮಾಲೀಕರ ಉಳಿತಾಯದಿಂದ ಕೂಡಿ ಹಾಕಿದ್ದ ಬಂಡವಾಳವಾಗಿತ್ತು. ಫ್ರೆಂಚ್ ನಾಗರೀಕರು ತಮ್ಮ ಹಣವನ್ನು ತಮ್ಮ ದೇಶದ ಸರ್ಕಾರಿ ಬಾಂಡ್‌ಗಳಲ್ಲಿ ಹೂಡಿದ್ದರು ಮತ್ತು ವಿದೇಶಿ ಬಾಂಡ್‌ಗಳಲ್ಲಿ ತೊಡಗಿಸಿದ್ದರು. ಈ ಕಾಲದಲ್ಲಿ ಗ್ರೇಟ್ ಬ್ರಿಟನ್ ಮತ್ತು ಜರ್ಮನಿಯೊಡನೆ ಹೋಲಿಸಿದಾಗ ಫ್ರಾನ್ಸ್ ಹಿಂದುಳಿದ ರಾಷ್ಟ್ರವಾಗಿ ಕಾಣಬೇಕಾದರೆ ಕಾರಣವೇನೆಂದರೆ ಫ್ರಾನ್ಸಿನ ಜನತೆ ತಮ್ಮ ಹಣವನ್ನು ವ್ಯವಹಾರಗಳಲ್ಲಿ ತೊಡಗಿಸುವುದರ ಬದಲು ಸರ್ಕಾರಿ ಭದ್ರತಾ ಠೇವಣಿಗಳಲ್ಲಿ ತೊಡಗಿಸಿದ್ದುದು. ಪ್ರಪಂಚದಲ್ಲೇ ಫ್ರಾನ್ಸ್ ಹೆಚ್ಚು ಸಾರ್ವಜನಿಕ ಸಾಲದ ಹೊರೆಯನ್ನು ಹೊಂದಿದ್ದ ರಾಷ್ಟ್ರವಾಗಿತ್ತು. ಎಲ್ಲ ಸಾಲವನ್ನು ಕೂಡ ಫ್ರಾನ್ಸ್ ತನ್ನ ರಾಷ್ಟ್ರದ ಜನತೆಗೆ ನೀಡಬೇಕಾಗಿತ್ತು. ರಾಷ್ಟ್ರದ ಪಿಂಚಣಿದಾರರು ಬಡ್ಡಿಯ ರೂಪದಲ್ಲಿ ಈ ಹಣವನ್ನು ಪಡೆಯುತ್ತಿದ್ದರು.

### *100.5.5 ವಸಾಹತುಗಳ ವಿಸ್ತರಣೆ*

ಇಂಗ್ಲೆಂಡ್‌ನ ನಂತರ ಫ್ರಾನ್ಸ್ ಒಂದು ದೊಡ್ಡ ವಸಾಹತುಶಾಹಿ ರಾಷ್ಟ್ರವಾಗಿ ಹೊರಹೊಮ್ಮಿದುದು ಮೂರನೇ ಗಣರಾಜ್ಯದ ಮತ್ತೊಂದು ಸಾಧನೆ. ಮೂರನೇ ಗಣರಾಜ್ಯ ಅಧಿಕಾರಕ್ಕೆ ಬಂದಾಗ ಹದಿನೆಂಟನೆ ಶತಮಾನದ ಫ್ರಾನ್ಸಿನ ಸಾಮ್ರಾಜ್ಯದ ಅಳಿದುಳಿದ ವಸಾಹತುಗಳಾದ ಅಲ್ಜೀರಿಯ, ವೆಸ್ಟ್ ಇಂಡೀಸ್‌ನ ಕೆಲವು ದ್ವೀಪಗಳು, ಹಿಂದೂ ಮಹಾಸಾಗರದ ರಿಯೂನಿಯನ್ ದ್ವೀಪ, ಭಾರತದಲ್ಲಿ ವ್ಯಾಪಾರಕ್ಕೆ ಸಂಬಂಧಿಸಿದ ಐದು ಬಂದರುಗಳು, ದಕ್ಷಿಣ ಅಮೆರಿಕಾದಲ್ಲಿ ಗಯಾನದ ಒಂದು ಭಾಗ, ಆಫ್ರಿಕಾದ ಸೆನಗಲ್ ತೀರಪ್ರದೇಶದ ಸ್ವಲ್ಪಭಾಗ ಅದರ ವಶದಲ್ಲಿದ್ದವು.

ವಸಾಹತು ನೀತಿಗೆ ಸಂಬಂಧಿಸಿದಂತೆ ಫ್ರೆಂಚ್ ಗಣರಾಜ್ಯ ಆಕ್ರಮಣ ನೀತಿಯನ್ನನುಸರಿಸಿತು. ಈ ಕಾಲ ಸಾಮ್ರಾಜ್ಯ ವಿಸ್ತರಣೆಯ ಯುಗವಾಗಿತ್ತು. ಫ್ರಾನ್ಸ್ ವಸಾಹತುಗಳನ್ನು ಸ್ಥಾಪಿಸುವ ಪೈಪೋಟಿಯಲ್ಲಿ ಹಿಂದೆ ಬೀಳಲು ಇಷ್ಟಪಡಲಿಲ್ಲ. ಜೂಲ್ಸ್‌ಪೆರ್ರಿ ಮತ್ತು ಅವನ ಮಂದಗಾಮಿ ಸ್ನೇಹಿತರು ವಸಾಹತು ನೀತಿಯನ್ನು ಚುರುಕುಗೊಳಿಸುವ ನಿರ್ಧಾರವನ್ನು ತೆಗೆದುಕೊಂಡರು. ಜೂಲ್ಸ್ ಪೆರ್ರಿ 'ಹೊಸ ಸಾಮ್ರಾಜ್ಯ'ದ ಹೋರಾಟದ ಮುಂದಾಳುವಾದನು. 1881 ರಲ್ಲಿ ಅವನು ಪ್ರಧಾನಮಂತ್ರಿಯಾಗಿದ್ದಾಗ ಅಲ್ಜೀರಿಯಾದ ಪಕ್ಕದಲ್ಲಿದ್ದ ಟುನಿಸ್ ತೊಂದರೆಗೊಳಗಾಗಿದ್ದಾಗ ಅದರ ಸಹಾಯಕ್ಕಾಗಿ ಒಂದು ಫ್ರೆಂಚ್ ಸೈನ್ಯವನ್ನು ಕಳುಹಿಸಿದನು. ಅಂತಿಮವಾಗಿ ಟುನಿಸ್ ಫ್ರಾನ್ಸಿನ ಆಶ್ರಿತ ಸಂಸ್ಥಾನವಾಯಿತು. ಅವನು ಪುನಃ 1883-1885 ರಲ್ಲಿ ಪ್ರಧಾನಮಂತ್ರಿಯಾದಾಗ ಮತ್ತೊಂದು ದಂಡೆಯಾತ್ರೆಯನ್ನು ದೂರ ಪ್ರಾಚ್ಯಕ್ಕೆ ಕಳುಹಿಸಿದನು. ಫ್ರೆಂಚ್ ಸೈನ್ಯ ಚೀನಾದ ಮೇಲೆ ಒತ್ತಡ ಹೇರಿ ಅದರ ಅಧೀನದಲ್ಲಿದ್ದ ಇಂಡೋ-ಚೀನಾ, ಅನ್ನಾಮ್ ಮತ್ತು ಟೋನ್‌ಕಿನ್‌ಗಳನ್ನು ತನ್ನ ಆಶ್ರಯ ಸಂಸ್ಥಾನಗಳನ್ನಾಗಿ ಮಾಡಿಕೊಂಡಿತು. ಅದೇ ರೀತಿ ಹಿಂದೂ ಮಹಾಸಾಗರದಲ್ಲಿದ್ದ ಮಡಗಾಸ್ಕರನ ರಾಜನನ್ನು ಹೆದರಿಸಿ ಜೂಲ್ಸ್ ಪೆರ್ರಿಯು ಅದನ್ನು ಫ್ರೆಂಚ್‌ನ ಆಶ್ರಿತ ಪ್ರದೇಶವನ್ನಾಗಿ ಮಾಡಿಕೊಂಡನು. ಆಫ್ರಿಕಾದ ತೀರ ಪ್ರದೇಶದಲ್ಲಿದ್ದ ಸೋಮಾಲಿ ಲ್ಯಾಂಡ್‌ನ ಒಂದು ಭಾಗವನ್ನು ತನ್ನ ಅಧೀನಕ್ಕೊಳಪಡಿಸಿಕೊಂಡನು. ಸಹರಾ ಮತ್ತು ಪಶ್ಚಿಮ ಸೂಡಾನ್‌ನಲ್ಲಿ ವಿಶಾಲವಾದ

ಭೂಪ್ರದೇಶಗಳನ್ನು ಮಾಡಿ, ಈ ಪ್ರದೇಶಗಳನ್ನು ಉತ್ತರದಲ್ಲಿ ಅಲ್ಜೀರಿಯಾ ಮತ್ತು ಟುನಿಸ್‌ಗಳೊಡನೆ, ದಕ್ಷಿಣದಲ್ಲಿ ಕಾಂಗೊ, ನೈಜಿರ್ ಮತ್ತು ಸೆನೆಗಲ್‌ಗಳೊಡನೆ ಸೇರಿಸಲಾಯಿತು. ಆಫ್ರಿಕಾದ ಪಶ್ಚಿಮ ತೀರಪ್ರದೇಶದಲ್ಲಿದ್ದ ನೀಗ್ರೊ ರಾಜ್ಯ ದಹೊಮಿ (Dahomey) ರಾಜ್ಯವನ್ನು 1892 ರಲ್ಲಿ ಗೆದ್ದುಕೊಳ್ಳಲಾಯಿತು. 1896 ರಲ್ಲಿ ಮಡಗಾಸ್ಕರ್‌ನಲ್ಲಿ ದಂಗೆ ಉಂಟಾದಾಗ ಅದನ್ನು ಅಡಗಿಸಿ ಇದುವರೆಗೆ ಫ್ರೆಂಚರ ಆಶ್ರಿತ ಪ್ರದೇಶವಾಗಿದ್ದ ಆ ದ್ವೀಪವನ್ನು ಫ್ರೆಂಚರ ವಸಾಹತುವನ್ನಾಗಿ ಪರಿವರ್ತಿಸಿಕೊಳ್ಳಲಾಯಿತು. 1912 ರಲ್ಲಿ ಮೆಕ್ಸಿಕೊದ ಬಹುಭಾಗವನ್ನು ಫ್ರೆಂಚರ ಆಶ್ರಿತ ಪ್ರದೇಶವನ್ನಾಗಿ ಮಾಡಿಕೊಳ್ಳಲಾಯಿತು.

1913 ರ ವೇಳೆಗೆ ರಿಪಬ್ಲಿಕನ್ ಫ್ರಾನ್ಸ್‌ನ 'ಸಾಮ್ರಾಜ್ಯ' 1871 ಕ್ಕಿಂತ ಮೊದಲು ಚೆಲ್ಲಾಪಿಲ್ಲಿಯಾಗಿದ್ದ ಸಣ್ಣ ಪುಟ್ಟ ವಸಾಹತುಗಳ ಜೊತೆಗೆ ಗೆದ್ದುಕೊಂಡ ಇಂಡೋ-ಚೀನ, ಮಡಗಾಸ್ಕರ್, ಆಫ್ರಿಕಾದಲ್ಲಿ ಅಲ್ಜೀರಿಯ, ಟುನಿಸಿಯ, ಮೊರೊಕ್ಕೊ, ಫ್ರೆಂಚ್ ಪಶ್ಚಿಮ ಆಫ್ರಿಕಾ, ಮತ್ತು ಫ್ರೆಂಚ್ ಈಕ್ವಟೋರಿಯಲ್ ಆಫ್ರಿಕಾ ಎಂಬ ಐದು ಆಡಳಿತ ವಿಭಾಗಗಳಿಂದ ಕೂಡಿದ್ದ ವಿಶಾಲ ಪ್ರದೇಶಗಳನ್ನು ಹೊಂದಿತ್ತು. (ಫ್ರಾನ್ಸ್‌ನ ಭೂವಿಸ್ತೀರ್ಣಕ್ಕಿಂತ ಹದಿನಾಲ್ಕು ಪಟ್ಟು ಹೆಚ್ಚಾಗಿತ್ತು).

ತನ್ನ ಸಮುದ್ರದಾಚೆಗಿದ್ದ ಸಾಮ್ರಾಜ್ಯದಿಂದ ವಿಶೇಷವಾಗಿ ಫ್ರಾನ್ಸ್‌ನ ಕೈಗಾರಿಕೋದ್ಯಮಿಗಳು ಮತ್ತು ಬಂಡವಾಳಗಾರರು ಹೆಚ್ಚಿನ ಅನುಕೂಲವನ್ನು ಪಡೆದುಕೊಂಡರು. ವಸಾಹತುಗಳು ಫ್ರಾನ್ಸ್‌ನಿಂದ ಆಮದು ಮಾಡಿಕೊಳ್ಳುತ್ತಿದ್ದ ಸರಕುಗಳ ಮೇಲೆ ಸುಂಕವನ್ನು ಹಾಕುವ ಹಾಗಿರಲಿಲ್ಲ. ಆದರೆ ಈ ವಸಾಹತುಗಳು ಫ್ರಾನ್ಸಿನ ಉತ್ಪಾದನೆಗಳಿಗೆ, ವ್ಯಾಪಾರಕ್ಕೆ ಮತ್ತು ಬಂಡವಾಳ ಹೂಡಿಕೆಗೆ ಆದ್ಯತೆ ನೀಡಬೇಕಾಗಿತ್ತು. ಫ್ರಾನ್ಸ್ ಮತ್ತು ಅದರ ವಸಾಹತುಗಳ ನಡುವಿನ ವ್ಯಾಪಾರ ವಹಿವಾಟಿನ ಮೌಲ್ಯ 350 ಮಿಲಿಯನ್ ಫ್ರಾಂಕ್ಸ್ ಇತ್ತು. ಅದು 1913 ರ ವೇಳೆಗೆ ಎರಡು ಬಿಲಿಯನ್‌ಗೆ ಏರಿತು. ಈ ರೀತಿಯಾಗಿ ವಸಾಹತುಗಳು ಫ್ರಾನ್ಸ್‌ಗೆ ಹಣಕಾಸಿನ ಮತ್ತು ನೈತಿಕ ಆಸ್ತಿಯಾಗಿ ಉಳಿದುಕೊಂಡಿದ್ದವು.

## 100.6 ವಿದೇಶಾಂಗ ನೀತಿ

ಬಿಸ್ಮಾರ್ಕನ ಏಳಿಗೆ ಯೂರೋಪಿನಲ್ಲಿ ಇನ್ನಿತರ ರಾಷ್ಟ್ರಗಳ ಪ್ರಭಾವವನ್ನು ಕುಂಠಿತಗೊಳಿಸಿತು. 1871 ರ ನಂತರ ಯೂರೋಪಿನ ರಾಜಕೀಯದಲ್ಲಿ ಬಿಸ್ಮಾರ್ಕನದೇ ಪ್ರಮುಖ ಪಾತ್ರವಾಯಿತು. ಬಿಸ್ಮಾರ್ಕನು ಅಲ್ಸೇಸ್ ಮತ್ತು ಲೊರೈನ್ ಪ್ರಾಂತ್ಯಗಳನ್ನು ಫ್ರಾನ್ಸ್‌ನಿಂದ ಕಿತ್ತುಕೊಂಡಿದ್ದುದರಿಂದ ಅದರ ಬಗ್ಗೆ ಅವನಿಗೆ ಭಯ ಕಾಡಲಾರಂಭಿಸಿತು. ಫ್ರೆಂಚರು ಕೂಡ ತಮ್ಮ ಪ್ರಾಂತ್ಯಗಳನ್ನು ಕಳೆದುಕೊಂಡಿದ್ದುದರಿಂದ ಜರ್ಮನಿಯ ವಿರುದ್ಧ ಸೇಡಿನ ಭಾವನೆ ಹೊಂದಿದ್ದರು. ಫ್ರಾನ್ಸ್ ಜರ್ಮನಿಯ ವಿರುದ್ಧ ಸೇಡಿನ ಯುದ್ಧವನ್ನು ಕೈಗೊಳ್ಳದಂತೆ ಮಾಡಲು ಬಿಸ್ಮಾರ್ಕನು ರಾಜತಾಂತ್ರಿಕ ಕ್ರಮಗಳನ್ನು ಕೈಗೊಂಡನು. ಅನೇಕ ಒಕ್ಕೂಟಗಳನ್ನು ರಚಿಸುವುದರ ಮೂಲಕ ಫ್ರಾನ್ಸನ್ನು ಏಕಾಂಗಿಯನ್ನಾಗಿ ಮಾಡಿದನು. ಆದರೆ ಬಿಸ್ಮಾರ್ಕನು 1890 ರಲ್ಲಿ ರಾಜೀನಾಮೆ ನೀಡಿದ ನಂತರ ಫ್ರಾನ್ಸ್ ಪ್ರತ್ಯೇಕತೆಯಿಂದ ಹೊರಬರಲು ಅನೇಕ ಕ್ರಮಗಳನ್ನು ತೆಗೆದುಕೊಂಡಿತು. ಅದು ಪ್ರಮುಖವಾಗಿ ಇಂಗ್ಲೆಂಡ್ ಮತ್ತು ಇಟಲಿಯೊಡನೆ ಸೌಹಾರ್ದತೆಯ ನೀತಿಯನ್ನು ಅನುಸರಿಸಬೇಕೆಂದು ತೀರ್ಮಾನಿಸಿತು.

### *100.6.1 ಫ್ರಾನ್ಸ್ ಮತ್ತು ರಷ್ಯಾ ನಡುವಣ ಮೈತ್ರಿ ಕೂಟ (1893)*

1890 ರಲ್ಲಿ ಬಿಸ್ಮಾರ್ಕನು ರಾಜೀನಾಮೆ ಸಲ್ಲಿಸಿದ ನಂತರ ಜರ್ಮನಿಯ ಚಕ್ರವರ್ತಿ ಎರಡನೆಯ ವಿಲಿಯಂನು 1887 ರಲ್ಲಿ ರಷ್ಯಾದೊಡನೆ ಮಾಡಿಕೊಂಡಿದ್ದ ರೀಇನ್ಸುರೆನ್ಸ್ ಒಪ್ಪಂದವನ್ನು ನವೀಕರಿಸಲಿಲ್ಲ. ಇದರಿಂದ ಏಕಾಂಗಿಯಾದ ರಷ್ಯಾಕ್ಕೆ ಮಿತ್ರ ರಾಷ್ಟ್ರದ ಅವಶ್ಯಕತೆ ಉಂಟಾಯಿತು. ಇದುವರೆಗೆ ಏಕಾಂಗಿಯಾಗಿದ್ದ ಫ್ರಾನ್ಸ್ ಮಿತ್ರ ರಾಷ್ಟ್ರವನ್ನು ಸಂಪಾದಿಸಲು ಕಾತುರವಾಗಿತ್ತು. ರಾಜಕೀಯ ಮತ್ತು ಆರ್ಥಿಕ ಕಾರಣಗಳಿಂದಾಗಿ ರಷ್ಯ ಫ್ರಾನ್ಸ್‌ನೊಡನೆ ಮೈತ್ರಿಕೂಟ ಮಾಡಿಕೊಳ್ಳಲು

ಇಚ್ಛಿಸಿತು. ರಷ್ಯಾದ ಜಾರ್ ಮೂರನೆಯ ಅಲೆಗ್ಸಾಂಡರ್‌ನು ಫ್ರೆಂಚ್ ಪ್ರಜಾಪ್ರಭುತ್ವದ ಬಗ್ಗೆ ಹೊಂದಿದ್ದ ತನ್ನ ತಿರಸ್ಕಾರದ ಭಾವನೆಯನ್ನು ನುಂಗಿಕೊಂಡು, ಫ್ರಾನ್ಸ್‌ನೊಡನೆ ಮೈತ್ರಿಯನ್ನು ಮಾಡಿಕೊಂಡನು. 1891 ರಲ್ಲಿ ರಷ್ಯನ್ ಸರ್ಕಾರದ ಆಮಂತ್ರಣದ ಮೇರೆಗೆ ಕ್ರೋನ್‌ಸ್ಟಾಟ್ (Kronsradt) ಎಂಬ ಫ್ರೆಂಚ್ ನೌಕೆಯು ರಷ್ಯಾಕ್ಕೆ ಭೇಟಿಕೊಟ್ಟಿತು. 1891 ರಲ್ಲಿ ಜಾರನು ಫ್ರಾನ್ಸಿಗೆ ಭೇಟಿ ನೀಡಿದನು. 1893 ರಲ್ಲಿ ರಷ್ಯನ್ ನೌಕಾಪಡೆಯು ಫ್ರಾನ್ಸಿಗೆ ಭೇಟಿ ನೀಡಿತು. ಇವುಗಳೆಲ್ಲದರ ಫಲವಾಗಿ 1893 ರ ಡಿಸೆಂಬರ್ 31 ರಂದು ಫ್ರಾನ್ಸ್ ಮತ್ತು ರಷ್ಯಾಗಳ ನಡುವೆ ಸೈನಿಕ ಒಪ್ಪಂದ ಏರ್ಪಟ್ಟಿತು. ಈ ಒಪ್ಪಂದದ ಪ್ರಕಾರ

(1) ಜರ್ಮನಿಯೊಂದೇ ಅಥವಾ ಜರ್ಮನಿಯ ಬೆಂಬಲ ಪಡೆದ ಇಟಲಿಯು ಫ್ರಾನ್ಸಿನ ಮೇಲೆ ಆಕ್ರಮಣವೆಸಗಿದರೆ ರಷ್ಯಾವು ಜರ್ಮನಿಯೊಡನೆ ಯುದ್ಧ ಮಾಡಬೇಕಿತ್ತು.

(2) ಜರ್ಮನಿ ಇಲ್ಲವೆ ಆಸ್ಟ್ರಿಯಾದ ಬೆಂಬಲ ಪಡೆದ ಜರ್ಮನಿಯು ರಷ್ಯಾದ ಮೇಲೆ ದಾಳಿ ಮಾಡಿದರೆ ಫ್ರಾನ್ಸ್ ಜರ್ಮನಿಯ ವಿರುದ್ಧ ಯುದ್ಧ ಮಾಡಬೇಕಾಗಿತ್ತು.

ಈ ಒಪ್ಪಂದವು ರಹಸ್ಯವಾಗಿತ್ತು. 1895 ರಲ್ಲಿ ಈ ಮೈತ್ರಿಕೂಟವು ಜಗತ್ತಿನ ಗಮನಕ್ಕೆ ಬಂತು.

ರಷ್ಯಾದೊಡನೆ ಸೈನಿಕ ಮೈತ್ರಿಕೂಟವನ್ನು ಮಾಡಿಕೊಂಡಿದ್ದ (1894) ಫ್ರಾನ್ಸ್ ಇಂಗ್ಲೆಂಡಿನೊಡನೆ ಮೈತ್ರಿ ಬೆಳೆಸಲು ನಿರ್ಧರಿಸಿತು. ಈ ಎರಡು ರಾಷ್ಟ್ರಗಳ ನಡುವೆ ಹಲವು ಭಿನ್ನಾಭಿಪ್ರಾಯಗಳಿದ್ದವು. 1898 ರ ಫಷೋಡ ಘಟನೆಯು (Fashoda Incident) ಫ್ರಾನ್ಸ್ ಮತ್ತು ಇಂಗ್ಲೆಂಡ್‌ಗಳನ್ನು ಯುದ್ಧದ ಅಂಚಿಗೆ ತಳ್ಳಿತ್ತು. ಫ್ರೆಂಚ್ ಸೈನ್ಯ ಫಷೋಡವನ್ನು ಆಕ್ರಮಿಸಿ ಫ್ರೆಂಚ್ ತ್ರಿವರ್ಣ ಧ್ವಜವನ್ನು ಹಾರಿಸಿತು. ಇಂಗ್ಲಿಷ್ ಸೇನಾಪತಿ ಕಿಚನರ್ ಆಸ್ಥಳಕ್ಕೆ ಧಾವಿಸಿದನು. ಆಂಗ್ಲರ ದೃಢ ನಿರ್ಧಾರವನ್ನು ಕಂಡು ಫ್ರೆಂಚರು ಫಷೋಡದಿಂದ ಹಿಮ್ಮೆಟ್ಟಿದರು. ಆಗ ಸಂಭವನೀಯ ಯುದ್ಧ ತಪ್ಪಿತು. ಇದರಿಂದ ಫ್ರಾನ್ಸ್ ಮತ್ತು ಇಂಗ್ಲೆಂಡ್‌ನ ನಡುವೆ ಸೌಹಾರ್ದಯುತ ತಿಳುವಳಿಕೆಗೆ ದಾರಿ ಸುಗಮವಾಯಿತು. ಇಂಗ್ಲೆಂಡಿಗೂ ಜರ್ಮನಿಯ ಆರ್ಭಟದಿಂದಾಗಿ ಮಿತ್ರರಾಷ್ಟ್ರದ ಅವಶ್ಯಕತೆ ಇತ್ತು. ಆದ್ದರಿಂದ ಅದು 1902 ರಲ್ಲಿ ದೂರಪ್ರಾಚ್ಯದಲ್ಲಿ ಜಪಾನಿನೊಡನೆ ಮಾಡಿಕೊಂಡಿತು. ಯೂರೋಪಿನಲ್ಲಿ 1904 ರಲ್ಲಿ ಫ್ರಾನ್ಸ್‌ನೊಡನೆ ಒಪ್ಪಂದವೇರ್ಪಟ್ಟಿತು. (Entente Cordiale).

1904 ರ ಆಂಗ್ಲೋ-ಫ್ರೆಂಚ್ ಒಪ್ಪಂದ (ಸಖ್ಯ) ಫ್ರಾನ್ಸಿನ ವಿದೇಶಾಂಗ ಮಂತ್ರಿ ಡಿ ಕ್ಯಾಸ್ಸಿಯ ಸಾಧನೆಯಾಗಿತ್ತು. ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳು ಆಫ್ರಿಕಾದಲ್ಲಿನ ತಮ್ಮ ಹಿತಾಸಕ್ತಿಗಳ ಬಗ್ಗೆ ಇದ್ದ ಘರ್ಷಣೆಯನ್ನು ನಿವಾರಿಸಲು ಒಂದು ಒಡಂಬಡಿಕೆ (entente) ಗೆ ಬಂದವು. ಈಜಿಪ್ಟ್ ಮತ್ತು ಸೂಡಾನ್‌ಗಳಲ್ಲಿ ಇಂಗ್ಲೆಂಡಿಗೆ ಮುಕ್ತಹಸ್ತ ಇರಬೇಕೆಂದೂ, ಮೊರಕ್ಕೊದಲ್ಲಿ ಫ್ರಾನ್ಸಿಗೆ ವಿಶೇಷ ಸ್ಥಾನಮಾನ ಇರಬೇಕೆಂದೂ ಎರಡು ರಾಷ್ಟ್ರಗಳು ಒಪ್ಪಿಕೊಂಡವು.

### 100.6.2 *ಆಂಗ್ಲೊ-ಫ್ರೆಂಚ್ ಆಂತಾಂತ್ (1904) (Anglo-French Entente)*

ಮೇಲೆ ವಿವರಿಸಿದಂತೆ ಫ್ರಾನ್ಸ್ ತನ್ನ ಏಕಾಂಗಿತನವನ್ನು ಕೊನೆಗೊಳಿಸಿ ಯೂರೋಪಿನ ಇತರ ರಾಷ್ಟ್ರಗಳೊಡನೆ ಒಪ್ಪಂದಗಳನ್ನು ಮಾಡಿಕೊಳ್ಳಲು ಪ್ರಯತ್ನ ನಡೆಸಿತು. ವಸಾಹತುಗಳಿಗೆ ಸಂಬಂಧಿಸಿದಂತೆ ಅನೇಕ ವರ್ಷಗಳಿಂದ ಇಟಲಿ ಮತ್ತು ಇಂಗ್ಲೆಂಡ್‌ನೊಡನೆ ಫ್ರಾನ್ಸ್ ಮನಸ್ತಾಪ ಹೊಂದಿತ್ತು. ಈ ಮನಸ್ತಾಪವನ್ನು ಕೊನೆಗೊಳಿಸುವ ದೃಷ್ಟಿಯಿಂದ ಇಟಲಿಗೆ ಅನುಕೂಲಕರವಾಗುವಂತಹ ಒಂದು ವಾಣಿಜ್ಯ ಒಪ್ಪಂದವನ್ನು ಮಾಡಿಕೊಂಡಿತು. ಅದೇ ರೀತಿ ಇಟಲಿಗೆ ಟ್ರಿಪೋಲಿಯಲ್ಲಿ ಮುಕ್ತ ಅವಕಾಶ ನೀಡವುದಾಗಿ ಫ್ರಾನ್ಸ್ ಒಪ್ಪಿಕೊಂಡಿತು. ಫ್ರಾನ್ಸ್‌ಗೆ ಮೊರಕ್ಕೊದಲ್ಲಿ ಮುಕ್ತ ಅವಕಾಶ ನೀಡುವುದಕ್ಕೆ ಇಟಲಿ ಒಪ್ಪಿಕೊಂಡಿತು.

### 100.6.3 ಅಲ್ಜಿ ಸಿರಾಸ್ ಸಮ್ಮೇಳನ (Conference of Alge Ciras ) (1906)

ಮೊರಕ್ಕೊ ಉತ್ತರ ಆಫ್ರಿಕದಲ್ಲಿನ ಒಂದು ಸ್ವತಂತ್ರ ಮುಸ್ಲಿಂ ರಾಜ್ಯವಾಗಿತ್ತು. ಮೊರಕ್ಕೊದ ದೌರ್ಬಲ್ಯವನ್ನು ತಮ್ಮ ತಮ್ಮ ಸ್ವಾರ್ಥಕ್ಕಾಗಿ ಫ್ರಾನ್ಸ್ ಮತ್ತು ಜರ್ಮನಿ ಬಳಸಲೆತ್ನಿಸಿದವು. ಇಂಗ್ಲೆಂಡ್ ಮತ್ತು ಫ್ರಾನ್ಸ್ ಮೊರಕ್ಕೊಗೆ ಸಂಬಂಧಿಸಿದಂತೆ 1904 ರಲ್ಲಿ ಮಾಡಿಕೊಂಡ ಒಂದು ಒಪ್ಪಂದದ ಪ್ರಕಾರ (Entente) ಮೊರಕ್ಕೊದಲ್ಲಿ ಫ್ರಾನ್ಸ್‌ಗೆ ಮುಕ್ತ ಅವಕಾಶ ನೀಡಲಾಯಿತು. ಆದರೆ ಜರ್ಮನಿ ಇದಕ್ಕೆ ತನ್ನ ವಿರೋಧವನ್ನು ವ್ಯಕ್ತಪಡಿಸಿತು. ಈ ಸಮಸ್ಯೆಯ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಾಗ ತನ್ನೊಡನೆಯು ಸಮಾಲೋಚನೆ ನಡಸಬೇಕಾಗಿತ್ತೆಂದು ತಿಳಿಸಿತು. ಜರ್ಮನಿಯ ನಿಲುವು ಒಂದು ಅಂತರರಾಷ್ಟ್ರೀಯ ಬಿಕ್ಕಟ್ಟಿಗೆ ಕಾರಣವಾಯಿತು. ಇದನ್ನು ಮೊದಲನೆಯ ಮೊರಕ್ಕೊ ಬಿಕ್ಕಟ್ಟು ಎಂದು ಕರೆಯಲಾಗಿದೆ (1905). ಆದ್ದರಿಂದ ಈ ಬಿಕ್ಕಟ್ಟನ್ನು ಪರಿಹರಿಸಲು ದಕ್ಷಿಣದ ಸ್ಪೆಯಿನ್‌ನಲ್ಲಿ ಅಲ್ಜಿಸಿರಾಸ್‌ನಲ್ಲಿ ಬಲಿಷ್ಠ ರಾಷ್ಟ್ರಗಳು ಸಭೆ ಸೇರಿದವು (1906). ಜರ್ಮನಿಯ ಉದ್ದೇಶ ಇಂಗ್ಲೆಂಡ್ ಮತ್ತು ಫ್ರಾನ್ಸ್ ನಡುವೆ ಇದ್ದ ಸೌಹಾರ್ಧತೆಯನ್ನು ತೊಡೆದುಹಾಕುವುದಾಗಿತ್ತು. ಆದರೆ ಬಹುತೇಕ ಬಲಿಷ್ಠ ರಾಷ್ಟ್ರಗಳು ಫ್ರಾನ್ಸ್‌ನ ಪರವಹಿಸುವುದರಿಂದ ಜರ್ಮನಿ ರಾಜತಾಂತ್ರಿಕ ಸೋಲನ್ನನುಭವಿಸಿತು. ಎಲ್ಲಾ ರಾಷ್ಟ್ರಗಳು 'ಅಲ್ಜಿಸಿರಾಸ್ ಆಕ್ಟನ್ನು' ಒಪ್ಪಿಕೊಂಡವು. ಸ್ಪೆಯಿನ್ ಮತ್ತು ಫ್ರಾನ್ಸ್‌ಗೆ ಮೊರಕ್ಕೊ ರಕ್ಷಣೆಯ ಕೆಲಸವನ್ನು ವಹಿಸಲಾಯಿತು. ಅಲ್ಜಿ ಸಿರಾಸ್ ಸಮ್ಮೇಳನದಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡ್‌ನ ನಡುವೆ ಇದ್ದ ಸಹಕಾರ ಭಾವನೆ ಇವೆರಡು ರಾಷ್ಟ್ರಗಳ ಸಂಬಂಧ ಮತ್ತಷ್ಟು ಸುಭದ್ರವಾಗಲು ಕಾರಣವಾಯಿತು.

### 100.6.4 ಅಗಡೀರ್ ಘಟನೆ (1911)

1911 ರಲ್ಲಿ ಎರಡನೆಯ ಬಾರಿಗೆ ಮೊರಕ್ಕೊ ಬಿಕ್ಕಟ್ಟು ತಲೆದೋರಿತು. ಫ್ರಾನ್ಸ್ ಮೊರೊಕ್ಕೊ ದಲ್ಲಿ ತನ್ನ ಸ್ಥಾನಮಾನವನ್ನು ಭದ್ರಪಡಿಸಿಕೊಳ್ಳಲು ಹವಣಿಸಿತ್ತು. ಇದರಿಂದ ಕಳವಳಗೊಂಡ ಜರ್ಮನಿಯು 1911 ರಲ್ಲಿ ಎರಡನೆಯ ಅಗಡೀರ್‌ಗೆ ತನ್ನ ಪ್ಯಾಂಥರ್ ಎಂಬ ನೌಕೆಯನ್ನು ಕಳುಹಿಸಿತು. ಮೊರಕ್ಕೊದಲ್ಲಿ ಫ್ರಾನ್ಸ್ ಏಕಮೇವ ಪ್ರಭುವಲ್ಲ ಎಂಬುದನ್ನು ತೋರಿಸಿಕೊಡುವುದೇ ಜರ್ಮನಿಯ ಈ ಕ್ರಮದ ಉದ್ದೇಶವಾಗಿತ್ತು. ಆದರೆ ಇಂಗ್ಲೆಂಡ್ ಫ್ರಾನ್ಸಿನ ಪರವಾಗಿ ಬೆಂಬಲ ವ್ಯಕ್ತಪಡಿಸಿದ್ದರಿಂದ ಜರ್ಮನಿಯು ಫ್ರಾನ್ಸಿನೊಡನೆ ಸಂಧಾನ ಏರ್ಪಡಿಸಿತು. ಈ ಸಂಧಾನದ ಪ್ರಕಾರ, ಜರ್ಮನಿಯು ಮೊರೊಕ್ಕೊದಲ್ಲಿ ಫ್ರಾನ್ಸಿನ ವಿಶೇಷ ಹಿತಾಸಕ್ತಿ ಹಾಗೂ ಸ್ಥಾನಮಾನವನ್ನು ಒಪ್ಪಿಕೊಂಡಿತು. ಫ್ರಾನ್ಸ್ ಜರ್ಮನಿಗೆ ಫ್ರೆಂಚ್ ಕಾಂಗೋದ ಬಹುಭಾಗವನ್ನು ಬಿಟ್ಟುಕೊಟ್ಟಿತು.

## 100.7 ಸಂಕ್ಷಿಪ್ತ ಅವಲೋಕನ

1870-71 ರಲ್ಲಿ ನಡೆದ ಫ್ರಾಂಕೋ-ಪ್ರಷ್ಯನ್ ಯುದ್ಧದಿಂದಾಗಿ ಫ್ರೆಂಚ್‌ನ ಎರಡನೆ ಸಾಮ್ರಾಜ್ಯ ಕೊನೆಗೊಂಡಿತು. ಅನಂತರ ಮೂರನೇ ಗಣರಾಜ್ಯ ಸ್ಥಾಪಿತವಾಯಿತು. ಫ್ರಾನ್ಸ್ ಯುದ್ಧ ಮುಗಿದ ಮೇಲೆ ಜರ್ಮನಿಯೊಡನೆ ಒಂದು ಒಪ್ಪಂದವನ್ನು ಮಾಡಿಕೊಂಡಿತು. ಫ್ರಾನ್ಸ್ ಪ್ರಮುಖ ಪ್ರಾಂತ್ಯಗಳಾದ ಅಲ್ಸೇಸ್ ಮತ್ತು ಲೊರೈನ್‌ಗಳನ್ನು ಜರ್ಮನಿಗೆ ನೀಡಿತು. ಇದರ ಜೊತೆಗೆ ಯುದ್ಧದ ಪರಿಹಾರವಾಗಿ ಹೆಚ್ಚಿನ ಮೊತ್ತದ ಹಣವನ್ನು ಜರ್ಮನಿಗೆ ನೀಡಬೇಕಾಯಿತು. ಈ ಹಣವನ್ನು ಕೇವಲ ಎರಡು ವರ್ಷಗಳಲ್ಲಿ ಸಂದಾಯ ಮಾಡಲಾಯಿತು.

ಮೂರನೇ ಗಣರಾಜ್ಯ ತನ್ನ ಪ್ರಾರಂಭಿಕ ವರ್ಷಗಳಲ್ಲಿ ಗಂಭೀರ ಸಮಸ್ಯೆಗಳನ್ನು ಎದುರಿಸಿತು. ಮೊಟ್ಟ ಮೊದಲನೆಯದಾಗಿ ಉಂಟಾದ ಹಗರಣವೆಂದರೆ ಬೌಲಂಜರ್ ಬಿಕ್ಕಟ್ಟು. ಬೌಲಂಜರ್ ಸೈನ್ಯದಲ್ಲಿ ಒಬ್ಬ ದಂಡನಾಯಕನಾಗಿದ್ದನು. ಅವನು ಗಣರಾಜ್ಯದ ಪರವಾಗಿದ್ದುದರಿಂದ ಅವನನ್ನು ಯುದ್ಧ ಮಂತ್ರಿಯನ್ನಾಗಿ 1886 ರಲ್ಲಿ ಗಣರಾಜ್ಯ ನೇಮಕಮಾಡಿತು. ಆದರೆ ಮಂತ್ರಿಯಾಗಿ ನೇಮಕಗೊಂಡ ಮೇಲೆ ಯುದ್ಧ ಮಾಡುವುದರ ಮೂಲಕ ಸೇಡನ್ನು ತೀರಿಸಿಕೊಳ್ಳಬೇಕೆಂದು ಮಾತನಾಡಲು ಪ್ರಾರಂಭಿಸಿದನು. ಇದು ಮೂರನೇ ಗಣರಾಜ್ಯವನ್ನು ಇಕ್ಕಟ್ಟಿನಲ್ಲಿ ಸಿಲುಕುವಂತೆ

ಮಾಡಿತು. ಅಂತಿಮವಾಗಿ ಬೌಲಂಜರ್‌ನನ್ನು ಮಂತ್ರಿ ಪದವಿಯಿಂದ ತೆಗೆದು ಹಾಕಿದುದಲ್ಲದೆ ಅವನು ಸೈನ್ಯದಲ್ಲಿ ಹೊಂದಿದ್ದ ಹುದ್ದೆಯನ್ನು ಕಿತ್ತುಕೊಳ್ಳಲಾಯಿತು. ಅನಂತರ ಅವನನ್ನು ದೇಶದ್ರೋಹದ ಸಂಚಿನ ಆರೋಪದ ಮೇಲೆ ಬಂಧಿಸುವಂತೆ ಆಜ್ಞಾಪಿಸಲಾಯಿತು. ಇದನ್ನು ತಿಳಿದ ಬೌಲಂಜರ್ ಫ್ರಾನ್ಸ್‌ನಿಂದ ಬ್ರಸ್ಸೆಲ್ಸ್‌ಗೆ ಪಲಾಯನ ಮಾಡಿದನು. ಎರಡು ವರ್ಷಗಳ ನಂತರ ಅಲ್ಲಿ ಆತ್ಮಹತ್ಯೆ ಮಾಡಿಕೊಂಡನು. ಈ ಹಗರಣದ ನಂತರ ಪನಾಮ ಕಾಲುವೆಯ ಹಗರಣ ನಡೆಯಿತು. ಫ್ರೆಂಚ್ ಇಂಜಿನಿಯರ್ ಡಿ ಲೆಸ್ಸೆಪ್ಸ್‌ನ ನೇತೃತ್ವದಲ್ಲಿ ಫ್ರಾನ್ಸ್ ಪನಾಮದ ಇಸ್ತಮಸ್ ಮೂಲಕ ಒಂದು ಕಾಲುವೆಯ ನಿರ್ಮಾಣ ಕೆಲಸವನ್ನು ಪ್ರಾರಂಭಿಸಿತು. ಆದರೆ ಲೆಸ್ಸೆಪ್ಸ್‌ನ ತಪ್ಪು ಲೆಕ್ಕಾಚಾರದಿಂದಾಗಿ ಕಾಲುವೆಯ ನಿರ್ಮಾಣ ಕೆಲಸವನ್ನು ಮುಂದುವರಿಸಲಾಗದೆ ಅರ್ಧಕ್ಕೆ ನಿಲ್ಲಿಸಬೇಕಾಯಿತು. ಗಣರಾಜ್ಯವು ಒಂದು ವಿಚಾರಣೆಯನ್ನು ಪ್ರಾರಂಭಿಸಿತು. ವಿಚಾರಣೆಯಿಂದ ಅನೇಕ ಮಂತ್ರಿಗಳು ಮತ್ತು ಡೆಪ್ಯೂಟಿಗಳು ಪನಾಮ ಕಂಪನಿಯ ನಿರ್ದೇಶಕರುಗಳಿಂದ ಲಂಚವನ್ನು ಸ್ವೀಕರಿಸಿದ್ದುದು ಬಹಿರಂಗವಾಯಿತು. ಲೆಸ್ಸೆಪ್ಸ್‌ನು ಕೂಡ ಲಂಚವನ್ನು ಸ್ವೀಕರಿಸಿದನೆಂಬುದು ತಿಳಿದುಬರುತ್ತದೆ. ಈ ಹಗರಣವು ಮೂರನೇ ಗಣರಾಜ್ಯಕ್ಕೆ ಹೆಚ್ಚು ಅಪಮಾನಕ್ಕೀಡಾಯಿತು. ಡ್ರೈಫಸ್ ವ್ಯವಹಾರ ಈ ಕಾಲದ ಮತ್ತೊಂದು ಹಗರಣ. ಈ ವ್ಯವಹಾರಕ್ಕೆ ಸಂಬಂಧಿಸಿದಂತೆ ಫ್ರೆಂಚ್ ಸಮಾಜ ಡ್ರೈಫಸ್‌ನ ಪರ ವಿರೋಧಿ ಎಂಬ ಎರಡು ಗುಂಪುಗಳಾಗಿ ವಿಭಾಗಿಸಲ್ಪಟ್ಟಿತು. ಒಂದು ಸುಳ್ಳು ದಾಖಲೆಯ ಪತ್ರದ ಆಧಾರದ ಮೇಲೆ ಜರ್ಮನಿಗೆ ಫ್ರಾನ್ಸ್ ರಕ್ಷಣಾ ವ್ಯವಹಾರಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಒದಗಿಸಿದನೆಂಬ ಆಪಾದನೆಯನ್ನು ಹೊರಿಸಿ ಸೆರೆಮನೆಯಲ್ಲಿಡಲಾಯಿತು. ಡ್ರೈಫಸ್‌ನ ವ್ಯವಹಾರಕ್ಕೆ ಸಂಬಂಧಿಸಿದಂತೆ ಹನ್ನೆರಡು ವರ್ಷಗಳವರೆಗೆ ವಿಚಾರಣೆ ನಡೆಯಿತು. ಅಂತಿಮವಾಗಿ ಡ್ರೈಫಸ್‌ನ ನಿರಪರಾಧಿ ಎಂದು ತೀರ್ಮಾನಿಸಿ ಬಿಡುಗಡೆ ಮಾಡಲಾಯಿತು. ಪುನಃ ಸೈನ್ಯದಲ್ಲಿ ಬಡ್ತಿ ನೀಡಿ ಪುನರ್ ನೇಮಕ ಮಾಡಲಾಯಿತು. ಅತಿ ದೀರ್ಘಕಾಲ ನಡೆದ ಈ ವ್ಯವಹಾರವು ಫ್ರಾನ್ಸಿನಲ್ಲಿ ಅಶಾಂತಿಯನ್ನುಂಟು ಮಾಡಿತು.

ಮೂರನೆಯ ಗಣರಾಜ್ಯ ಅನೇಕ ಸಾಧನೆಗಳನ್ನು ಮಾಡಿತು. ಅಧಿಕಾರಕ್ಕೆ ಬಂದ ತಕ್ಷಣವೇ ಅನೇಕ ರೀತಿಯ ಸ್ವಾತಂತ್ರ್ಯಗಳನ್ನು ಅದು ಜನರಿಗೆ ನೀಡಿತು. ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಸುಧಾರಣೆ ಬಹಳ ಮುಖ್ಯವಾದುದು. ಫ್ರಾನ್ಸ್‌ನಲ್ಲಿ ಇದುವರೆಗೂ ವಿದ್ಯಾಭ್ಯಾಸ ಚರ್ಚ್‌ನ ಹಿಡಿತದಲ್ಲಿತ್ತು. ರಿಪಬ್ಲಿಕ್ ಅನೇಕ ಕಾನೂನುಗಳನ್ನು ಹೊರಡಿಸುವುದರ ಮೂಲಕ ವಿದ್ಯಾಭ್ಯಾಸವನ್ನು ಧಾರ್ಮಿಕ ಸಂಸ್ಥೆಗಳಿಂದ ಬಿಡಿಸಿ ಸರ್ಕಾರದ ಹಿಡಿತಕ್ಕೊಳಪಡಿಸಿತು.

ಗಣರಾಜ್ಯದ ಆಳ್ವಿಕೆಯ ಸಮಯದಲ್ಲಿ ಕೈಗಾರಿಕೆ ಮತ್ತು ವ್ಯವಸಾಯ ಪ್ರಗತಿ ಹೊಂದಿದವು. ಆಂತರಿಕ ಮತ್ತು ವಿದೇಶಿ ವ್ಯಾಪಾರ ಅಧಿಕವಾಗಿ ಬೆಳೆಯಿತು. ಅನೇಕ ವಸಾಹತುಗಳನ್ನು ಕೂಡ ಫ್ರೆಂಚ್ ಗಣರಾಜ್ಯ ಆಫ್ರಿಕಾ ಮತ್ತು ಏಷ್ಯಾದಲ್ಲಿ ಸ್ಥಾಪಿಸಿತು.

ವಿದೇಶಾಂಗ ನೀತಿಗೆ ಸಂಬಂಧಿಸಿದಂತೆಯು ಕೂಡ ಮಹತ್ತರವಾದ ಸಾಧನೆ ಮಾಡಿತು. ಇದುವರೆಗೂ ಯೂರೋಪಿನಲ್ಲಿ ಫ್ರಾನ್ಸ್ ಯಾವುದೇ ಒಪ್ಪಂದ ಮಾಡಿಕೊಳ್ಳದೆ ಇದ್ದುದರಿಂದ ಏಕಾಂಗಿಯಾಗಿ ಪ್ರತ್ಯೇಕ ರಾಷ್ಟ್ರವಾಗಿತ್ತು. ಫ್ರಾನ್ಸ್ ಒಂಟಿತನವನ್ನು ಕೊನೆಗೊಳಿಸಿ ಇಂಗ್ಲೆಂಡಿನೊಡನೆ ಒಂದು ಒಪ್ಪಂದವನ್ನು 1904 ರಲ್ಲಿ ಮಾಡಿಕೊಂಡಿತು. ಮೊರಾಕ್ಕೊ ಬಿಕ್ಕಟ್ಟನ್ನು ಕೊನೆಗೊಳಿಸಿ ಅದನ್ನು ತನ್ನ ವಶಕ್ಕೆ ತೆಗೆದುಕೊಳ್ಳುವುದರಲ್ಲಿ ಯಶಸ್ವಿಯಾಯಿತು.

## 100.8 ಕ್ಲಿಷ್ಟ ಪದಗಳ ಟಿಪ್ಪಣಿ

| | | |
|---|---|---|
| ಕಾನ್ ಕಾರ್ಡ್ಯಾಟ್ | : | ಪೋಪನೊಡನೆ ನೆಪೋಲಿಯನ್ ಮಹಾಶಯ ಧಾರ್ಮಿಕ ವಿಷಯಕ್ಕೆ ಸಂಬಂಧಿಸಿದಂತೆ ಮಾಡಿಕೊಂಡ ಸೌಹಾರ್ದ ಒಪ್ಪಂದ. |
| ಪ್ಯಾರಿಸ್ ಕಮ್ಯೂನ್ | : | ಪ್ಯಾರಿಸ್ ನಗರದಲ್ಲಿ ಎಡಪಂಥೀಯ ಕ್ರಾಂತಿಕಾರರಿಂದ ರಚಿಸಲ್ಪಟ್ಟ ಸರ್ಕಾರ. |
| ಲೈಕ್ ಕಾನೂನುಗಳು | : | ವಿದ್ಯಾಭ್ಯಾಸ ಮತ್ತು ವಿವಾಹಕ್ಕೆ ಸಂಬಂಧಿಸಿದಂತೆ ತೃತೀಯ ಗಣರಾಜ್ಯ ಹೊರಡಿಸಿದ ಕಾನೂನುಗಳು |

## 100.9 ಮಾದರಿ ಪ್ರಶ್ನೆಗಳು

1. ವಿಶೇಷವಾಗಿ ಡ್ರೈಫಸ್ಸನ ವ್ಯವಹಾರವನ್ನು ಗಮನದಲ್ಲಿಟ್ಟುಕೊಂಡು ಮೂರನೆಯ ಗಣರಾಜ್ಯವು ಎದುರಿಸಿದ ಸಮಸ್ಯೆಗಳನ್ನು ಕುರಿತು ವಿವರಿಸಿ
2. ಮೂರನೆಯ ಗಣರಾಜ್ಯದ ಸಾಧನೆಗಳನ್ನು ಕುರಿತು ವಿವರಿಸಿ
3. ಮೂರನೆಯ ಗಣರಾಜ್ಯದ ವಿದೇಶಾಂಗ ನೀತಿಯ ಬಗ್ಗೆ ಬರೆಯಿರಿ

## 100.10 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


Wright - **History of the Third French Republic**

Hazen C.D. - **Modern Europe up to 1945**, New Delhi, 1979

Hexter J.H and Richard Pipes - **Europe since 1500**, Newyork 1971

Lipson .E. - **Europe in the 19th and 20th Centuries**, London 1953.


ಪ್ರೊ|| ಶಿವಣ್ಣ

# ಟಿಪ್ಪಣಿಗಳು

# ಘಟಕ - 101

# ಜರ್ಮನ್ ಸಾಮ್ರಾಜ್ಯ

## ಒಟ್ಟೋವಾನ್ ಬಿಸ್ಮಾರ್ಕನ ಕಾಲ (1871-1890)

ರಚನೆ


101.0 ಉದ್ದೇಶಗಳು
101.1 ಪೀಠಿಕೆ
101.2 ಜರ್ಮನ್ ಸಾಮ್ರಾಜ್ಯದ ಸಂವಿಧಾನ
101.2.1 ಫೆಡರಲ್ ಲಕ್ಷಣ
101.2.2 ಫೆಡರಲ್ ಅಥವಾ ಕೇಂದ್ರ ಸರ್ಕಾರ
101.2.3 ರಾಜನ ಅಧಿಕಾರ
101.2.4 ಪ್ರಷ್ಯಾದ ಶ್ರೇಷ್ಠತೆ
101.3 ಸಾಮ್ರಾಜ್ಯದ ಸಂಘಟನೆ
101.4 ಕ್ಯಾಥೊಲಿಕ್ಕರೊಡನೆ ಸಂಘರ್ಷ-ಸಾಂಸ್ಕೃತಿಕ ಸಂಘರ್ಷ (Kultur Kampf)
101.4.1 ರೋಮನ್ ಕ್ಯಾಥೊಲಿಕ್ಕರ ಮನೋಭಾವನೆಗಳು
101.4.2 ಮೇ ಕಾನೂನುಗಳು
101.4.3 ಬಿಸ್ಮಾರ್ಕ್ ಹೋರಾಟದಿಂದ ಹಿಂದಕ್ಕೆ ಸರಿದುದು
101.5 ಬಿಸ್ಮಾರ್ಕ್ ಮತ್ತು ಸಮಾಜವಾದಿಗಳು
101.5.1 ಸಮಾಜವಾದಿಗಳ ಘೋಷಣೆಗಳು
101.5.2 ಸಮಾಜವಾದಿಗಳ ವಿರುದ್ಧದ ಕಾಯಿದೆಗಳು
101.5.3 ರಾಜ್ಯ ಸಮಾಜವಾದ
101.6 ಬಿಸ್ಮಾರ್ಕನ ಸುಂಕ ರಕ್ಷಣಾ ನೀತಿ
101.7 ಬಿಸ್ಮಾರ್ಕನ ರಾಷ್ಟ್ರೀಯತೆಯ ನೀತಿ
101.8 ವಸಾಹತುಗಳ ಸ್ಥಾಪನೆ
101.9 ವಿದೇಶಾಂಗ ನೀತಿ
101.9.1 ಮೂವರು ಚಕ್ರವರ್ತಿಗಳ ಲೀಗ್(ಡ್ರೈಕೈಸರ್ ಬಂಡ್)
101.9.2 ದ್ವಿರಾಷ್ಟ್ರ ಒಪ್ಪಂದ (ಆಸ್ಟ್ರೋ-ಜರ್ಮನ್ ಒಪ್ಪಂದ)
101.9.3 ತ್ರಿರಾಷ್ಟ್ರ ಮೈತ್ರಿ ಕೂಟ (Triple Alliance)
101.9.4 ಮೂವರು ಚಕ್ರವರ್ತಿಗಳ ಲೀಗ್‌ನ ಪುನರ್ ಸ್ಥಾಪನೆ
101.9.5 ರಷ್ಯಾದೊಡನೆ ರೀಇನ್ಶುರೆನ್ಸ್ ಒಪ್ಪಂದ
101.9.6 ಇಂಗ್ಲೆಂಡಿನೊಡನೆ ಸಂಬಂಧ
101.10 ಬಿಸ್ಮಾರ್ಕನ ಪತನ
101.11 ಬಿಸ್ಮಾರ್ಕನ ವ್ಯಕ್ತಿತ್ವ
101.12 ಸಂಕ್ಷಿಪ್ತ ಅವಲೋಕನ
101.13 ಕ್ಲಿಷ್ಟ ಪದಗಳ ಟಿಪ್ಪಣಿ
101.14 ಮಾದರಿ ಪ್ರಶ್ನೆಗಳು
101.15 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು

## 101.0 ಉದ್ದೇಶಗಳು

ಈ ಘಟಕದ ಅಧ್ಯಯನದಿಂದ ನೀವು ಅರ್ಥಮಾಡಿಕೊಳ್ಳುವ ವಿಷಯಗಳೆಂದರೆ :

* ಜರ್ಮನ್ ಒಕ್ಕೂಟ ಸ್ಥಾಪನೆ ಮತ್ತು ಅದರ ರಾಜ್ಯಾಂಗದ ಮುಖ್ಯ ಲಕ್ಷಣಗಳು.
* ಹೊಸ ರಾಜ್ಯಾಂಗದಲ್ಲಿ ಪ್ರಷ್ಯಾದ ಶ್ರೇಷ್ಠತೆಗೆ ಆದ್ಯತೆ.
* ಛಾನ್ಸಲರ್ ಆಗಿ ಬಿಸ್ಮಾರ್ಕ್ ಜರ್ಮನ್ ಒಕ್ಕೂಟದ ಸಂಘಟನೆಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮಗಳು.
* ಬಿಸ್ಮಾರ್ಕನು ಸಮಾಜವಾದಿಗಳ ವಿರುದ್ಧ ನಡೆಸಿದ ಹೋರಾಟ ಮತ್ತು ಕಾರ್ಮಿಕ ವರ್ಗದವರನ್ನು ರಾಜ್ಯದ ಕಡೆಗೆ ಒಲಿಸಿಕೊಳ್ಳಲು ಜಾರಿಗೆ ತಂದ ಕ್ಷೇಮಾಭಿವೃದ್ಧಿ ಕಾನೂನುಗಳು.
* ಬಿಸ್ಮಾರ್ಕನು ಕೈಗಾರಿಕೆ ಮತ್ತು ಕೃಷಿಯನ್ನು ರಕ್ಷಿಸಲು ಅನುಸರಿಸಿದ ಸುಂಕ ನೀತಿ.
* ಫ್ರಾನ್ಸ್‌ನ್ನು ಯೂರೋಪಿನಲ್ಲಿ ಏಕಾಂಗಿಯನ್ನಾಗಿ ಮಾಡುವ ಧ್ಯೇಯದಿಂದ ಬಿಸ್ಮಾರ್ಕ್ ಅನುಸರಿಸಿದ ವಿದೇಶಾಂಗ ನೀತಿಯ ಲಕ್ಷಣಗಳು.
* 1872 ರಲ್ಲಿ ಜರ್ಮನಿ, ಆಸ್ಟ್ರಿಯ ಮತ್ತು ರಷ್ಯಾದ ನಡುವೆ ಉಂಟಾದ ಮೂವರು ಚಕ್ರವರ್ತಿಗಳ ಲೀಗ್ (Dreikaiser bund)
* 1879 ರ ಆಸ್ಟ್ರೋ-ಜರ್ಮನ್ ಒಪ್ಪಂದ ಅಥವಾ ದ್ವಿರಾಷ್ಟ್ರ ಒಪ್ಪಂದ.
* 1882 ರಲ್ಲಿ ಜರ್ಮನಿ, ಆಸ್ಟ್ರಿಯ ಮತ್ತು ಇಟಲಿ ರಾಷ್ಟ್ರಗಳು ರಚಿಸಿಕೊಂಡ ತ್ರಿರಾಷ್ಟ್ರ ಮೈತ್ರಿಕೂಟ (Triple Alliance).
* 1887 ರಲ್ಲಿ ರಷ್ಯಾದೊಡನೆ ಬಿಸ್ಮಾರ್ಕನು ಮಾಡಿಕೊಂಡ ರೀಇನ್ಸುರೆನ್ಸ್ ಒಪ್ಪಂದ (Reinsurance Treaty).
* ಬಿಸ್ಮಾರ್ಕನು ತನ್ನ ಅಧಿಕಾರದ ಅವಧಿಯ ಕೊನೆಯ ವರ್ಷಗಳಲ್ಲಿ ಸ್ಥಾಪಿಸಿದ ವಸಾಹತುಗಳು.
* ಬಿಸ್ಮಾರ್ಕನ ರಾಜೀನಾಮೆಗೆ ಕಾರಣವಾದ ಅಂಶಗಳು.

## 101.1 ಪೀಠಿಕೆ

1871 ರಲ್ಲಿ ಜರ್ಮನಿಯ ಏಕೀಕರಣ ಸಂಪೂರ್ಣವಾದ ಮೇಲೆ ಯೂರೋಪಿನ ರಾಜಕೀಯ ಕೇಂದ್ರ ಪ್ಯಾರಿಸ್‌ನಿಂದ ಬರ್ಲಿನ್‌ಗೆ ವರ್ಗಾಯಿಸಲ್ಪಟ್ಟಿತು. ಮೊದಲನೆಯ ಜಾಗತಿಕ ಯುದ್ಧ ಪ್ರಾರಂಭವಾಗುವವರೆಗೂ ಯೂರೋಪಿನಲ್ಲಿ ಜರ್ಮನಿ ಪ್ರಮುಖ ಪಾತ್ರ ವಹಿಸಿತು. ಒಂದನೆಯ ವಿಲಿಯಂ (1871-1888) ಏಕೀಕರಣಗೊಂಡ ಜರ್ಮನ್ ಸಾಮ್ರಾಜ್ಯದ ಚಕ್ರವರ್ತಿಯಾದನು. ಬಿಸ್ಮಾರ್ಕನು ಇಂಪೀರಿಯಲ್ ಛಾನ್ಸಲರ್ ಆಗಿ ನೇಮಕಗೊಂಡನು. 1871 ರಲ್ಲಿ ಜರ್ಮನ್ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂದಿದ್ದುದು ವಾಸ್ತವಿಕವಾಗಿ ಮೊದಲನೆಯ ಹಂತ ಮಾತ್ರ. ಅದರ ಸಂಸ್ಥೆಗಳನ್ನು ವ್ಯವಸ್ಥಿತಗೊಳಿಸುವ ಮತ್ತು ಪ್ರತ್ಯೇಕವಾಗಿದ್ದ ರಾಜ್ಯಗಳನ್ನು ಬೆಸೆದು ಒಂದು ರಾಷ್ಟ್ರವನ್ನಾಗಿ ನಿರ್ಮಿಸುವ ಕೆಲಸ ಇನ್ನೂ ಬಾಕಿ ಇತ್ತು. ಬಿಸ್ಮಾರ್ಕನ ನೇತೃತ್ವದಲ್ಲಿ ಈ ಕೆಲಸಗಳನ್ನು ಯಶಸ್ವಿಯಾಗಿ ಸಾಧಿಸಲಾಯಿತು. ಬಿಸ್ಮಾರ್ಕನು ತನಗಿದ್ದ ಘನತೆ ಮತ್ತು ಪ್ರಭಾವಗಳನ್ನು ಉಪಯೋಗಿಸಿಕೊಂಡು ತನ್ನ ನೀತಿಗಳನ್ನು ಕಾರ್ಯಗತಗೊಳಿಸಿದನು. ಆಂತರಿಕ ಆಡಳಿತಕ್ಕೆ ಸಂಬಂಧಿಸಿದಂತೆ ರಾಜ್ಯಾಂಗದ ರಚನೆಯ ಕಾರ್ಯ. ಕ್ಯಾಥೊಲಿಕ್ಕರು ಮತ್ತು ಸಮಾಜವಾದಿಗಳ ವಿರುದ್ಧದ ಹೋರಾಟ ಬಿಸ್ಮಾರ್ಕನು ತಕ್ಷಣವೇ ಗಮನ ವಹಿಸಬೇಕಾದ ಕಾರ್ಯಗಳಾಗಿದ್ದವು. ಅದೇ ರೀತಿ ಜರ್ಮನ್ ಒಕ್ಕೂಟದ ಆರ್ಥಿಕಾಭಿವೃದ್ಧಿಯತ್ತ ಗಮನ ಹರಿಸಬೇಕಾಗಿತ್ತು. ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ಅವನ ನಿಲುವು ಜರ್ಮನ್ ಸಾಮ್ರಾಜ್ಯದ ಒಕ್ಕೂಟಕ್ಕೋಸ್ಕರ ಫ್ರಾನ್ಸ್‌ನ್ನು ಯೂರೋಪಿನ ರಾಜಕೀಯದಲ್ಲಿ ಏಕಾಂಗಿಯನ್ನಾಗಿ ಮಾಡುವುದಾಗಿತ್ತು. ಈ ಉದ್ದೇಶದಿಂದ ಬಿಸ್ಮಾರ್ಕನು ಅನೇಕ ಒಕ್ಕೂಟಗಳ ರಚನೆಗೆ ಕಾರಣನಾದನು. ಬಿಸ್ಮಾರ್ಕನ ಉದ್ದೇಶ ಪ್ರಮುಖವಾಗಿ ಜರ್ಮನ್ ಒಕ್ಕೂಟವನ್ನು ಬಲಪಡಿಸಿ ಯೂರೋಪಿನಲ್ಲೇ ಅಗ್ರರಾಷ್ಟ್ರವನ್ನಾಗಿ ಮಾಡುವುದಾಗಿತ್ತು.

## 101.2 ಜರ್ಮನ್ ಸಾಮ್ರಾಜ್ಯದ ಸಂವಿಧಾನ

### *101.2.1 ಫೆಡರಲ್ ಲಕ್ಷಣ*

ಜರ್ಮನಿಯ ಸಾಮ್ರಾಜ್ಯವನ್ನು ಫೆಡರಲ್ ತತ್ವದ ಆಧಾರದ ಮೇಲೆ (ಸಂಯುಕ್ತ ರಾಷ್ಟ್ರ) ಸ್ಥಾಪಿಸಲಾಯಿತು. ಜರ್ಮನ್ ಸಂಯುಕ್ತ ಸಾಮ್ರಾಜ್ಯ (ಜರ್ಮನ್ ಒಕ್ಕೂಟ) ಸುಮಾರು 50 ವರ್ಷಗಳ ಕಾಲ ಮಾತ್ರ ಮುಂದುವರಿಯಿತು. ಅಮೇರಿಕ, ಕೆನಡಾ, ಸ್ವಿಟ್ಜರ್ಲೆಂಡ್ ಮತ್ತು ಆಸ್ಟ್ರೇಲಿಯ ರಾಷ್ಟ್ರಗಳಂತೆ ಜರ್ಮನಿಯು **1933** ರ ವರೆಗೆ ಒಂದು ಫೆಡರಲ್ ಸಾಮ್ರಾಜ್ಯವಾಗಿತ್ತು.

ಜರ್ಮನ್ ಸಂಯುಕ್ತ ಸಾಮ್ರಾಜ್ಯವು ಪ್ರಷ್ಯ, ಬವೇರಿಯ, ಸ್ಯಾಕ್ಸನಿ, ವುರ್ಟೆಂಬರ್ಗ್, ಮೊದಲಾದ ಹದಿನೆಂಟು ಸಣ್ಣರಾಜ್ಯಗಳು, ಮೂರು ಸ್ವತಂತ್ರ ನಗರಗಳು ಮತ್ತು ರೀಚ್‌ಲ್ಯಾಂಡ್, ಅಲ್ಸೇಸ್ ಮತ್ತು ಲೊರೈನ್‌ಗಳಿಂದ ಕೂಡಿತ್ತು. ರಾಜ್ಯಾಂಗ ಒಕ್ಕೂಟದ ಪರಮಾಧಿಕಾರವನ್ನು ರೀಚ್‌ಸ್ಟಾಗ್ ನೀಡಿತ್ತು. ಆದರೆ ದಿನನಿತ್ಯ ಜೀವನದ ವಿಷಯಗಳಿಗೆ ಸಂಬಂಧಿಸಿದಂತೆ ಆಯಾ ರಾಜ್ಯಗಳಿಗೆ ತೀರ್ಮಾನ ತೆಗೆದುಕೊಳ್ಳಲು ಅಧಿಕಾರ ನೀಡಲಾಗಿತ್ತು. ಪ್ರತಿಯೊಂದು ರಾಜ್ಯವೂ ತನ್ನದೇ ಆದ ಸರ್ಕಾರ, ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಲಯಗಳನ್ನು ಹೊಂದಿತ್ತು.

### *101.2.2 ಕೇಂದ್ರ ಅಥವಾ ಫೆಡರಲ್ ಸರ್ಕಾರ*

ಫೆಡರಲ್ ಸರ್ಕಾರ ರೀಚ್‌ಸ್ಟಾಗ್ ಮತ್ತು ಬುಂಡೆಸ್ರಾಟ್ ಎಂಬ ಎರಡು ಸದನಗಳಿಂದ ಕೂಡಿತ್ತು. ಕೇಂದ್ರದಲ್ಲಿ ಒಂದು ಕಾರ್ಯಾಂಗ ಮತ್ತು ಉಚ್ಛನ್ಯಾಯಾಲಯವು ಇದ್ದವು. ಉಳಿದ ಸಂಯುಕ್ತ ರಾಷ್ಟ್ರಗಳಲ್ಲಿದ್ದಂತೆ ಕೇಂದ್ರದ ಎರಡು ಶಾಸನ ಸಭೆಗಳು ರಾಜ್ಯಗಳಿಗೆ ಸಂಬಂಧಿಸಿದಂತೆ ಎರಡು ಲಕ್ಷಣಗಳನ್ನು ಅಳವಡಿಸಿಕೊಂಡಿದ್ದವು. ಪ್ರತಿಯೊಂದು ರಾಜ್ಯವು ಜನಸಂಖ್ಯಾ ಆಧಾರದ ಮೇಲೆ ಸಾರ್ವತ್ರಿಕ ಚುನಾವಣೆಗಳ ಮೂಲಕ ಪ್ರತಿನಿಧಿಗಳನ್ನು ಚುನಾಯಿಸಿ ರಾಷ್ಟ್ರೀಯ ಸಭೆ ಅಥವಾ ರೀಚ್‌ಸ್ಟಾಗ್‌ಗೆ (ಕೆಳಮನೆ) ಕಳುಹಿಸಬೇಕಾಗಿತ್ತು. ಈ ಶಾಸನ ಸಭೆಯು 397 ಸದಸ್ಯರಿಂದ ಕೂಡಿತ್ತು.

ಅವರ ಅವಧಿ 5 ವರ್ಷಗಳು. ಬ್ರಿಟನ್ ಮತ್ತು ಫ್ರಾನ್ಸ್‌ನಲ್ಲಿದ್ದ ಶಾಸನ ಸಭೆಗಳಿಗೆ ಹೋಲಿಸಿದರೆ ಇದರ ಅಧಿಕಾರ ಕಡಿಮೆ ಇತ್ತು. ಏಕೆಂದರೆ ರೀಚ್‌ಸ್ಟಾಗ್ ಸ್ವತಃ ತಾನೇ ಯಾವುದೇ ಮಸೂದೆಯನ್ನು ಸೂಚಿಸುವ ಅಧಿಕಾರಹೊಂದಿರಲಿಲ್ಲ. ಸರ್ಕಾರ ಮಂಡಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಚರ್ಚೆ ನಡೆಸಬಹುದಿತ್ತು. ಬುಂಡೆಸ್ರಾಟ್ (ಮೇಲ್ಮನೆ) ಪ್ರತಿಯೊಂದು ರಾಜ್ಯದಿಂದ ಕಳುಹಿಸಿಕೊಟ್ಟ ಪ್ರತಿನಿಧಿಗಳಿಂದ ಕೂಡಿತ್ತು. ಅಮೇರಿಕಾದಲ್ಲಿದ್ದಂತೆ ರಾಜ್ಯಗಳು ಸಮಾನತೆಯ ಆಧಾರದ ಮೇಲೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸುವ ಹಕ್ಕನ್ನು ಹೊಂದಿರಲಿಲ್ಲ. ರಾಜ್ಯಗಳು ಮಾಡಿಕೊಂಡಿದ್ದ ಒಪ್ಪಂದದ ಆಧಾರದ ಮೇಲೆ ಪ್ರತಿನಿಧಿಗಳನ್ನು ಬುಂಡೆಸ್ರಾಟ್‌ಗೆ ಕಳುಹಿಸಬೇಕಾಗಿತ್ತು. ಈ ರೀತಿಯಾಗಿ ಪ್ರಷ್ಯಾ ಹದಿನೇಳು ಸದಸ್ಯರನ್ನು, ಪ್ರಷ್ಯಾವನ್ನು ಬಿಟ್ಟರೆ ಅತ್ಯಂತ ವಿಶಾಲವಾದ ರಾಜ್ಯ ಬವೇರಿಯಾ ಕೇವಲ ಆರು ಸದಸ್ಯರನ್ನು ; ಸ್ಯಾಕ್ಸನಿ ಮತ್ತು ವುರ್ಟಂಬರ್ಗ್ ತಲಾ ನಾಲ್ಕು ಸದಸ್ಯರನ್ನು; 17 ಸಣ್ಣರಾಜ್ಯಗಳು ತಲಾ ಒಬ್ಬ ಸದಸ್ಯನನ್ನು ಕಳುಹಿಸಬೇಕಾಗಿತ್ತು. ಒಬ್ಬ ಸದಸ್ಯನಿಗೆ ಒಂದು ಮತವಿತ್ತು. ಅಂದರೆ ಪ್ರಷ್ಯಾಕ್ಕೆ 17 ಮತಗಳಿದ್ದವು. ರಾಜ್ಯಗಳ ದೊರೆಗಳು ನಿರ್ದೇಶಿಸಿದ ಪ್ರಕಾರ ಸದಸ್ಯರು ಮತಚಲಾಯಿಸುತ್ತಿದ್ದರು. ವಾಸ್ತವಿಕವಾಗಿ ಬುಂಡೆಸ್ರಾಟ್ ಜರ್ಮನಿಯ ದೊರೆಗಳ ಸಭೆಯಾಗಿತ್ತು. ಕಾರ್ಯಾಂಗಕ್ಕೆ ಸಂಬಂಧಿಸಿದಂತೆ ಸರ್ವೋಚ್ಚ ಅಧಿಕಾರವು ಚಕ್ರವರ್ತಿಗೆ ಸೇರಿತ್ತು. ಚಕ್ರವರ್ತಿಯೇ ನೇಮಕಮಾಡಿಕೊಳ್ಳುವ ಫೆಡರಲ್ ಛಾನ್ಸಲರ್ ಈ ಕಾರ್ಯಾಂಗದ ಅಧಿಕಾರವನ್ನು ಸಂಪೂರ್ಣವಾಗಿ ಚಲಾಯಿಸುವ ಅಧಿಕಾರ ಹೊಂದಿದ್ದನು. ಮೇಲಿನ ಅಂಶಗಳಿಂದ ತಿಳಿದು ಬರುವುದೇನೆಂದರೆ ಜರ್ಮನಿಯ ಸಂಯುಕ್ತ ಸಾಮ್ರಾಜ್ಯದ ರಾಜ್ಯಾಂಗ ಯಾವುದೇ ಜವಾಬ್ದಾರಿ ಸರ್ಕಾರದ ಲಕ್ಷಣಗಳನ್ನು ಹೊಂದಿರಲಿಲ್ಲ.

### 101.2.3 ರಾಜನ ಅಧಿಕಾರ

ಜರ್ಮನ್ ಸಾಮ್ರಾಜ್ಯದ ಸಂಯುಕ್ತ ವ್ಯವಸ್ಥೆಯಲ್ಲಿ ಎದ್ದು ಕಾಣುವ ಎರಡು ಪ್ರಮುಖ ಲಕ್ಷಣಗಳೆಂದರೆ; ಒಂದು ರಾಜತ್ವಕ್ಕೆ ಸಂಬಂಧಿಸಿದುದು ಮತ್ತೊಂದು ಪ್ರಷ್ಯಾದ ಮುಂದಾಳತ್ವಕ್ಕೆ ಸಂಬಂಧಿಸಿದುದು. ಜರ್ಮನ್ ಸಾಮ್ರಾಜ್ಯದ ಸಂಯುಕ್ತ ವ್ಯವಸ್ಥೆಯಲ್ಲಿ ಚಕ್ರವರ್ತಿಯ ಪ್ರಭಾವ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವ್ಯಕ್ತವಾಗುವುದನ್ನು ಕಾಣಬಹುದಾಗಿದೆ. ಪ್ರಪಂಚದಲ್ಲಿ ಅಸ್ತಿತ್ವದಲ್ಲಿದ್ದ ಪೆಡರಲ್ ರಾಷ್ಟ್ರಗಳ ಪೈಕಿ ಜರ್ಮನಿಯೊಂದರಲ್ಲೇ ರಾಜತ್ವ ಅಸ್ತಿತ್ವದಲ್ಲಿದ್ದುದು. ಜರ್ಮನ್ ಸಂಯುಕ್ತ ಸಾಮ್ರಾಜ್ಯದ ವ್ಯವಸ್ಥೆಯು ಅನೇಕ ರಾಜ್ಯಗಳಿಂದ ಕೂಡಿದ್ದ ಒಕ್ಕೂಟದ ವ್ಯವಸ್ಥೆಯಾಗಿತ್ತು. ಆದರೆ ಹ್ಯಾಂಬರ್ಗ್, ಬ್ರೆಮೆನ್ ಮತ್ತು ಲೈಬೆಕ್ ಸ್ವತಂತ್ರ ನಗರಗಳಾಗಿದ್ದವು. ಎಲ್ಲಾ ರಾಜ್ಯಗಳಿಗೆ ಸಂಬಂಧಪಟ್ಟ ರಾಜ್ಯಾಂಗವನ್ನು ಕೇಂದ್ರ ಸರ್ಕಾರವೇ ರಚಿಸುತ್ತಿತ್ತು. ಆಯಾ ರಾಜ್ಯಗಳ ಶಾಸನ ಸಭೆಗಳು ಸ್ಥಿರೀಕರಿಸುತ್ತಿದ್ದವು.

ಕಾರ್ಯಾಂಗಕ್ಕೆ ಸಂಬಂಧಪಟ್ಟ ಅಧಿಕಾರವು ರಾಜ್ಯಗಳಲ್ಲಿ ಆಯಾ ರಾಜರುಗಳು ಮತ್ತು ಅವರು ನೇಮಕ ಮಾಡಿದ ಮಂತ್ರಿಗಳ ಕೈಯಲ್ಲಿ ಕೇಂದ್ರಿಕೃತವಾಗಿತ್ತು. ರಾಜ್ಯಗಳಲ್ಲಿದ್ದ ಶಾಸನ ಸಭೆಗಳು ಕೇಂದ್ರದಲ್ಲಿದ್ದ ರೀಚ್‌ಸ್ಟಾಗ್‌ನ ರೀತಿಯ ನಿರ್ಬಂಧಿಸುವ ಅಥವಾ ಟೀಕಿಸುವ ಅಧಿಕಾರ ಹೊಂದಿದ್ದವೇ ವಿನಹ ಆಳ್ವಿಕೆ ನಡೆಸುವ ಅಧಿಕಾರ ಹೊಂದಿರಲಿಲ್ಲ. ಆದುದರಿಂದ ಕೇಂದ್ರ ಸರ್ಕಾರವು ರಾಜ್ಯಗಳ ಕಾರ್ಯಾಂಗದ ಬಗ್ಗೆ ಒತ್ತಿಹೇಳಿತು. ರಾಜ್ಯದ ರಾಜರುಗಳು ಕೇಂದ್ರ ಸರ್ಕಾರದ ಕಾನೂನುಗಳನ್ನು ಜಾರಿಗೊಳಿಸಬೇಕಾಗಿತ್ತು. ಅವರು ಬುಂಡೆಸ್ರಾಟ್‌ಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿಕೊಡಬೇಕಾಗಿತ್ತು. ರಾಜ್ಯಗಳಲ್ಲಿಯು ಕೂಡ ರೀಚ್‌ಸ್ಟಾಗ್‌ಗಿಂತ ಬುಂಡೇಸ್ರಾಟ್ ಹೆಚ್ಚು ಅಧಿಕಾರವನ್ನು ಹೊಂದಿತ್ತು.

### 101.2.4 ಪ್ರಷ್ಯಾದ ಶ್ರೇಷ್ಠತೆ

ಜರ್ಮನಿಯ ಫೆಡೆರಲ್ ರಾಜ್ಯಾಂಗದ ಮತ್ತೊಂದು ಬಹಳ ಮುಖ್ಯವಾದ ಲಕ್ಷಣವೆಂದರೆ ಜರ್ಮನಿಯ ಎಲ್ಲಾ ರಾಜ್ಯಗಳಿಗಿಂತಲೂ ಪ್ರಷ್ಯಾ ಹೊಂದಿದ್ದ ಶ್ರೇಷ್ಠತೆ. ಜರ್ಮನಿಯ

ಏಕೀಕರಣದಲ್ಲಿ ಅದು ವಹಿಸಿದ ಪಾತ್ರದಿಂದಾಗಿ, ಅದರ ವಿಸ್ತಾರ ಮತ್ತು ಜನಸಂಖ್ಯೆಯ ಆಧಾರದ ಮೇಲೆ ಪ್ರಷ್ಯಾ ಅಂತಹ ಸರ್ವೋತ್ಕೃಷ್ಟ ಸ್ಥಾನವನ್ನು ಅಲಂಕರಿಸಿತ್ತು. ಜರ್ಮನಿಯ ಸಂಯುಕ್ತ ಸಾಮ್ರಾಜ್ಯದ 2/3 ಭಾಗದಷ್ಟು ಪ್ರದೇಶ, 3/5 ರಷ್ಟು ಜನಸಂಖ್ಯೆಯನ್ನು ಪ್ರಷ್ಯ ಹೊಂದಿತ್ತು. ಕೇಂದ್ರದ ರೀಚ್‌ಸ್ಟಾಗ್‌ನಲ್ಲಿ ಪ್ರಷ್ಯಾದ ಪ್ರತಿನಿಧಿಗಳ ಸಂಖ್ಯೆ 235 ಮತ್ತು ಬುಂಡೇಸ್ರಾಟ್‌ನಲ್ಲಿ ಹದಿನೇಳು ಮತಗಳನ್ನು ಹೊಂದಿತ್ತು. ಆದುದರಿಂದ ಸರ್ಕಾರದ ತೀರ್ಮಾನ ಯಾವಾಗಲೂ ಪ್ರಷ್ಯಾದ ಬೆಂಬಲವನ್ನೇ ಅವಲಂಬಿಸಿತ್ತು. ಪ್ರಷ್ಯಾದ ರಾಜ ಜರ್ಮನ್ ಸಂಯುಕ್ತ ಸಾಮ್ರಾಜ್ಯದ ಚಕ್ರವರ್ತಿಯೂ ಆಗಿದ್ದನು. ಈ ಚಕ್ರವರ್ತಿಯೇ ಸೈನ್ಯದ ದಂಡನಾಯಕ, ನೌಕಾಪಡೆಯ ಮುಖ್ಯಸ್ಥ ಮತ್ತು ವಿದೇಶಾಂಗ ನೀತಿಯ ನಿರ್ದೇಶಕ. ಚಕ್ರವರ್ತಿ ಫೆಡರಲ್ ಛಾನ್ಸಲರ್‌ನನ್ನು ನೇಮಕ ಮಾಡುತ್ತಿದ್ದನು. ಬುಂಡೇಸ್ರಾಟ್‌ನ ಎಲ್ಲಾ ಸಮಿತಿಗಳ ಅಧ್ಯಕ್ಷತೆಯನ್ನು ಪ್ರಷ್ಯ ವಹಿಸುತ್ತಿತ್ತು. ಪ್ರಷ್ಯಾದ ರಾಜಧಾನಿ ಬರ್ಲಿನ್‌ನಲ್ಲೆ ಕೇಂದ್ರ ಸರ್ಕಾರದ ಕಛೇರಿಗಳು ಸ್ಥಾಪಿಸಲ್ಪಟ್ಟವು. ಸಂಕ್ಷಿಪ್ತವಾಗಿ ಹೇಳುವುದಾದರೆ ಜರ್ಮನಿಯ ಸಂಯುಕ್ತ ಸಾಮ್ರಾಜ್ಯದಲ್ಲಿ ಪ್ರಷ್ಯಾದ ಅಧಿಪತ್ಯವೇ ಪ್ರಮುಖ ಅಂಶ. ಛಾನ್ಸಲರ್ ಚಕ್ರವರ್ತಿಗೆ ಮಾತ್ರ ಜವಾಬ್ದಾರ. ಛಾನ್ಸಲರ್‌ಗೆ ಮಂತ್ರಿಗಳು ಜವಾಬ್ದಾರರು. ಒಂದನೆಯ ವಿಲಿಯಂನ ಕಾಲದಲ್ಲಿ ಬಿಸ್ಮಾರ್ಕನೆ ನಿಜವಾಗಿ ಆಳ್ವಿಕೆ ನಡೆಸಿದವನು. ಬಿಸ್ಮಾರ್ಕನ ಮೊದಲನೆಯ ಹತ್ತು ವರ್ಷಗಳ ಅವಧಿ ಬಹಳ ರಚನಾತ್ಮಕ ಕೆಲಸಗಳಿಂದ ಕೂಡಿತ್ತು. ಅವನ ಉತ್ತಮ ಕೆಲಸಗಳೆಲ್ಲಾ ಈ ಅವಧಿಯಲ್ಲೇ ಮುಕ್ತಾಯವಾದವೆಂದು ಹೇಳಬಹುದು. "ಜರ್ಮನಿಯನ್ನು ತೃಪ್ತಿಯಿಂದ ಕೂಡಿದ ರಾಷ್ಟ್ರವನ್ನಾಗಿ ಮಾಡಲಾಯಿತು" ಎಂದು ಬಿಸ್ಮಾರ್ಕನೇ ಹೇಳಿರುವನು.

## 101.3 *ಸಾಮ್ರಾಜ್ಯದ ಸಂಘಟನೆ*

ಅಲ್ಪಾವಧಿಯಲ್ಲೇ ಬಿಸ್ಮಾರ್ಕನು ಆಡಳಿತ ಯಂತ್ರವನ್ನು ವ್ಯವಸ್ಥಿತಗೊಳಿಸಿ ಸಮಗ್ರತೆ ತಂದನು. ಒಳಾಡಳಿತ ನೀತಿಯಲ್ಲಿ ಒಬ್ಬ ಸರ್ವಾಧಿಕಾರಿಯಂತೆ ಕೆಲಸ ನಿರ್ವಹಿಸಿದನು. ಒಳಾಡಳಿತಕ್ಕೆ ಸಂಬಂಧಿಸಿದಂತೆ ಮುಖ್ಯವಾಗಿ ಅವನ ಉದ್ದೇಶ ಸಾಮ್ರಾಜ್ಯವನ್ನು ಸಂಘಟಿಸುವುದು ಮತ್ತು ಅದನ್ನು ಬಲಪಡಿಸುವುದಾಗಿತ್ತು. ಅದೇ ರೀತಿ ಜರ್ಮನ್ ಸಾಮ್ರಾಜ್ಯದ ಒಳಗಡೆ ಇದ್ದ ವಿರೋಧಿಗಳನ್ನು ಸದೆಬಡಿಯುವುದಾಗಿತ್ತು. ಅವನು ಸಂಯುಕ್ತ ಸಾಮ್ರಾಜ್ಯದ ವ್ಯಾಪ್ತಿಯನ್ನು ವಿಸ್ತರಿಸಿದನು ಹಾಗೂ ಕೇಂದ್ರ ಸರ್ಕಾರದ ಕರ್ತವ್ಯಗಳನ್ನು ವಿಸ್ತರಿಸಿದನು. ವಿವಿಧ ರಾಜ್ಯಗಳು ಹೊಂದಿದ್ದ ಕಾನೂನುಗಳನ್ನು ತೊಡೆದುಹಾಕಿ ಸಮಗ್ರ ಜರ್ಮನ್ ಸಾಮ್ರಾಜ್ಯಕ್ಕೆ ಏಕರೂಪ ಕಾನೂನು ಸಂಹಿತೆಯನ್ನು ಜಾರಿಗೆ ತಂದನು. ರೈಲ್ವೆ ವ್ಯವಸ್ಥೆಯನ್ನು, ಸೈನ್ಯ, ಅಂಚೆ ಮತ್ತು ಟೆಲಿಗ್ರಾಫ್ ಸೇವಾ ವ್ಯವಸ್ಥೆಗಳೊಡನೆ ಏಕರೂಪ ತರಲು 1876 ರಲ್ಲಿ ಇಂಪೀರಿಯಲ್ ಬ್ಯಾಂಕನ್ನು ಸ್ಥಾಪಿಸಲಾಯಿತು. ಬ್ಯಾಂಕ್‌ಗಳ ಹತೋಟಿಯನ್ನು ರಾಜ್ಯ ಸರ್ಕಾರಗಳಿಂದ ಬುಂಡೆಸ್ರಾಟ್‌ಗೆ ವರ್ಗಾಯಿಸಲಾಯಿತು.

ಬಿಸ್ಮಾರ್ಕನು ತನ್ನ ನೀತಿಗಳನ್ನು ಜಾರಿಗೆ ತರುವುದರಲ್ಲಿ ಮಧ್ಯಮ ವರ್ಗವನ್ನು ಪ್ರತಿನಿಧಿಸುತ್ತಿದ್ದ ನ್ಯಾಷನಲ್ ಲಿಬರಲ್ ಪಕ್ಷ, ಸ್ವತಂತ್ರ ಕನ್ಸರ್‌ವೇಟಿವ್ ಪಕ್ಷಗಳ ಬೆಂಬಲ ಪಡೆದನು. ಈ ಕಾಲದಲ್ಲಿದ್ದ ಇನ್ನಿತರ ಪಕ್ಷಗಳೆಂದರೆ ಪ್ರೊಗ್ರೆಸ್ಸಿವ್ ಪಕ್ಷ, ಸೋಷಿಯಲ್ ಡೆಮೊಕ್ರೆಟಿಕ್ ಪಕ್ಷ ಮತ್ತು ಕ್ಯಾಥೊಲಿಕ್ ಸೆಂಟರ್ ಪಕ್ಷ. ಕ್ಯಾಥೊಲಿಕ್ ಸೆಂಟರ್ ಪಕ್ಷ ಹೆಚ್ಚು ಜನರ ಬೆಂಬಲ ಹೊಂದಿದ್ದು ಬಿಸ್ಮಾರ್ಕನ ನೀತಿಗಳನ್ನು ವಿರೋಧಿಸಿತು.

## 101.4 ಕ್ಯಾಥೊಲಿಕ್ಕರೊಡನೆ ಸಂಘರ್ಷ - ಸಾಂಸ್ಕೃತಿಕ ಸಂಘರ್ಷ (Kultur Kampf)

ಕ್ಯಾಥೊಲಿಕ್ಕರು ಮತ್ತು ಸಮಾಜವಾದಿಗಳು ಸಾಮ್ರಾಜ್ಯದ ಶತ್ರುಗಳು ಎಂಬುದನ್ನು ಬಿಸ್ಮಾರ್ಕನು ಮನಗಂಡಿದ್ದನು. ಕ್ಯಾಥೊಲಿಕ್ಕರು ಮತ್ತು ಸಮಾಜವಾದಿಗಳು ತಮ್ಮದೇ ಆದ ಪಕ್ಷಗಳನ್ನು ಸ್ಥಾಪಿಸಿಕೊಂಡು ಹೆಚ್ಚು ಸಂಘಟಿತರಾಗಿದ್ದರು. ಬಿಸ್ಮಾರ್ಕನು ಇವೆರಡರ ವಿರುದ್ಧ

ಯುದ್ಧ ಸಾರಿದನು. ಅನೇಕ ವರ್ಷಗಳವರೆಗೆ ನಡೆದ ಹೋರಾಟದಲ್ಲಿ ಬಿಸ್ಮಾರ್ಕನು ಯಶಸ್ಸನ್ನು ಕಾಣಲು ಸಾಧ್ಯವಾಗಲಿಲ್ಲ.

### *101.4.1 ಕ್ಯಾಥೊಲಿಕ್ಕರ ಮನೋಭಾವನೆಗಳು*

ರೋಮನ್ ಕ್ಯಾಥೊಲಿಕ್ಕರು ಬಿಸ್ಮಾರ್ಕನ ವಿರುದ್ಧವಾಗಿದ್ದುದನ್ನು 1866 ರಿಂದಲೂ ಗಮನಿಸಬಹುದಾಗಿದೆ. ಆಸ್ಟ್ರೋ-ಪ್ರಷ್ಯನ್ ಯುದ್ಧದ ಸಮಯದಲ್ಲಿ ಅವರು ಆಸ್ಟ್ರಿಯಾದ ಪರವಾಗಿದ್ದು ಪ್ರಷ್ಯಾದ ಪ್ರಾಟೆಸ್ಟೆಂಟ್ ಮನೆತನದ ವಿರೋಧಿಗಳಾಗಿದ್ದರು. ಈ ಯುದ್ಧದಲ್ಲಿ ಪ್ರಷ್ಯಾದ ಜಯವನ್ನು ಅವರು ಸಹಿಸಿಕೊಳ್ಳಲಿಲ್ಲ. ರೋಮನ್ ಕ್ಯಾಥೊಲಿಕ್ ಚರ್ಚ್ ಜರ್ಮನ್ ಸಾಮ್ರಾಜ್ಯದ ವಿರೋಧವಾಗಿತ್ತು. ಹಿಂದಿನ ಕಾಲದಿಂದಲೂ ರೋಮ್‌ನ ಪೋಪರು ಜರ್ಮನಿಯಲ್ಲಿದ್ದ ರಾಜರುಗಳಿಗೆ ವಿರೋಧವಾಗಿದ್ದರು. ಜರ್ಮನಿಯಲ್ಲಿ ಪೋಪನ ಪ್ರಭಾವ ಹೆಚ್ಚಾಗಿತ್ತು. ಪೋಪನಿಗೆ ಮುಂಚಿನ ಲೌಕಿಕ ಸ್ಥಾನಮಾನ ನೀಡಲು ಮತ್ತು ಚರ್ಚ್‌ನ ಹಿತಾಸಕ್ತಿಯನ್ನು ಕಾಪಾಡಲು ಒಂದು ರಾಜಕೀಯ ಪಕ್ಷವನ್ನು ಸ್ಥಾಪಿಸಲಾಯಿತು. ಇದೇ ಕ್ಯಾಥೊಲಿಕ್ ಸೆಂಟರ್ ಪಕ್ಷ. ಆದರೆ ಇದು ರಾಷ್ಟ್ರ ವಿರೋಧಿ ಪಕ್ಷವಾಗಿತ್ತು. ಏಕೆಂದರೆ ತನ್ನ ಬೆಂಬಲಕ್ಕೆ ಹೊರಗಿನಿಂದ ಸಹಾಯ ಪಡೆಯಲು ಪ್ರಯತ್ನಿಸುತ್ತಿತ್ತು. ಸತತವಾಗಿ ಬಿಸ್ಮಾರ್ಕನ ಒಳಾಡಳಿತ ನೀತಿ ಹಾಗೂ ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ವಿರೋಧಿಸುತ್ತಿತ್ತು. ಪೋಪನು ತನ್ನ ಇನ್‌ಫ್ಯಾಲಿಬಲಿಟಿ ಆಜ್ಞೆಯ ಮೂಲಕ ಜರ್ಮನಿಯಲ್ಲಿದ್ದ ಕ್ಯಾಥೊಲಿಕ್ಕರು ಪೋಪನಿಗೆ ವಿಧೇಯರಾಗಿರುವಂತೆ ಆಜ್ಞಾಪಿಸಿದನು. ಕ್ಯಾಥೊಲಿಕ್ಕರು ರಾಜ್ಯಕ್ಕಿಂತ ಹೆಚ್ಚಾಗಿ ರೋಮನ್ ಕ್ಯಾಥೊಲಿಕ್ ಚರ್ಚ್‌ಗೆ ವಿಧೇಯರಾಗಿರುವಂತೆ ಹೇಳಿದನು. "ಪೋಪನ ಇನ್‌ಫ್ಯಾಲಿಬಲಿಟಿಯು ರಾಜ್ಯಕ್ಕೆ ಬೆದರಿಕೆ ಹಾಕುತ್ತಿದೆ. ಯಾವ ಹಕ್ಕುಗಳು ಪೋಪನಿಗೆ ಇಷ್ಟವೋ ಅದನ್ನೇ ಸರಿಯೆಂದು ಹೇಳುತ್ತಿದ್ದಾನೆ. ಪೋಪ್ ಜರ್ಮನಿಯ ಕಾಯಿದೆಗಳನ್ನು ತುಳಿದುಜನರ ಮೇಲೆ ತೆರಿಗೆಯನ್ನು ವಿಧಿಸುತ್ತಿದ್ದಾನೆ" ಎಂದು ಬಿಸ್ಮಾರ್ಕನು ಟೀಕಿಸಿದನು. ಬಿಸ್ಮಾರ್ಕನು ರೋಮನ್ ಕ್ಯಾಥೊಲಿಕ್ಕರ ಸರ್ಕಾರದ ಹಿಡಿತಕ್ಕೊಳಪಡಿಸಲು ಒಂದು ಹೋರಾಟವನ್ನೇ ನಡೆಸಿದನು. ಲಿಬರಲ್ಸ್ ಈ ಹೋರಾಟವನ್ನು ಸಾಂಸ್ಕೃತಿಕ ಸಂಘರ್ಷ ಅಥವಾ 'ಕುಲ್ತರ್ ಕಾಂಫ್' ಎಂದು ವಿವರಿಸಿದ್ದಾರೆ.

ರೀಚ್‌ಸ್ಟಾಗ್‌ನಲ್ಲಿ 1871 ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಕ್ಯಾಥೊಲಿಕ್ ಪಕ್ಷ 63 ಸ್ಥಾನಗಳನ್ನು ಪಡೆಯಿತು. ಬಿಸ್ಮಾರ್ಕನು ಈ ಪಕ್ಷವನ್ನು ಸದೆಬಡಿಯಲು ತೀರ್ಮಾನಿಸಿದನು. ಸಾಂಸ್ಕೃತಿಕ ಸಂಘರ್ಷಕ್ಕೆ ತಕ್ಷಣದ ಕಾರಣ ಕ್ಯಾಥೊಲಿಕ್ಕರ ನಡುವೆ ಪ್ರಾರಂಭವಾದ ಒಳ ಜಗಳ. 1870 ರಲ್ಲಿ ರಾಜಕೀಯ ಅಧಿಕಾರ ಕಳೆದುಕೊಂಡಿದ್ದ ರೋಮನ್ ಕ್ಯಾಥೊಲಿಕ್ ಚರ್ಚ್ ತನ್ನ ಆಧ್ಯಾತ್ಮಿಕ ಅಧಿಕಾರವನ್ನಾದರೂ ರಕ್ಷಿಸಿಕೊಳ್ಳಬೇಕೆಂದು ನಿರ್ಧರಿಸಿತು. ಆ ವರ್ಷ ವ್ಯಾಟಿಕನ್ ಕೌನ್ಸಿಲ್ ಪೋಪ್‌ನ ಇನ್‌ಫ್ಯಾಲಿಬಲಿಟಿ ಸಿದ್ಧಾಂತವನ್ನು ಘೋಷಿಸಿತು. ಶ್ರದ್ಧೆ ಹಾಗೂ ನೀತಿಯ ಬಗ್ಗೆ ರೋಮನ್ ಕ್ಯಾಥೊಲಿಕ್ ಚರ್ಚ್‌ನ ಅಧಿಪತಿ ಪೋಪ್ ನೀಡುವ ಆಜ್ಞೆಗಳು ದೋಷರಹಿತವಾಗಿರುವುದರಿಂದ ಅವುಗಳನ್ನು ಬೇರಾರು ಬದಲಾಯಿಸಲಾಗದೆಂದು ಈ ಹೊಸ ಸಿದ್ಧಾಂತ ಸಾರಿತು. ಜರ್ಮನಿಯ ಬಹುತೇಕ ಮಂದಿ ಪೋಪನ ಈ ಆಜ್ಞೆಯನ್ನು ಪರಿಪಾಲಿಸಲು ಒಪ್ಪಿಕೊಂಡರು. ಆದರೆ ಕೆಲವರು ಇದನ್ನು ನಿರಾಕರಿಸಿದರು. ಈ ರೀತಿ ಆಜ್ಞೆಯನ್ನು ತಿರಸ್ಕರಿಸಿದವರನ್ನು ಹಳೆಯ ಕ್ಯಾಥೊಲಿಕ್ಕರು (Old Catholics) ಎಂದು ಕರೆಯಲಾಯಿತು. ಪೋಪನ ಪರವಾಗಿದ್ದ ಬಿಷಪ್ಪರುಗಳು ಹಳೆಯ ಕಾಥೊಲಿಕ್ಕರನ್ನು ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಶಾಲೆಗಳಲ್ಲಿ ಅವರು ಹೊಂದಿರುವ ಹುದ್ದೆಗಳಿಂದ ತೆಗೆದು ಹಾಕಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ಆದರೆ ಸರ್ಕಾರ ಅವರ ಒತ್ತಾಯಕ್ಕೆ ಮಣಿಯದೆ ಹಳೆಯ ಕ್ಯಾಥೊಲಿಕ್ಕರ ರಕ್ಷಣೆಗೆ ಬಿಸ್ಮಾರ್ಕನು ಪೋಪನ ಹೊಸ ನಿರ್ದೇಶನವನ್ನು ತಿರಸ್ಕರಿಸಿದನು. ಈ ರೀತಿಯಾಗಿ ಬಿಸ್ಮಾರ್ಕನು ಕ್ಯಾಥೊಲಿಕ್ಕರ ವಿರುದ್ಧ ಹೋರಾಟ ಪ್ರಾರಂಭಿಸಿದನು. ಈ ಸಿದ್ಧಾಂತವು ಕ್ಯಾಥೊಲಿಕ್ಕರ ರಾಜನಿಷ್ಠೆಯನ್ನು ಕುಂಠಿತಗೊಳಿಸಿ ಕ್ಯಾಥೊಲಿಕ್ ಚರ್ಚಿಗೆ ಮಾತ್ರ ನಿಷ್ಠರನ್ನಾಗಿ ಮಾಡುವುದೆಂದೂ, ಇದರಿಂದ ಜರ್ಮನ್ ಸಾಮ್ರಾಜ್ಯ ದುರ್ಬಲವಾಗಿದೆ ಎಂದು ಭಾವಿಸಿದನು.

ಬಿಸ್ಮಾರ್ಕನು ರೋಮನ್ ಕ್ಯಾಥೊಲಿಕ್ಕರನ್ನು ಸದೆಬಡಿಯಲು ಹಲವಾರು ಕ್ರಮಗಳನ್ನು ಕೈಗೊಂಡನು. ಅನೇಕ ಕಾಯಿದೆಗಳನ್ನು ಜಾರಿಗೆ ತರುವುದರ ಮೂಲಕ ಕ್ಯಾಥೊಲಿಕ್ಕರ ಅಧಿಕಾರವನ್ನು ಮೊಟಕುಗೊಳಿಸಲಾಯಿತು. ಅವುಗಳಲ್ಲಿ ಮೇ ಕಾಯಿದೆಗಳು ಪ್ರಮುಖವಾದವು. ಇವುಗಳನ್ನು ಮೇ ತಿಂಗಳಲ್ಲಿ ಜಾರಿಗೆ ತಂದ ಕಾರಣ 'ಮೇ ಕಾಯಿದೆಗಳು'ಎಂದು ಕರೆಯಲಾಗಿದೆ. ಈ ಕಾಯಿದೆಗಳನ್ನು ಜರ್ಮನಿಯ ಶಿಕ್ಷಣ ಸಚಿವನಾದ ಫಾಕ್ ನ ಹೆಸರಿನಿಂದಲೂ ಕರೆಯಲಾಗಿದೆ. ಆದುದರಿಂದ ಈ ಕಾನೂನುಗಳನ್ನು ಫಾಕ್ ಕಾಯಿದೆಗಳು ಎಂದೂ ಕರೆಯಲಾಗಿದೆ.

### *101.4.2 ಮೇ ಕಾನೂನುಗಳು*

1871 ರಲ್ಲಿ ಒಂದು ಕಾಯಿದೆಯನ್ನು ಹೊರಡಿಸಿ ಜೆಸೂಟ್‌ರನ್ನು ಜರ್ಮನಿಯಿಂದ ಉಚ್ಚಾಟಿಸಲಾಯಿತು. 1873 ರ ಮೇ ಕಾಯಿದೆಗಳು ಕ್ಯಾಥೊಲಿಕ್ಕರ ಮೇಲೆ ಅನೇಕ ರೀತಿಯ ನಿರ್ಬಂಧಗಳನ್ನು ಹಾಕಿದವು. ಚರ್ಚ್‌ಗಳಲ್ಲಿ ಪಾದ್ರಿಗಳಾಗಿ ಸೇವೆ ಸಲ್ಲಿಸಬೇಕಾದರೆ ಸರ್ಕಾರಿ ಶಾಲೆಗಳು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಮಾಡಬೇಕು ಹಾಗೂ ಸರ್ಕಾರ ನಡೆಸತಕ್ಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು. ನಾಗರೀಕ ವಿವಾಹವನ್ನು ಕಡ್ಡಾಯ ಮಾಡಲಾಯಿತು. ಚರ್ಚ್ ಹೊರಡಿಸುತ್ತಿದ್ದ ಸಾರ್ವಜನಿಕ ಬಹಿಷ್ಕಾರಗಳನ್ನು ನಿಷೇಧಿಸಲಾಯಿತು. ಕ್ಯಾಥೊಲಿಕ್ ಸಂಸ್ಥೆಗಳಲ್ಲಿ ಸರ್ಕಾರದ ಅಧಿಕಾರಿಗಳು ತನಿಖೆ ಮಾಡುವ ಅವಕಾಶ ಕಲ್ಪಿಸಲಾಯಿತು. ಸರ್ಕಾರಕ್ಕೆ ಮಾತ್ರ ಪಾದ್ರಿಗಳನ್ನು ನೇಮಕ ಮಾಡುವ ಮತ್ತು ವಜಾಮಾಡುವ ಅಧಿಕಾರವಿದೆ ಎಂದು ಘೋಷಿಸಲಾಯಿತು. ಎರಡು ವರ್ಷಗಳ ನಂತರ ಎಲ್ಲಾ ಧಾರ್ಮಿಕ ಸಂಸ್ಥೆಗಳನ್ನು ವಿಸರ್ಜಿಸಲಾಯಿತು.

ಮೇ ಕಾನೂನುಗಳು ಆಚರಣೆಗೆ ಅನರ್ಹ ಎಂದು ಪೋಪನು ಘೋಷಿಸಿದನು. ಅವುಗಳನ್ನು ರೋಮನ್ ಕ್ಯಾಥೊಲಿಕ್ಕರು ಗೌರವಿಸಬಾರದೆಂದು ಕರೆಕೊಟ್ಟನು. ಬಿಸ್ಮಾರ್ಕನು ಕೂಡ ಇದಕ್ಕೆ ಜಗ್ಗಲಿಲ್ಲ. ಸುಮಾರು 5 ವರ್ಷಗಳ ಸಾಂಸ್ಕೃತಿಕ ಸಂಘರ್ಷ ಮುಂದುವರಿಯಿತು. ತಾನು ಇಟಲಿಯ ಕನೊಸ್ಸಕ್ಕೆ ಹೋಗಿ, ಪೋಪನಿಗೆ ಶರಣಾಗಾವುದಿಲ್ಲವೆಂದು ಬಹಿರಂಗಪಡಿಸಿದನು. ಬಿಸ್ಮಾರ್ಕನ ಉಗ್ರಕ್ರಮಗಳಿಂದಾಗಿ ಆರು ಮಂದಿ ಕ್ಯಾಥೊಲಿಕ್ ಧರ್ಮಾಧಿಕಾರಿಗಳು ಜೈಲಿಗೆ ಹೋದರು. 1300 ಚರ್ಚ್‌ಗಳಲ್ಲಿ ಪೂಜೆ ಪುರಸ್ಕಾರಗಳು ನಿಂತವು. ನೂರಾರು ಮಂದಿ ಪಾದ್ರಿಗಳು ದೇಶಭ್ರಷ್ಟರಾದರು. ಅನೇಕ ಕ್ಯಾಥೊಲಿಕ್ಕರನ್ನು ರಾಜ್ಯ ಸೇವಾ ವೃತ್ತಿಯಿಂದ ನಿವೃತ್ತಿಗೊಳಿಸಲಾಯಿತು.

### *101.4.3 ಬಿಸ್ಮಾರ್ಕ್ ಹೋರಾಟದಿಂದ ಹಿಂದೆ ಸರಿದುದು*

ತಮ್ಮ ವಿರುದ್ಧ ಪ್ರಯೋಗ ಮಾಡಿದ ಕಾನೂನುಗಳಿಂದ ಜರ್ಮನಿಯ ಕ್ಯಾಥೊಲಿಕ್ಕರು ಧೃತಿಗೆಡಲಿಲ್ಲ. ಅವರು ಧೈರ್ಯದಿಂದಲೇ ಅವುಗಳನ್ನು ವಿರೋಧಿಸಿದರು. ವಿಂಡ್‌ಥಾರ್ಸ್ಟ್‌ನ ನಾಯಕತ್ವದಲ್ಲಿ ಕ್ಯಾಥೊಲಿಕ್ ಸೆಂಟರ್ ಪಾರ್ಟಿ, ರೋಮನ್ ಕ್ಯಾಥೊಲಿಕ್ಕರ ವಿರುದ್ಧ ಜಾರಿಗೊಳಿಸಿದ್ದ ಎಲ್ಲಾ ಶಾಸನಗಳನ್ನು ಹಿಂದಕ್ಕೆ ಪಡೆಯಬೇಕೆಂದು ಒತ್ತಾಯ ಮಾಡಿತು. 1879 ರಲ್ಲಿ ನಡೆದ ಚುನಾವಣೆಯಲ್ಲಿ ವಿಂಡ್‌ಥಾರ್ಸ್ಟ್‌ನ ನಾಯಕತ್ವದ ಸೆಂಟರ್ ಪಾರ್ಟಿ ರೀಚ್‌ಸ್ಟಾಗ್‌ನಲ್ಲಿ 92 ಸ್ಥಾನಗಳಿಸಿ ಬಿಸ್ಮಾರ್ಕನಿಗೆ ತಲೆನೋವಾಗಿ ಪರಿಣಮಿಸಿತು. ಕ್ಯಾಥೊಲಿಕ್ಕರ ವಿರುದ್ಧ ಹೋರಾಟವನ್ನು ಮುಂದುವರಿಸುವುದರಲ್ಲಿ ಅರ್ಥವಿಲ್ಲವೆಂದು ಮನಗಂಡನು. 1878 ರಲ್ಲಿ ಪೋಪ್ ಪಯಸ್ ಮರಣಹೊಂದಿದನು. ಅವನ ಉತ್ತರಾಧಿಕಾರಿ ಪೋಪ್ ಹದಿಮೂರನೆ ಲಿಯೋ ಹೊಂದಾಣಿಕೆಯ ಪ್ರವೃತ್ತಿಯವನಾಗಿದ್ದನು. ಈತನೊಡನೆ ಬಿಸ್ಮಾರ್ಕನು ರಾಜಿಮಾಡಿಕೊಳ್ಳಲು ತೀರ್ಮಾನಿಸಿದನು. ಉಕ್ಕಿನ ಛಾನ್ಸಲರ್ ಬಿಸ್ಮಾರ್ಕ್ ಕ್ಯಾಥೊಲಿಕ್ಕರ ವಿರುದ್ಧದ ಸಂಘರ್ಷದಲ್ಲಿ ಮಣಿದನು. ಪೋಪನು ಜರ್ಮನ್ ಪ್ರತಿನಿಧಿಯನ್ನು ವ್ಯಾಟಿಕನ್‌ಗೆ ಬರಮಾಡಿಕೊಳ್ಳುವುದರ ಮೂಲಕ ಪೋಪ್ ಮತ್ತು ಬಿಸ್ಮಾರ್ಕ್‌ನ ನಡುವೆ ರಾಜತಾಂತ್ರಿಕ ಸಂಬಂಧಗಳು ಪುನಃ ಪ್ರಾರಂಭವಾದವು. ಬಿಸ್ಮಾರ್ಕ್ ಹಂತಹಂತವಾಗಿ ಕ್ಯಾಥೊಲಿಕ್ಕರ ವಿರುದ್ಧದ ಕಾನೂನುಗಳನ್ನು ರದ್ದುಗೊಳಿಸಿದನು. 1887 ರಲ್ಲಿ

ಪೋಪನು ಕ್ಯಾಥೊಲಿಕ್ ಸೆಂಟರ್ ಪಾರ್ಟಿಯ ಸದಸ್ಯರನ್ನು ಇಂಪೀರಿಯಲ್ ಆರ್ಮಿ ಬಿಲ್‌ನ ವಿರುದ್ಧ (Imperial Army Bill) ನಿರ್ದೇಶಿಸಿದನು. ಮೇಲಿನ ವಿವರಣೆಯಿಂದ ಬಿಸ್ಮಾರ್ಕನು ಸಾಂಸ್ಕೃತಿಕ ಸಂಘರ್ಷದಲ್ಲಿ ವಿಫಲನಾದನೆಂಬುದು ಅರ್ಥವಾಗುತ್ತದೆ.

ಬಿಸ್ಮಾರ್ಕನು ಕ್ಯಾಥೊಲಿಕ್ಕರ ವಿರುದ್ಧದ ಹೋರಾಟವನ್ನು ನಿಲ್ಲಿಸಬೇಕಾದರೆ ಕಾರಣವೇನೆಂದರೆ ಅವನ ಅರ್ಥನೀತಿಯಲ್ಲಿ ಆದ ಬದಲಾವಣೆ. ಈ ಬದಲಾವಣೆಯಿಂದಾಗಿ ಲಿಬರಲ್ಸ್‌ರವರ ಬೆಂಬಲವನ್ನು ಕಳೆದುಕೊಂಡನು. ಇಂಗ್ಲೆಂಡ್ ಮತ್ತು ಫ್ರಾನ್ಸ್ ಯೂರೋಪಿನಲ್ಲಿ ಮುಕ್ತ ವ್ಯಾಪಾರವನ್ನು ಸ್ಥಾಪಿಸಿದವು. ಬಿಸ್ಮಾರ್ಕನು ವ್ಯವಸಾಯವನ್ನು ರಕ್ಷಿಸುವ ದೃಷ್ಟಿಯಿಂದ ಮುಕ್ತ ವ್ಯಾಪಾರಕ್ಕೆ ಅವಕಾಶ ನೀಡಲಿಲ್ಲ. ಜರ್ಮನಿಯ ವ್ಯವಸಾಯೋತ್ಪನ್ನಗಳ ರಕ್ಷಣೆಗಾಗಿ ವಿದೇಶದಿಂದ ಆಮದಾಗುತ್ತಿದ್ದ ಧವಸಧಾನ್ಯಗಳ ಮೇಲೆ ಹೆಚ್ಚು ತೆರಿಗೆಗಳನ್ನು ವಿಧಿಸಲು ಪ್ರಾರಂಭಿಸಿದನು.

ಬಿಸ್ಮಾರ್ಕನ ಕ್ಯಾಥೋಲಿಕ್ಕರ ವಿರುದ್ಧದ ಹೋರಾಟ ವಿಫಲವಾಯಿತು ಎಂಬುದನ್ನು ಒಪ್ಪಿಕೊಂಡನು. ಕ್ಯಾಥೊಲಿಕ್ ಸೆಂಟರ್ ಪಕ್ಷ ಇನ್ನೂ ಪ್ರಬಲವಾಯಿತು. ಅದು ಡೆಮೊಕ್ರಾಟ್ಸ್ ಮತ್ತು ಸೋಷಿಯಲಿಸ್ಟರ ಜೊತೆಗೂಡಿ ಅನೇಕ ರಾಜಕೀಯ ಮತ್ತು ಇನ್ನಿತರ ಸುಧಾರಣೆಗಳನ್ನು ಜಾರಿಗೆ ತರುವಂತೆ ಸರ್ಕಾರದ ಮೇಲೆ ಒತ್ತಡವನ್ನು ಪ್ರಾರಂಭಿಸಿತು.

## 101.5 ಬಿಸ್ಮಾರ್ಕ್ ಮತ್ತು ಸಮಾಜವಾದಿಗಳು

ಬಿಸ್ಮಾರ್ಕನು ಸಮಾಜವಾದಿಗಳ ವಿರುದ್ಧ ಹೋರಾಟವನ್ನು ನಡೆಸಬೇಕಾದರೆ ಕ್ಯಾಥೊಲಿಕ್ಕರ ವಿರುದ್ಧದ ಹೋರಾಟಕ್ಕೆ ತೆರೆ ಎಳೆಯಬೇಕಾಗಿತ್ತು. ಸಮಾಜವಾದಿಗಳು ಸೋಷಿಯಲ್ ಡೆಮೊಕ್ರಾಟಿಕ್ ಎಂಬ ಪಕ್ಷವನ್ನು ರಚಿಸಿಕೊಂಡು ಹೆಚ್ಚು ಸಂಘಟಿತರಾಗಿದ್ದರು. ಅವರು ರಾಜನ ವಿರೋಧಿಗಳು ಸೈನ್ಯದ ವಿರೋಧಿಗಳು, ಕ್ಯಾಥೊಲಿಕ್ಕರಂತೆ 'ದೇಶವಿಲ್ಲದ ಜನ'ಎಂದು ಬಿಸ್ಮಾರ್ಕ್ ಅಭಿಪ್ರಾಯಪಟ್ಟನು. ಅವರು ಸಾಮ್ರಾಜ್ಯದ ಶತ್ರುಗಳಾಗಿದ್ದರು.

### 101.5.1 *ಸಮಾಜವಾದಿಗಳ ಘೋಷಣೆಗಳು*

ಸಮಾಜವಾದಿಗಳು ಪ್ರಬಲವಾಗುತ್ತಿರುವುದನ್ನು ಬಿಸ್ಮಾರ್ಕನು ಗಮನಿಸಿದ್ದನು. ಜರ್ಮನಿಯಲ್ಲಿ ನಡೆದ ಕೈಗಾರಿಕಾ ಕ್ರಾಂತಿಯಿಂದಾಗಿ ಸಮಾಜವಾದದ ತತ್ವಗಳು ಹರಡಿದವು. ಜರ್ಮನಿಯಲ್ಲಿ ಕೈಗಾರಿಕೆಗಳ ಬೆಳವಣಿಗೆ ವೃದ್ಧಿಸಿದಂತೆ ನಗರದಲ್ಲಿ ವಾಸಿಸುವವರ ಕಾರ್ಮಿಕರ ಸಂಖ್ಯೆ ಹೆಚ್ಚಾಯಿತು. ಅವರು ಸಮಾಜವಾದಿಗಳ ಕಡೆ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ತಿರುಗಿದರು. ಕಾರ್ಮಿಕರ ಮತ್ತು ದುಡಿಯುವ ವರ್ಗದವರ ಹಿತಾಸಕ್ತಿಗಳನ್ನು ಕಾಪಾಡುವುದು ಸಮಾಜವಾದಿಗಳ ಧ್ಯೇಯವಾಗಿತ್ತು. ಇದು ಬಂಡವಾಳಶಾಹಿಗಳ ವಿರೋಧಿಯಾಯಿತು. 1877 ರ ಚುನಾವಣೆಯಲ್ಲಿ 12 ಡೆಪ್ಯೂಟಿಗಳು ರೀಚ್‌ಸ್ಟಾಗ್‌ಗೆ ಸೋಷಿಯಲ್ ಡೆಮೊಕ್ರಟಿಕ್ ಪಕ್ಷದಿಂದ ಚುನಾಯಿಸಲ್ಪಟ್ಟರು. ಈ ಸಮಾಜವಾದಿಗಳು ಕಾರ್ಮಿಕರಿಗೆ ಬೋಧಿಸಿದ ತತ್ವಗಳೆಂದರೆ - ಕ್ರಾಂತಿ, ವರ್ಗಸಂಘರ್ಷ, ರಾಜಕೀಯ ಮತ್ತು ಸಾಮಾಜಿಕ ಪ್ರಜಾಪ್ರಭುತ್ವ, ಖಾಸಗಿ ಆಸ್ತಿಯ ರದ್ದು, ಅಂತರ ರಾಷ್ಟ್ರೀಯತೆ ಮತ್ತು ಶಾಂತಿ ಇವೆಲ್ಲವೂ ಬಿಸ್ಮಾರ್ಕನ ನೀತಿಗಳಿಗೆ ವಿರುದ್ಧವಾಗಿದ್ದವು. ಸಮಾಜವಾದಿಗಳ ಈ ತತ್ವಗಳು ಸಾಮ್ರಾಜ್ಯವನ್ನು, ಕುಟುಂಬವನ್ನು ಮತ್ತು ಸಂಸ್ಕೃತಿಯನ್ನು ನಾಶಪಡಿಸುವ ಗುರಿ ಹೊಂದಿದೆ ಎಂದು ಬಿಸ್ಮಾರ್ಕನು ಹೇಳಿದನು. ಸೋಷಿಯಲಿಸ್ಟರ ಕ್ರಾಂತಿಕಾರ ಭಾಷಣಗಳಿಂದಾಗಿ ಹಾಗೂ ಅವರ ವಿರೋಧಿ ನಿಲುವಿನಿಂದಾಗಿ ಬಿಸ್ಮಾರ್ಕನು ರೊಚ್ಚಿಗೆದ್ದನು. ಆದ್ದರಿಂದ ಸಮಾಜವಾದಿಗಳ ಚಟುವಟಿಕೆಗಳನ್ನು ಎರಡು ಮಾರ್ಗಗಳನ್ನನುಸರಿಸಿ ಹತ್ತಿಕ್ಕಲು ತೀರ್ಮಾನಿಸಿದನು. ಬಲಪ್ರಯೋಗ ಮತ್ತು ಸುಧಾರಣೆಗಳು ಅವನು ಅನುಸರಿಸಿದ ಎರಡು ಮಾರ್ಗಗಳು.

### 101.5.2 ಸಮಾಜವಾದಿಗಳ ವಿರುದ್ಧದ ಕಾಯಿದೆಗಳು

1878 ರಲ್ಲಿ ಸಮಾಜವಾದಿಗಳು ಒಂದನೆಯ ವಿಲಿಯಂನನ್ನು ಹತ್ಯೆ ಮಾಡಲು ನಡೆಸಿದ ಸಂಚು ಅವರ ವಿರುದ್ಧ ಕ್ರಮ ಕೈಗೊಳ್ಳಲು ಒಂದು ಅವಕಾಶ ಒದಗಿಸಿಕೊಟ್ಟಿತು. ರೀಚ್‌ಸ್ಟಾಗ್‌ನಲ್ಲಿ ಅವರ ವಿರುದ್ಧ ಕ್ರಮ ಕೈಗೊಳ್ಳಲು ಕಾನೂನುಗಳನ್ನು ಹೊರಡಿಸಲಾಯಿತು. ಸಮಾಜವಾದಿಗಳ ಸಭೆಗಳನ್ನು ಮತ್ತು ಪ್ರಕಟಣೆಗಳನ್ನು ನಿಷೇಧಿಸಲಾಯಿತು. ಅವರ ವಿರುದ್ಧ ಕ್ರಮ ಕೈಗೊಳ್ಳಲು ಪೋಲಿಸರಿಗೆ ಹೆಚ್ಚು ಅಧಿಕಾರವನ್ನು ನೀಡಲಾಯಿತು. ಅನೇಕ ಸಮಾಜವಾದಿ ಮುಖಂಡರುಗಳನ್ನು ಬಂಧಿಸಲಾಯಿತು. ಸಮಾಜವಾದದ ಪತ್ರಿಕೆಗಳ ಹಾಗೂ ಪುಸ್ತಕಗಳ ಸಂಪಾದಕರನ್ನು ಸೆರೆಮನೆಗೆ ಕಳುಹಿಸಲಾಯಿತು. ಇಷ್ಟೆಲ್ಲಾ. ಕಠಿಣ ಕ್ರಮಗಳನ್ನು ತೆಗೆದುಕೊಂಡರೂ ಸಮಾಜವಾದಿಗಳನ್ನು ನಿರ್ಮೂಲ ಮಾಡಲು ಬಿಸ್ಮಾರ್ಕನಿಗೆ ಸಾಧ್ಯವಾಗಲಿಲ್ಲ. ಕಾರ್ಮಿಕ ಸಂಘಗಳನ್ನು ಕಾನೂನು ಬಾಹಿರ ಎಂದು ಘೋಷಿಸಲಾಯಿತು. ಜರ್ಮನಿಯಲ್ಲಿ ನಡೆಸಲಾಗದ ಸಭೆಗಳನ್ನು ಸಮಾಜವಾದಿಗಳು ಹೊರದೇಶಗಳಲ್ಲಿ ನಡೆಸಲು ಪ್ರಾರಂಭಿಸಿದರು. ಬಿಸ್ಮಾರ್ಕನು ಹೇಗೆ ಕ್ಯಾಥೊಲಿಕ್ಕರಿಂದ ಸೋಲನ್ನನುಭವಿಸಿದ್ದನೋ ಅದೇ ರೀತಿ ಸಮಾಜವಾದಿಗಳಿಂದಲೂ ಸೋಲನ್ನನುಭವಿಸಿದನು. 1881 ರಲ್ಲಿ ಸೋಷಿಯಲ್ ಡೆಮೊಕ್ರಟಿಕ್ ಪಕ್ಷಕ್ಕೆ ಸೇರಿದ 12 ಮಂದಿ ಸದಸ್ಯರು ರೀಚ್‌ಸ್ಟಾಗ್‌ನಲ್ಲಿದ್ದರು. 1890 ರ ವೇಳೆಗೆ ರೀಚ್‌ಸ್ಟಾಗ್‌ನಲ್ಲಿ ಈ ಸದಸ್ಯರ ಸಂಖ್ಯೆ 35 ಕ್ಕೇರಿತು. 1890 ರಲ್ಲಿ ಸಮಾಜವಾದಿ ವಿರುದ್ಧದ ಕಾನೂನುಗಳನ್ನು ನವೀಕರಿಸಲಿಲ್ಲ.

ಕೇವಲ ದಮನಕಾರಿ ಕ್ರಮಗಳಿಂದ ಸಮಾಜವಾದವನ್ನು ಸದೆಬಡಿಯಲು ಅಸಾಧ್ಯವೆಂಬುದು ಚತುರ ಬಿಸ್ಮಾರ್ಕನಿಗೆ ತಿಳಿದಿತ್ತು. ದಯೆಯಿಂದಲೂ ಅದನ್ನು ಕೊಲ್ಲಲು ಯತ್ನಿಸಿದನು. ಆದುದರಿಂದ ಕಠಿಣ ಮಾರ್ಗಗಳನ್ನು ಅನುಸರಿಸುವುದರ ಜೊತೆಗೆ 'ರಾಜ್ಯ ಸಮಾಜವಾದ'ಪದ್ಧತಿಯನ್ನು ಜಾರಿಗೊಳಿಸುವುದರ ಮೂಲಕ ಎರಡು ಉದ್ದೇಶಗಳನ್ನು ಸಾಧಿಸಲು ಹೊರಟನು. ಒಂದು ಕಡೆ ಸಮಾಜವಾದಿಗಳನ್ನು ಹತ್ತಿಕ್ಕುವುದರ ಜೊತೆಗೆ ಮತ್ತೊಂದೆಡೆ ಕಾರ್ಮಿಕರ ಆರ್ಥಿಕ ತೊಂದರೆಗಳನ್ನು ನಿವಾರಿಸುವುದಾಗಿತ್ತು. ಸರ್ಕಾರವು ಕಾರ್ಮಿಕ ವರ್ಗದ ಕುಂದುಕೊರತೆಗಳನ್ನು ನಿವಾರಿಸಲು ಉತ್ಸುಕವಾಗಿದೆ ಎಂಬುದನ್ನು ಕಾರ್ಮಿಕರಿಗೆ ತಿಳಿಸಲು ಪ್ರಯತ್ನಿಸಿದನು. ಕಾರ್ಮಿಕರಿಗೆ ದಯೆತೋರಿ, ಅವರ ಕಷ್ಟ-ನಷ್ಟಗಳ ಪರಿಹಾರಕ್ಕಾಗಿ ಯೋಜನೆಗಳನ್ನು ರೂಪಿಸುವ ಮೂಲಕ ಅವರನ್ನು ಸರ್ಕಾರದ ಪರ ಒಲಿಸಿಕೊಳ್ಳುವುದು ಬಿಸ್ಮಾರ್ಕನ ನೀತಿಯಾಗಿತ್ತು. ಕಾರ್ಮಿಕರು ರಾಜ್ಯಕ್ಕೆ ವಿಧೇಯರಾಗಿರುವಂತೆ ಮಾಡಲು ಪ್ರಯತ್ನ ನಡೆಸಿದನು. ಕಾರ್ಮಿಕರ ಕಲ್ಯಾಣಕ್ಕಾಗಿ ಕೆಲವು ಯೋಜನೆಗಳನ್ನು ಶಾಸನಗಳ ಮೂಲಕ ಜಾರಿಗೊಳಿಸಿದನು. 1883 ಮತ್ತು 1884 ರಲ್ಲಿ ಕ್ರಮವಾಗಿ ಅಸ್ವಸ್ಥತೆ ಮತ್ತು ಅಪಘಾತಗಳಿಗೆ ಸಂಬಂಧಿಸಿದಂತೆ ಜೀವ ವಿಮಾ ಕಾನೂನುಗಳನ್ನು ಜಾರಿಗೊಳಿಸಲಾಯಿತು. 1887 ರಲ್ಲಿ ಕೈಗಾರಿಕೆಗಳನ್ನು ಸ್ತ್ರೀಯರು ಮತ್ತು ಮಕ್ಕಳನ್ನು ದುಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ನಿರ್ಬಂಧ ಹೇರಲಾಯಿತು. ಕಾರ್ಖಾನೆಗಳಲ್ಲಿ ಕಾರ್ಮಿಕರ ದುಡಿಮೆಯ ಅವಧಿಯನ್ನು ಕಡಿಮೆ ಮಾಡಲಾಯಿತು. ಭಾನುವಾರವನ್ನು ರಜಾದಿನವೆಂದು ಘೋಷಿಸಲಾಯಿತು. ಕಾರ್ಖಾನೆಗಳಲ್ಲಿ ಮತ್ತು ಗಣಿಗಳಲ್ಲಿ ಅಧಿಕಾರಿಗಳು ಮೇಲ್ವಿಚಾರಣೆ ನಡೆಸಲು ಕಾನೂನುಗಳನ್ನು ಹೊರಡಿಸಲಾಯಿತು. ಈ ಜೀವವಿಮಾ ಕಾನೂನುಗಳು ಇಂಗ್ಲೆಂಡ್, ಫ್ರಾನ್ಸ್ ಮತ್ತು ಇತರ ದೇಶಗಳಿಗೆ ಮಾದರಿಯಾದವು. ಆದರೆ ಬಿಸ್ಮಾರ್ಕನು ಕಾರ್ಮಿಕರ ಕಲ್ಯಾಣಕ್ಕಾಗಿ ತಂದ ಈ ಶಾಸನಗಳು ಸಮಾಜವಾದವನ್ನು ನಾಶಪಡಿಸುವುದರ ಬದಲು, ಅವುಗಳು ಸಮಾಜವಾದದ ಬೆಳವಣಿಗೆಗೆ ಮತ್ತಷ್ಟು ಪ್ರೋತ್ಸಾಹ ನೀಡಿದವು. ಸಮಾಜವಾದಿಗಳು ಬಿಸ್ಮಾರ್ಕನ ಈ ಸುಧಾರಣೆಗಳನ್ನು ಅರ್ಧಂಭರ್ದ ಸುಧಾರಣೆಗಳೆಂದು ಕರೆದರು. ಅವರು ಇನ್ನೂ ಹೆಚ್ಚಿನ ಕ್ರಾಂತಿಕಾರಕ ಸುಧಾರಣೆಗಳು ಬೇಕೆಂದು ಮನವಿ ಮಾಡಿದರು. ಈ ರೀತಿಯಾಗಿ ಅವನ ಸಮಾಜವಾದದ ಹೋರಾಟವು ಕೂಡ ವಿಫಲವಾಯಿತು.

## 101.6 ಬಿಸ್ಮಾರ್ಕನ ಸುಂಕ ರಕ್ಷಣಾ ನೀತಿ

ಬಿಸ್ಮಾರ್ಕನು ಪಾರ್ಲಿಮೆಂಟಿನ ಮೇಲೆ ಒತ್ತಡ ತಂದು 1879 ರಲ್ಲಿ ಹಣಕಾಸು ಹಾಗೂ ಕೈಗಾರಿಕೆಗೆ ಸಂಬಂಧಿಸಿದಂತೆ ಪ್ರಗತಿಪರ ಬದಲಾವಣೆಗಳನ್ನು ತಂದನು. ವಿದೇಶಿ ಸರಕುಗಳ ಮೇಲೆ ಕಡಿಮೆ ಸುಂಕ ವಿಧಿಸುವುದನ್ನು ನಿಲ್ಲಿಸಿ ಹೆಚ್ಚಿನ ತೆರಿಗೆಯನ್ನು ವಿಧಿಸಬೇಕೆಂಬ ನಿಯಮವನ್ನು ಜಾರಿಗೊಳಿಸುವುದರಲ್ಲಿ ಯಶಸ್ವಿಯಾದನು. ಈ ರೀತಿ ಔದ್ಯಮಿಕ ರಕ್ಷಣಾ ನೀತಿಯನ್ನು ಅನುಸರಿಸಿದುದರಿಂದ ಮುಕ್ತ ವ್ಯಾಪಾರವನ್ನು ರದ್ದುಗೊಳಿಸಿದಂತಾಯಿತು. ಈ ನೀತಿಯು ಎರಡು ಉದ್ದೇಶಗಳಿಂದ ಕೂಡಿತ್ತು. ಮೊದಲನೆಯದಾಗಿ ರಾಜ್ಯದ ಆಧಾಯವನ್ನು ಹೆಚ್ಚಿಸುವುದಾಗಿತ್ತು. ಎರಡನೆಯದಾಗಿ ಶೈಶವಾವಸ್ಥೆಯಲ್ಲಿದ್ದ ದೇಶಿಯ ಕೈಗಾರಿಕೆಗಳನ್ನು ವಿದೇಶಿ ಸ್ಪರ್ಧೆಯ ವಿರುದ್ಧ ರಕ್ಷಣೆ ನೀಡಿ ಅವುಗಳನ್ನು ಅಭಿವೃದ್ಧಿ ಪಡಿಸುವುದಾಗಿತ್ತು. ಬಿಸ್ಮಾರ್ಕನು ಈ ನೀತಿಯಲ್ಲಿ ಸಂಪೂರ್ಣವಾಗಿ ಯಶಸ್ವಿಯಾದನು. ವಿದೇಶ ಸರಕುಗಳ ಮೇಲೆ ಹೆಚ್ಚಿನ ಸುಂಕ ವಿಧಿಸಿದರೂ ವಿದೇಶಿಯರಿಗೆ ಹಲವು ರಿಯಾಯಿತಿಗಳನ್ನು ನೀಡಿ ಜರ್ಮನಿಯ ಉತ್ಪಾದನೆಗಳಿಗೆ ವಿದೇಶಿ ಮಾರುಕಟ್ಟೆಗಳಲ್ಲಿ ಬೇಡಿಕೆಯನ್ನುಂಟು ಮಾಡುವುದರಲ್ಲಿಯೂ ಯಶಸ್ವಿಯಾದನು.

ಅದೇ ರೀತಿ ವ್ಯವಸಾಯೋತ್ಪನ್ನಗಳಿಗೂ ರಕ್ಷಣೆ ನೀಡಿದನು. ದೊಡ್ಡ ಜಮಿನ್ದಾರನಾಗಿ ರೈತರ ಸಂಕಷ್ಟಗಳನ್ನು ಅರಿತಿದ್ದನು. ಕೈಗಾರಿಕೆ ಮತ್ತು ವ್ಯವಸಾಯದ ನಡುವೆ ಸಮತೋಲನ ಕಾಪಾಡುವ ದೃಷ್ಟಿಯಿಂದ ವ್ಯವಸಾಯಕ್ಕೂ ಪ್ರೋತ್ಸಾಹದ ಅವಶ್ಯಕತೆ ಇತ್ತು. ಇದರ ಪ್ರಕಾರ 1885 ಮತ್ತು 1887 ರಲ್ಲಿ ಎರಡು ಮಸೂದೆಗಳನ್ನು ಹೊರಡಿಸಿ ಆಮದು ಮಾಡಿಕೊಳ್ಳುತ್ತಿದ್ದ ವ್ಯವಸಾಯೋತ್ಪನ್ನಗಳ ಮೇಲೆ ಹೆಚ್ಚಿನ ಸುಂಕವನ್ನು ವಿಧಿಸುವ ಪದ್ಧತಿಯನ್ನು ಜಾರಿಗೆ ತಂದನು. ವಿಶೇಷವಾಗಿ ಧಾನ್ಯಗಳ ಮೇಲೆ ಹೆಚ್ಚಿನ ಸುಂಕವನ್ನು ವಿಧಿಸಲಾಯಿತು. ಈ ರಕ್ಷಣಾ ನೀತಿಯಿಂದಾಗಿ ರೈತರು ಹೆಚ್ಚಿನ ತೊಂದರೆಗೊಳಗಾಗಲಿಲ್ಲ.

## 101.7 ಬಿಸ್ಮಾರ್ಕನ ರಾಷ್ಟ್ರೀಯತೆಯ ನೀತಿ

ಜರ್ಮನಿಯ ಸಾಮ್ರಾಜ್ಯದಲ್ಲಿ ನೆಲೆಸಿದ್ದ ವಿದೇಶಿ ರಾಷ್ಟ್ರೀಯರನ್ನು ಜರ್ಮನೀಕರಣಗೊಳಿಸುವುದಕ್ಕೆ ಅನೇಕ ಪ್ರಯತ್ನಗಳನ್ನು ಬಿಸ್ಮಾರ್ಕನು ನಡೆಸಿದನು. ಜರ್ಮನಿಯ ಸಾಮ್ರಾಜ್ಯದಲ್ಲಿದ್ದ 3 $^{1}/_{2}$ ಮಿಲಿಯನ್ ಪೊಲಿಷ್‌ರು (ಪೋಲೆಂಡಿನವರು) ಸುಮಾರು 1,50,000 ಡೇನರು ಮತ್ತು ಅಲ್ಸೇಸ್ ಮತ್ತು ಲೊರೈನ್‌ನಲ್ಲಿ ನೆಲೆಸಿದ್ದ ಫ್ರೆಂಚರನ್ನು ಬಿಸ್ಮಾರ್ಕ್ ಮತ್ತು ಅವನ ಉತ್ತರಾಧಿಕಾರಿಗಳು ಜರ್ಮನಿಯಲ್ಲಿ ಸಮೀಕರಿಸಲು ಪ್ರಯತ್ನ ನಡೆಸಿದರು. ಈ ವಿದೇಶಿ ಪ್ರಜೆಗಳು ಜರ್ಮನ್ ಸರ್ಕಾರ ನೀಡಿದ ವಿದ್ಯಾಭ್ಯಾಸ, ಆರ್ಥಿಕ ಸಹಾಯ ಮತ್ತು ವೈಜ್ಞಾನಿಕ ಅನುಕೂಲಗಳಿಂದ ಲಾಭ ಪಡೆದುಕೊಂಡರು. ಆದರೆ ಜರ್ಮನ್ ಸಾಮ್ರಾಜ್ಯದೊಳಗಡೆ ವಿಲೀನಗೊಳ್ಳಲು ಇಚ್ಛಿಸಲಿಲ್ಲ. ಮೊದಲನೆಯ ಮಹಾ ಯುದ್ಧದಲ್ಲಿ ಜರ್ಮನಿಯು ಸೋಲನ್ನನುಭವಿಸಿದ ಮೇಲೆ ಈ ವಿದೇಶಿಯರು ತಮ್ಮ ಸ್ವದೇಶಗಳೊಡನೆ ವಿಲೀನಗೊಂಡರು.

## 101.8 ವಸಾಹತುಗಳ ಸ್ಥಾಪನೆ

ಬಿಸ್ಮಾರ್ಕನ ರಾಜಕೀಯ ಜೀವನದ ಕೊನೆಯ ವರ್ಷಗಳ ಮತ್ತೊಂದು ಸಾಧನೆ ಎಂದರೆ ವಸಾಹತುಗಳ ಸ್ಥಾಪನೆ. ಪ್ರಾರಂಭದಲ್ಲಿ ಈತನು ವಸಾಹತುಗಳ ಸ್ಥಾಪನೆಗೆ ಯಾವುದೇ ಉತ್ಸಾಹ ತೋರಲಿಲ್ಲ. ಏಕೆಂದರೆ ವಸಾಹತುಗಳ ಸ್ಥಾಪನೆಯ ಪೈಪೋಟಿಯಲ್ಲಿ ಬೇರೆ ರಾಷ್ಟ್ರಗಳ ಶತ್ರುತ್ವವನ್ನು ಬೆಳೆಸಿಕೊಳ್ಳಬಾರದೆಂಬ ನಿಲುವನ್ನು ಬಿಸ್ಮಾರ್ಕನು ಹೊಂದಿದ್ದನು. ಆದರೆ ಕಾಲಕ್ರಮೇಣ ಬಿಸ್ಮಾರ್ಕನು ಸುಂಕ ರಕ್ಷಣಾ ನೀತಿಯಿಂದಾಗಿ ಕೈಗಾರಿಕೆಗಳು ಅಭಿವೃದ್ಧಿ ಹೊಂದಿ ಹೆಚ್ಚು ಉತ್ಪಾದಿಸಿದವು. ಈ ಕೈಗಾರಿಕೋತ್ಪನ್ನಗಳಿಗೆ ವಿದೇಶಿ ಮಾರುಕಟ್ಟೆಗಳ ಅವಶ್ಯಕತೆ ಉಂಟಾಯಿತು. ಆದ್ದರಿಂದ ಬಿಸ್ಮಾರ್ಕನು ವಸಾಹತುಗಳ ಸ್ಥಾಪನೆಯ ಕಡೆ ಗಮನ ಹರಿಸಿದನು. 1884 ರಿಂದ ಬಿಸ್ಮಾರ್ಕನು ಆಫ್ರಿಕಾದಲ್ಲಿ ಅನೇಕ ಸ್ಥಳಗಳನ್ನು ಆಕ್ರಮಿಸಿಕೊಂಡನು. ಅಂತಿಮವಾಗಿ ಆಫ್ರಿಕಾದಲ್ಲಿ ಕ್ಯಾಮರೂನ್,

ಟೊಗೊಲ್ಯಾಂಡ್, ಜರ್ಮನಿಯ ನೈರುತ್ಯ ಆಫ್ರಿಕಾ, ಜರ್ಮನಿಯ ಆಗ್ನೇಯ ಆಫ್ರಿಕಾ, ನ್ಯೂಗಿನಿಯಾದ ಒಂದು ಭಾಗವನ್ನು ಜರ್ಮನಿ ಆಕ್ರಮಿಸಿಕೊಂಡಿತು. 1899 ರಲ್ಲಿ ಜರ್ಮನಿಯ ಲ್ಯಾಂಡ್ರೋನ್ ದ್ವೀಪಗಳನ್ನು ನಾಲ್ಕು ಮಿಲಿಯನ್ ಡಾಲರ್ ನೀಡಿ ಸ್ಪೇನ್‌ನಿಂದ ಕೊಂಡುಕೊಂಡಿತು. ಸಮೋವನ್ ದ್ವೀಪವು ಕೂಡ ಜರ್ಮನಿಯ ಹಿಡಿತಕ್ಕೊಳಪಟ್ಟಿತು.

## 101.9 ವಿದೇಶಾಂಗ ನೀತಿ

ಬಿಸ್ಮಾರ್ಕನು ತನ್ನ ಅಸಾಧಾರಣ ರಾಜತಾಂತ್ರಿಕ ನೈಪುಣ್ಯದಿಂದ ಜರ್ಮನಿಯ ಏಕೀಕರಣವನ್ನು ಅಲ್ಪಾವಧಿಯಲ್ಲೇ ಸಾಧಿಸಿದ್ದನು. ತಾನು ಕಟ್ಟಿದ ಜರ್ಮನ್ ಸಾಮ್ರಾಜ್ಯಕ್ಕೆ ಮುಂದೆ ಅಪಾಯ ಬಾರದಂತೆ ರಕ್ಷಿಸುವುದು ಅವನ ಆದ್ಯ ಕರ್ತವ್ಯವಾಗಿತ್ತು. ಈ ಕರ್ತವ್ಯ ನಿರ್ವಹಣೆಯಲ್ಲಿ ಆತನು ತನ್ನ ಸಾಮರ್ಥ್ಯವನ್ನೆಲ್ಲ ಬಳಸಿದನು. ಜರ್ಮನಿಯ ಏಕೀಕರಣದ ಸಾಧನೆಗಾಗಿ ತೋರಿದ ರಾಜತಾಂತ್ರಿಕ ಚಾತುರ್ಯ ಮತ್ತು ಕೆಚ್ಚೆದೆಯನ್ನು ಜರ್ಮನ್ ಸಾಮ್ರಾಜ್ಯದ ರಕ್ಷಣೆಯ ಕಾರ್ಯದಲ್ಲೂ ತೋರಿಸಿದನು.

1871ರ ನಂತರ ಬಿಸ್ಮಾರ್ಕನು ಯೂರೋಪಿನಲ್ಲಿ ಶಾಂತಿ ಮತ್ತು ಯಥಾಸ್ಥಿತಿಯನ್ನು ಕಾಪಾಡಲು ಉತ್ಸುಕನಾಗಿದ್ದನು. ಆದರೆ ಇದು ಸುಲಭದ ಕೆಲಸವಾಗಿರಲಿಲ್ಲ. ಏಕೆಂದರೆ ಜರ್ಮನಿಗೆ ಫ್ರಾನ್ಸ್‌ನಿಂದ ಯುದ್ಧದ ಅಪಾಯ ಕಾದಿತ್ತು. ಇದಕ್ಕೆ ಬಿಸ್ಮಾರ್ಕನೇ ಕಾರಣನಾಗಿದ್ದನು. 1871 ರಲ್ಲಿ ಪರಾಭವಗೊಂಡ ಫ್ರಾನ್ಸ್‌ನಿಂದ ಅಲ್ಸೇಸ್ ಮತ್ತು ಲೊರೈನ್‌ಗಳನ್ನು ಕಿತ್ತಿಕೊಂಡಿದ್ದು ಮಹಾ ಪ್ರಮಾದವಾಗಿತ್ತು. ಇದರಿಂದಾಗಿ ಫ್ರಾನ್ಸ್ ಜರ್ಮನಿಯ ಶಾಶ್ವತ ಹಾಗೂ ಪರಮ ಶತ್ರುವಾಯಿತು. ಫ್ರೆಂಚರು ತಮ್ಮ ಪ್ರಾದೇಶಿಕ ನಷ್ಟವನ್ನು ಎಂದಿಗೂ ಮರೆಯುವುದು ಸಾಧ್ಯವಿರಲಿಲ್ಲ. ಅಲ್ಸೇಸ್ - ಲೊರೈನ್‌ಗಳು ಆಯಕಟ್ಟಿನ ಸ್ಥಳದಲ್ಲಿದ್ದವಲ್ಲದೆ, ಅಮೂಲ್ಯವಾದ ಕಬ್ಬಿಣ ಹಾಗೂ ಕಲ್ಲಿದ್ದಲು ನಿಕ್ಷೇಪಗಳನ್ನು ಹೊಂದಿದ್ದವು. ಅಂತೆಯೇ ಬಿಸ್ಮಾರ್ಕನು ಅವುಗಳನ್ನು ಸೇರಿಸಿಕೊಂಡು, ಫ್ರಾನ್ಸಿನ ವೈರತ್ವವನ್ನು ಎದುರಿಸಬೇಕಾಯಿತು. ಈ ವೈರತ್ವವನ್ನು ಎದುರಿಸಲು ಬಿಸ್ಮಾರ್ಕನು ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ತನ್ನದೇ ಆದ ಯೋಜನೆಯನ್ನು ರೂಪಿಸಿಕೊಂಡನು.

ಬಿಸ್ಮಾರ್ಕನ ಮುಖ್ಯ ಉದ್ದೇಶ ಯೂರೋಪಿನಲ್ಲಿ ಫ್ರಾನ್ಸನ್ನು ಏಕಾಂಗಿಯಾಗಿ ಜೀವಿಸುವಂತೆ ಮಾಡುವುದಾಗಿತ್ತು. ಅದು ಯೂರೋಪಿನ ಇನ್ನಿತರ ರಾಜ್ಯಗಳೊಡನೆ ಯಾವುದೇ ಒಪ್ಪಂದವನ್ನು ಮಾಡಿಕೊಳ್ಳದಂತೆ ತಡೆಯುವುದಾಗಿತ್ತು. ಫ್ರಾನ್ಸ್‌ನಿಂದ ಮುಂದೆ ಒದಗಬಹುದಾದ ಅಪಾಯವನ್ನು ಅರಿತಿದ್ದ ಬಿಸ್ಮಾರ್ಕ್ ತನ್ನ ರಾಜತಾಂತ್ರಿಕ ನಿಪುಣತೆಯಿಂದ ಅದನ್ನು ಏಕಾಂಗಿಗೊಳಿಸುವ ನೀತಿಯನ್ನು ಅನುಸರಿಸಿದನು.

1871 ರಿಂದ 1890 ರವರೆಗೆ ಅಂತರರಾಷ್ಟ್ರೀಯ ಪರಿಸ್ಥಿತಿಯು ಕೂಡ ಜರ್ಮನಿಗೆ ಅನುಕೂಲವಾಗಿತ್ತು. ಮೊಟ್ಟಮೊದಲನೆಯದಾಗಿ ಬಿಸ್ಮಾರ್ಕನು ಆಸ್ಟ್ರಿಯಾ - ಹಂಗೇರಿಯನ್ನು ಒಲಿಸಿಕೊಳ್ಳಲು ಪ್ರಯತ್ನನಡೆಸಿದನು. 1866 ರಲ್ಲಿ ಆಸ್ಟ್ರಿಯ ಸೋತಾಗ ಬಿಸ್ಮಾರ್ಕನು ಬಹಳ ಔದಾರ್ಯದಿಂದ ನಡೆದುಕೊಂಡನು. ಶಾಂತಿ ಒಪ್ಪಂದವನ್ನು ಮಾಡಿಕೊಂಡಾಗ ಅವನು ನಿಷ್ಠುರವಾಗಿ ನಡೆದುಕೊಳ್ಳಲಿಲ್ಲ. ಅನಂತರ ಇತ್ತೀಚಿಗಷ್ಟೆ ಏಕೀಕರಣವಾಗಿದ್ದ ಇಟಲಿಯೊಡನೆ ಸಂಬಂಧಗಳನ್ನು ಬೆಳಸಿಕೊಂಡನು. ಅನೇಕ ಇಟಲಿಯನ್ನರು ಆಸ್ಟ್ರಿಯಾ ಸೋತಾಗ ಇಟಲಿಯು ಆಸ್ಟ್ರಿಯಾದಿಂದ ವೆನೀಷಿಯಾವನ್ನು ವಶಪಡಿಸಿಕೊಳ್ಳುವುದಕ್ಕೆ ಬಿಸ್ಮಾರ್ಕನೆ ಕಾರಣ ಎಂದು ನಂಬಿದ್ದನು. ಇದರ ಜೊತೆಗೆ ಹೇಗೆ ಜರ್ಮನಿ ಪೋಪರೊಡನೆ ಉತ್ತಮ ಸಂಬಂಧವನ್ನು ಹೊಂದಿರಲಿಲ್ಲವೋ ಅದೇ ರೀತಿ ಇಟಲಿಯು ಕೂಡ ಪೋಪನೊಡನೆ ಸೌಹಾರ್ಧತೆಯಿಂದ ಇರಲಿಲ್ಲ. ಗ್ರೇಟ್ ಬ್ರಿಟನ್ನಿನೊಡನೆ ಯಾವುದೇ ಸಂಘರ್ಷಕ್ಕೆ ಅವಕಾಶ ನೀಡದಂತೆ ಎಚ್ಚರಿಕೆ ವಹಿಸಿದನು. ರಷ್ಯಾದ ಜೊತೆಯು ಕೂಡ ಬಿಸ್ಮಾರ್ಕನು ಮಿತ್ರನಂತೆ ಇದ್ದನು. 1871 ರಲ್ಲಿ ರಷ್ಯಾವು 1856 ರ ಪ್ಯಾರಿಸ್ ಒಪ್ಪಂದದ ಅಂಶಗಳನ್ನು ರದ್ದುಪಡಿಸಲು ಜರ್ಮನಿಯು ಸಹಾಯ ಮಾಡಿತು. ರಷ್ಯಾಕ್ಕೆ ಬಾಲ್ಕನ್ ರಾಜ್ಯಗಳ

ಕಡೆ ವಿಸ್ತರಿಸಲು ಜರ್ಮನಿಯ ಸಹಾಯ ಬೇಕಾಗಿತ್ತು. ಈ ರೀತಿಯಾಗಿ ಜರ್ಮನಿಗೆ ಎಲ್ಲ ರೀತಿಯಿಂದಲೂ ಅನುಕೂಲವಾದ ಪರಿಸ್ಥಿತಿ ಇತ್ತು.

### *101.9.1 ಮೂವರು ಚಕ್ರವರ್ತಿಗಳ ಒಕ್ಕೂಟ (ಲೀಗ್) (Dreikaiser bund)*

ಮೇಲಿನ ಅಂಶಗಳನ್ನು ಗಣನೆಗೆ ತೆಗೆದುಕೊಂಡು ತನ್ನ ವಿದೇಶಾಂಗ ನೀತಿಯ ಯೋಜನೆಯನ್ನು ರೂಪಿಸಿದನು. ಈ ದಿಶೆಯಲ್ಲಿ ಮೊಟ್ಟಮೊದಲನೆಯ ಯಶಸ್ಸೆಂದರೆ ಮೂವರು ಚಕ್ರವರ್ತಿಗಳ ಲೀಗ್ ಸ್ಥಾಪನೆಯಾದುದು. 1872 ರ ಸೆಪ್ಟೆಂಬರ್ ತಿಂಗಳಲ್ಲಿ ಜರ್ಮನಿಯ ಒಂದನೆಯ ವಿಲಿಯಂ. ಆಸ್ಟ್ರಿಯಾದ ಫ್ರಾನ್ಸಿಸ್ ಜೋಸೆಫ್ ಮತ್ತು ಎರಡನೆಯ ಅಲೆಕ್ಸಾಂಡರ್ ಬರ್ಲಿನ್‌ನಲ್ಲಿ ಸಭೆ ಸೇರಿದರು. ಅವರು ಒಟ್ಟಿಗೆ ಮೂವರು ಚಕ್ರವರ್ತಿಗಳ ಸಂಘವನ್ನು ಸ್ಥಾಪಿಸಿದರು. (Dreikaiser bund). ಇದು ಸೈನಿಕ ಮೈತ್ರಿ ಕೂಟವಾಗಿರದೆ, ಮೂವರು ಚಕ್ರವರ್ತಿಗಳ ನಡುವಣ ಸೌಹಾರ್ದಯುತ ಮೈತ್ರಿ ಹಾಗೂ ತಿಳುವಳಿಕೆಯ ಸಂಕೇತವಾಗಿತ್ತು. ಯಥಾಸ್ಥಿತಿಯನ್ನು ಕಾಪಾಡಲು, ಸಮಾಜವಾದವನ್ನು ಹತ್ತಿಕ್ಕಲು ಹಾಗೂ ಪೌರ್ವಾತ್ಯ ಪ್ರಶ್ನೆಯನ್ನು ಸರ್ವಸಮ್ಮತವಾದ ರೀತಿಯಲ್ಲಿ ಬಗೆಹರಿಸಲು ಅವರು ಒಪ್ಪಿಕೊಂಡರು.

ಇದೇ ಸಮಯದಲ್ಲಿ ಜರ್ಮನಿಯ ಕೆಲವು ಪತ್ರಿಕೆಗಳ ಪ್ರಕಟಣೆಗಳು ಜರ್ಮನಿ ಮತ್ತು ರಷ್ಯಾದ ನಡುವಿನ ಸಂಬಂಧವನ್ನು ಹದಗೆಡಿಸಬಹುದೆಂಬ ಭಯವಿತ್ತು. ಜರ್ಮನಿಯ ಪತ್ರಿಕೆಗಳು ಫ್ರಾನ್ಸ್ ಜರ್ಮನಿಯ ವಿರುದ್ಧ ಯುದ್ಧ ಮಾಡಲು ಸಿದ್ಧತೆಗಳನ್ನು ನಡೆಸುತ್ತಿದೆ ಎಂಬ ಸುದ್ದಿಯನ್ನು ಪ್ರಕಟಿಸಿದವು. ಈ ಸುದ್ದಿಗಳು ರಷ್ಯಾಕ್ಕೆ ಭೀತಿಯನ್ನುಂಟು ಮಾಡಿದವು. ಅನಂತರ ಬಿಸ್ಮಾರ್ಕನು ಈ ಎಲ್ಲಾ ಸುದ್ದಿಗಳು ಸುಳ್ಳು ಎಂದು ಆಶ್ವಾಸನೆ ನೀಡಿದ ಮೇಲೆ ರಷ್ಯಾ ಮತ್ತು ಜರ್ಮನಿಯ ನಡುವಿನ ಸಂಬಂಧಕ್ಕೆ ಯಾವುದೇ ಧಕ್ಕೆ ಉಂಟಾಗುವುದನ್ನು ತಪ್ಪಿಸಲಾಯಿತು.

ಆದರೆ 1877-78 ರಲ್ಲಿ ನಡೆದ ರೂಸೋ-ಟರ್ಕಿ ಯುದ್ಧವು ಬಿಸ್ಮಾರ್ಕನಿಗೆ ಈ ಒಕ್ಕೂಟವನ್ನು ಮುಂದುವರಿಸುವುದಕ್ಕೆ ಸಂಬಂಧಿಸಿದಂತೆ ಒಂದು ಸವಾಲನ್ನು ಒಡ್ಡಿತು. ಈ ಯುದ್ಧವು ಸ್ಯಾನ್‌ಸ್ಟಿಫಾನೂ ಒಪ್ಪಂದದ ಮೂಲಕ ಕೊನೆಗೊಂಡಿತು. ಈ ಒಪ್ಪಂದದಿಂದಾಗಿ ರಷ್ಯಾವು ಬಾಲ್ಕನ್ ರಾಜ್ಯಗಳಲ್ಲಿ ಹೆಚ್ಚು ಪ್ರಭಾವವನ್ನು ಹೊಂದಿತು. ಇದರಿಂದ ಆಸ್ಟ್ರಿಯಾಕ್ಕೆ ಭಯವುಂಟಾಯಿತು. ಗ್ರೇಟ್ ಬ್ರಿಟನ್ ಕೂಡ ಬಾಲ್ಕನ್ ರಾಜ್ಯಗಳಲ್ಲಿ ರಷ್ಯಾದ ಪ್ರಭಾವವನ್ನು ನೋಡಿ ತನ್ನ ಆತಂಕವನ್ನು ವ್ಯಕ್ತಪಡಿಸಿತು. ಬಲಿಷ್ಠ ರಾಷ್ಟ್ರಗಳ ಒತ್ತಡದಿಂದಾಗಿ ಸ್ಯಾನಿಸ್ಟಿಫಾನೊ ಒಪ್ಪಂದವನ್ನು ಪರಿಷ್ಕರಿಸಲು ರಷ್ಯ ತನ್ನ ಸಮ್ಮತಿ ಸೂಚಿಸಿತು. ಆದುದರಿಂದಾಗಿ 1878 ರಲ್ಲಿ ಬರ್ಲಿನ್ ಸಮ್ಮೇಳನ ನಡೆಯಿತು. ಈ ಬರ್ಲಿನ್ ಒಪ್ಪಂದದಲ್ಲಿ ಬಿಸ್ಮಾರ್ಕನ ನಿಲುವು ಆಸ್ಟ್ರಿಯಾದ ಪರವಾಗಿತ್ತು. ಇದರಿಂದ ಬೇಸರಗೊಂಡ ರಷ್ಯ ತನ್ನ ಅಸಂತೋಷವನ್ನು ಜರ್ಮನಿಯ ವಿರುದ್ಧ ವ್ಯಕ್ತಪಡಿಸಿತು. ಇದರ ಪರಿಣಾಮವೇ ತ್ರಿರಾಷ್ಟ್ರ ಒಕ್ಕೂಟದ ರಚನೆಗೆ (Triple Alliance) ಕಾರಣವಾಯಿತು.

### *101.9.2 ಆಸ್ಟ್ರೋ-ಜರ್ಮನ್ ಮೈತ್ರಿ ಒಪ್ಪಂದ (Dual Alliance)*

ಮೇಲೆ ತಿಳಿಸಿದ ಕಾರಣಗಳಿಂದಾಗಿ ರಷ್ಯಾವು ಮೂರು ಚಕ್ರವರ್ತಿಗಳ ಲೀಗ್‌ನಿಂದ ದೂರ ಸರಿದುದರಿಂದ ಜರ್ಮನಿಗೆ ಭಯವುಂಟಾಯಿತು. ರಷ್ಯಾವು ಜರ್ಮನಿಯ ಮೇಲೆ ಆಕ್ರಮಣ ನಡೆಸಬಹುದೆಂಬ ಭಯ ಕಾಡತೊಡಗಿತು. ಈ ಭಯದಿಂದ ಹೊರಬರಲು ಆಸ್ಟ್ರೀಯದೊಡನೆ ಒಂದು ಪ್ರತ್ಯೇಕ ಒಪ್ಪಂದವನ್ನು ಮಾಡಿಕೊಳ್ಳಲು ಮುಂದಾದನು. ಇದರ ಪ್ರಕಾರ 1879 ರ ಅಕ್ಟೋಬರ್, ಏಳನೆಯ ತಾರೀಖು ಜರ್ಮನಿಯು ಆಸ್ಟ್ರೀಯಾದೊಡನೆ ಒಂದು ಮೈತ್ರಿ ಒಪ್ಪಂದವನ್ನು ಮಾಡಿಕೊಂಡಿತು. ಇದನ್ನು ಆಸ್ಟ್ರೋ-ಜರ್ಮನ್ ಮೈತ್ರಿ ಒಪ್ಪಂದವೆಂದು ಕರೆಯಲಾಗಿದೆ. ಈ ಒಪ್ಪಂದದ ಪ್ರಕಾರ (1) ಇವೆರಡು ರಾಷ್ಟ್ರಗಳ ಪೈಕಿ ಒಂದರ ಮೇಲೆ ರಷ್ಯಾವು ಆಕ್ರಮಣವೆಸಗಿದರೆ ಇನ್ನೊಂದು ಮಿತ್ರ ರಾಷ್ಟ್ರ ತನ್ನೆಲ್ಲ ಮಿಲಿಟರಿ ಶಕ್ತಿಯೊಡನೆ ಅದರ ನೆರವಿಗೆ

ಧಾವಿಸಬೇಕು. (2) ಜರ್ಮನಿ ಇಲ್ಲವೆ ಆಸ್ಟ್ರಿಯಾದ ಮೇಲೆ ಬೇರೊಂದು ರಾಷ್ಟ್ರವು (ಉದಾಹರಣೆಗೆ ಫ್ರಾನ್ಸ್) ಆಕ್ರಮಣವೆಸಗಿದರೆ, ಮಿತ್ರ ರಾಷ್ಟ್ರವು ತಟಸ್ಥವಾಗಿರಬೇಕು. (3) ಒಂದು ವೇಳೆ ರಷ್ಯ ಶತ್ರುವಿನ ಜೊತೆಗೆ ಸೇರಿದರೆ, ಆಸ್ಟ್ರೀಯಾ ಮತ್ತು ಜರ್ಮನಿಗಳು ಸಂಯುಕ್ತವಾಗಿ ಶತ್ರುಗಳನ್ನು ಎದುರಿಸಿ ಸಂಯುಕ್ತವಾಗಿ ಶಾಂತಿ ಒಪ್ಪಂದ ಮಾಡಿಕೊಳ್ಳಬೇಕು.

ಹೀಗೆ 1879 ರ ಆಸ್ಟ್ರೋ-ಜರ್ಮನ್ ಮೈತ್ರಿ ಕೂಟವು ರಕ್ಷಣಾತ್ಮಕ ಒಪ್ಪಂದವಾಗಿತ್ತು. ಇದು ಮುಖ್ಯವಾಗಿ ರಷ್ಯಾದ ವಿರುದ್ಧವಾಗಿತ್ತು. ತದನಂತರ ಫ್ರಾನ್ಸಿನ ವಿರುದ್ಧವಾಗಿತ್ತು. ಈ ಒಪ್ಪಂದವು ಸುಪ್ತವಾಗಿ ಮಾಡಿಕೊಂಡ ಒಪ್ಪಂದವಾಗಿತ್ತು. 1887 ರವರೆಗೆ ಈ ಒಪ್ಪಂದವನ್ನು ಬಹಿರಂಗಗೊಳಿಸಲಿಲ್ಲ.

### *101.9.3 ತ್ರಿರಾಷ್ಟ್ರ ಮೈತ್ರಿ ಕೂಟ (Triple Alliance)*

ಬಿಸ್ಮಾರ್ಕನು ಕೇವಲ ಆಸ್ಟ್ರಿಯಾದೊಡನೆ ಒಪ್ಪಂದ ಮಾಡಿಕೊಂಡಿದುದಕ್ಕೆ ತೃಪ್ತಿ ಪಡಲಿಲ್ಲ. ಯೂರೋಪಿನ ನವೋದಿತ ರಾಷ್ಟ್ರವಾದ ಇಟಲಿಯನ್ನು ಕೂಡ ಮೈತ್ರಿಕೂಟದಲ್ಲಿ ಸೇರಿಸಲು ಬಿಸ್ಮಾರ್ಕನು ತವಕಪಟ್ಟನು. ಇದನ್ನು ಸಾಧಿಸುವುದರಲ್ಲಿ ಈತನು ಅಪ್ರತಿಮ ರಾಜನೀತಿ ನೈಪುಣ್ಯತೆಯನ್ನು ಪ್ರದರ್ಶಿಸಿದನು. ಫ್ರಾನ್ಸ್ ಮತ್ತು ಇಟಲಿಯ ನಡುವೆ ವೈಮನಸ್ಸು ಬೆಳೆಯುವಂತೆ ಮಾಡಿ ಇಟಲಿಯನ್ನು ತನ್ನ ಕಡೆಗೆ ಒಲಿಸಿಕೊಳ್ಳಲು ಒಂದು ಸಂಚನ್ನು ರೂಪಿಸಿದನು. ಉತ್ತರ ಆಫ್ರಿಕಾದಲ್ಲಿ ಟ್ಯೂನಿಸ್ (Tunis) ನ್ನು ತನ್ನ ವಸಾಹತುವನ್ನಾಗಿ ಮಾಡಿಕೊಳ್ಳಲು ಇಟಲಿ ಹವಣಿಸುತ್ತಿತ್ತು. ಫ್ರಾನ್ಸ್ ಕೂಡ ಟ್ಯೂನಿಸ್‌ನ್ನು ಪಡೆಯಲು ಉತ್ಸುಕವಾಗಿತ್ತು. ಬಿಸ್ಮಾರ್ಕನು ಟ್ಯೂನಿಸ್‌ನ್ನು ಆಕ್ರಮಿಸುವಂತೆ ಫ್ರಾನ್ಸಿಗೆ ರಹಸ್ಯವಾಗಿ ಪ್ರಚೋದನೆ ನೀಡಿದನು. ಆತನಿಗೆ ಎರಡು ಉದ್ದೇಶಗಳಿದ್ದವು : (1) ಟ್ಯೂನಿಸ್‌ನತ್ತ ಫ್ರಾನ್ಸಿನ ಗಮನ ಹರಿಸುವುದು. ಅದು ಅಲ್ಸೇಸ್ ಮತ್ತು ಲೊರೈನ್ ಬಗ್ಗೆ ಯೋಚಿಸಿದಂತೆ ಮಾಡುವುದು. (2) ಟ್ಯೂನಿಸ್ ಬಗ್ಗೆ ಇಟಲಿ ಮತ್ತು ಫ್ರಾನ್ಸ್‌ಗಳ ನಡುವೆ ಘರ್ಷಣೆ ಪ್ರಾರಂಭಿಸಿ, ಇಟಲಿಯನ್ನು ಮೈತ್ರಿ ಕೂಟಕ್ಕೆ ಸೆಳೆಯುವುದಾಗಿತ್ತು.

1881 ರಲ್ಲಿ ಫ್ರಾನ್ಸ್ ಟ್ಯೂನಿಸ್‌ನ್ನು ಆಕ್ರಮಿಸಿತು. ಇದರಿಂದ ಕೋಪೋದ್ರಿಕ್ತವಾದ ಇಟಲಿಯು ಆಸ್ಟ್ರೋ-ಜರ್ಮನ್ ಮೈತ್ರಿ ಕೂಟವನ್ನು ಸೇರಿ ಒಪ್ಪಂದ ಮಾಡಿಕೊಂಡಿತು. ಹೀಗೆ ತ್ರಿರಾಷ್ಟ್ರ (ಆಸ್ಟ್ರಿಯ, ಜರ್ಮನಿ ಮತ್ತು ಇಟಲಿ) ಮೈತ್ರಿ ಕೂಟವು 1882 ರಲ್ಲಿ ಅಸ್ತಿತ್ವಕ್ಕೆ ಬಂತು. ಈ ತ್ರಿರಾಷ್ಟ್ರಗಳ ಮೇಲೆ ಮತ್ತೊಂದು ರಾಷ್ಟ್ರವು ಧಾಳಿಮಾಡಿದಲ್ಲಿ ಆ ರಾಷ್ಟ್ರದ ವಿರುದ್ಧ ಈ ಮೂರು ರಾಷ್ಟ್ರಗಳು ಒಟ್ಟಾಗಿ ಯುದ್ಧ ಮಾಡಬೇಕೆಂಬ ಸೈನಿಕ ಒಪ್ಪಂದವನ್ನು ಮಾಡಿಕೊಂಡರು. ಮೊದಲು 5 ವರ್ಷಕ್ಕೆ ಈ ಒಪ್ಪಂದವನ್ನು ಮಾಡಿಕೊಳ್ಳಲಾಯಿತು. ಅನಂತರ ಆಗಿಂದಾಗ್ಗೆ ನವೀಕರಿಸುವುದರ ಮೂಲಕ 1915 ರವರೆಗೆ ಮುಂದುವರಿಯಿತು. 1915 ರಲ್ಲಿ ಇಟಲಿಯು ಮೈತ್ರಿ ಕೂಟದಿಂದ ಹೊರಬಿತ್ತು.

### *101.9.4 ಮೂವರು ಚಕ್ರವರ್ತಿಗಳ ಲೀಗ್‌ನ (Driekaiser bund) ಪುನರ್‌ಸ್ಥಾಪನೆ*

ಬಿಸ್ಮಾರ್ಕನು ಆಸ್ಟ್ರಿಯಾದೊಡನೆ ನಿಕಟವಾದ ರಕ್ಷಣಾತ್ಮಕ ಮೈತ್ರಿ ಕೂಟವನ್ನು ಏರ್ಪಡಿಸಿಕೊಂಡಿದ್ದರೂ ಕೂಡ ರಷ್ಯಾದೊಡನೆ ಸಂಬಂಧವನ್ನು ಹದಗೆಡಿಸಿಕೊಳ್ಳಲು ಎಂದಿಗೂ ಇಷ್ಟಪಡಲಿಲ್ಲ. ಅದನ್ನು ಪುನಃ ತನ್ನ ಕಡೆಗೆ ಒಲಿಸಿಕೊಳ್ಳಬೇಕೆಂದು ಪ್ರಯತ್ನ ನಡೆಸಿದನು. ಈ ವೇಳೆಗೆ ಜರ್ಮನಿ - ರಷ್ಯ ನಡುವಣ ಸಂಘರ್ಷದ ಭಯವು ಕೂಡ ಕಡಿಮೆಯಾಗಿತ್ತು. ರಷ್ಯಾವು ಫ್ರಾನ್ಸಿನ ಜೊತೆ ಸೇರಿಕೊಂಡರೆ, ಜರ್ಮನ್ ಸಾಮ್ರಾಜ್ಯಕ್ಕೆ ಉಳಿಗಾಲವಿಲ್ಲವೆಂಬುದು ಬಿಸ್ಮಾರ್ಕನ ಲೆಕ್ಕಾಚಾರವಾಗಿತ್ತು. ಅದೇ ರೀತಿ ರಷ್ಯಾದ ಉದ್ದೇಶವು 1878 ರ ಬರ್ಲಿನ್ ಕಾಂಗ್ರೆಸ್‌ನಲ್ಲಿ ತನಗಾಗಿದ್ದ ಅನ್ಯಾಯವನ್ನು ಸರಿಪಡಿಸಿಕೊಂಡು ಬಾಲ್ಕನ್ ರಾಜ್ಯಗಳಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳಬೇಕಾದರೆ ಜರ್ಮನಿ ಮತ್ತು ಆಸ್ಟ್ರಿಯಾ ರಾಜ್ಯಗಳೊಡನೆ ಮೈತ್ರಿ ಅವಶ್ಯಕತೆ ಇದೆ

ಎಂದು ಮನಗಂಡನು. ಇದರ ಪ್ರಕಾರ 1881 ರಲ್ಲಿ ಪುನಃ ಮೂವರು ಚಕ್ರವರ್ತಿಗಳ ಲೀಗನ್ನು ಸ್ಥಾಪಿಸಲಾಯಿತು. ಈ ಹೊಸ ಒಪ್ಪಂದದ ಪ್ರಕಾರ ಜರ್ಮನಿ, ಆಸ್ಟ್ರಿಯಾ ಮತ್ತು ರಷ್ಯ ಇವುಗಳಲ್ಲಿ ಯಾವುದೊಂದು ರಾಷ್ಟ್ರವೇ ಆದರೂ ಮತ್ತೊಂದು ರಾಷ್ಟ್ರದೊಡನೆ ಯುದ್ಧಕ್ಕಿಳಿದರೆ ಉಳಿದೆರಡು ರಾಷ್ಟ್ರಗಳು ತಟಸ್ಥ ನೀತಿಯನ್ನು ಅನುಸರಿಸಬೇಕೆಂದು ಒಪ್ಪಿಕೊಳ್ಳಲಾಯಿತು. 1894 ರಲ್ಲಿ ಪುನಃ ಮೂವರು ಚಕ್ರವರ್ತಿಗಳು ಒಕ್ಕೂಟವನ್ನು ನವೀಕರಿಸಿದರು. ರಷ್ಯಾವು ಫ್ರಾನ್ಸಿನೊಡನೆ ಸೇರದಂತೆ ಮಾಡುವುದೇ ಬಿಸ್ಮಾರ್ಕನ ಗುರಿಯಾಗಿತ್ತು.

### *101.9.5 ರಷ್ಯಾದೊಡನೆ ರೀಇನ್ಸೂರನ್ಸ್ ಒಪ್ಪಂದ*

ಆಸ್ಟ್ರಿಯ ಮತ್ತು ರಷ್ಯಾದ ನಡುವೆ ಬಾಲ್ಕನ್ ರಾಜ್ಯಗಳ ಬಗ್ಗೆ ಉಂಟಾದ ಸಂಘರ್ಷವು ಪುನಃ ಮೂವರು ಚಕ್ರವರ್ತಿಗಳ ಲೀಗ್ 1887 ರಲ್ಲಿ ಮುರಿದು ಬೀಳಲು ಕಾರಣವಾಯಿತು. ಇದೇ ಸಮಯದಲ್ಲಿ ಫ್ರಾನ್ಸ್‌ನಲ್ಲಿ ಜನರಲ್ ಬೌಲಂಜರ್ ಜರ್ಮನಿಯ ವಿರುದ್ಧ ಸೇಡು ತೀರಿಸಿಕೊಳ್ಳಲು ಯುದ್ಧ ಮಾಡಬೇಕೆಂದು ವಾದಿಸುತ್ತಿದ್ದನು. ಆದ್ದರಿಂದ ಬಿಸ್ಮಾರ್ಕನಿಗೆ ಭಯ ಉಂಟಾಯಿತು. ರಷ್ಯಾದೊಡನೆ ಪ್ರತ್ಯೇಕವಾಗಿ ಒಂದು ಮೈತ್ರಿ ಒಪ್ಪಂದವನ್ನು ಮಾಡಿಕೊಳ್ಳಲೇಬೇಕಾದ ಪರಿಸ್ಥಿತಿ ಉದ್ಭವಿಸಿತು. ಏಕೆಂದರೆ ರಷ್ಯ ಯಾವುದೇ ಕಾರಣಕ್ಕೂ ಫ್ರಾನ್ಸ್‌ನೊಡನೆ ಒಪ್ಪಂದ ಮಾಡಿಕೊಳ್ಳಬಾರದೆಂಬುದು ಅವನ ಉದ್ದೇಶವಾಗಿತ್ತು. ಆದ್ದರಿಂದ ಅವನು 1887 ರಲ್ಲಿ ಗುಪ್ತವಾಗಿ ರೀಇನ್ಸುರೆನ್ಸ್ ಒಪ್ಪಂದವನ್ನು ರಷ್ಯಾದೊಡನೆ ಮಾಡಿಕೊಂಡನು. ಬಲ್ಗೇರಿಯಾದಲ್ಲಿ ರಷ್ಯ ತನ್ನ ಪ್ರಭಾವ ಹೆಚ್ಚಿಸಿಕೊಳ್ಳಲು ರಾಜತಾಂತ್ರಿಕ ಬೆಂಬಲವನ್ನು ನೀಡಲಾಗುವುದೆಂದೂ ಸಾಧ್ಯವಾದರೆ ಕಾನ್‌ಸ್ಟಾಂಟಿನೋಪಲ್‌ನನ್ನೂ ಗೆದ್ದುಕೊಳ್ಳುವುದಕ್ಕೆ ರಷ್ಯಾಕ್ಕೆ ಜರ್ಮನಿಯು ಸಹಾಯ ಮಾಡುವುದೆಂದು ಬಿಸ್ಮಾರ್ಕನು ಒಪ್ಪಂದ ಮಾಡಿಕೊಂಡನು. ರಷ್ಯ ಇದಕ್ಕೆ ಬದಲಾಗಿ ಜರ್ಮನಿ ಮತ್ತು ಫ್ರಾನ್ಸ್ ನಡುವೆ ಯುದ್ಧ ಪ್ರಾರಂಭವಾದರೆ ಅದು ತಟಸ್ಥ ನೀತಿಯನ್ನು ಅನುಸರಿಸುವುದಾಗಿ ಒಪ್ಪಿಕೊಂಡಿತು.

### *101.9.6 ಇಂಗ್ಲೆಂಡಿನೊಡನೆ ಸಂಬಂಧ*

ಬಿಸ್ಮಾರ್ಕನು ಇಂಗ್ಲೆಂಡಿನೊಡನೆ ಸೌಹಾರ್ದತೆಯಿಂದ ಕೂಡಿದ್ದ ಸಂಬಂಧವನ್ನು ಹೊಂದಿದ್ದನು. ಇಂಗ್ಲೆಂಡ್ ಕೂಡ ಜರ್ಮನಿಯೊಡನೆ ಬಿಸ್ಮಾರ್ಕನ ಕಾಲದಲ್ಲಿ ಉತ್ತಮ ಸಂಬಂಧವನ್ನು ಹೊಂದಿತ್ತು. ಇವೆರಡು ರಾಷ್ಟ್ರಗಳು ಘರ್ಷಣೆಗೆ ಒಳಗಾಗಲು ಯಾವುದೇ ಕಾರಣವಿರಲಿಲ್ಲ. ಇಂಗ್ಲೆಂಡಿನೊಡನೆ ಮಧುರ ಬಾಂಧವ್ಯವನ್ನು ಬಯಸಿ ಬಿಸ್ಮಾರ್ಕ್ ತನ್ನ ಸಾಮ್ರಾಜ್ಯದ ನೌಕಾಬಲವನ್ನಾಗಲಿ ಅಥವಾ ವಸಾಹತುಗಳನ್ನಾಗಲಿ ಅಭಿವೃದ್ಧಿಪಡಿಸಲು ಬಯಸಲಿಲ್ಲ. ಅಲ್ಲದೇ ಬಿಸ್ಮಾರ್ಕ್ ತನ್ನ ಮಗನನ್ನೇ ಇಂಗ್ಲೆಂಡಿನ ರಾಯಭಾರಿಯನ್ನಾಗಿ ನೇಮಿಸುವುದರ ಮೂಲಕ ಇಂಗ್ಲೆಂಡ್ ಜೊತೆ ಸಂಬಂಧವನ್ನು ಉತ್ತಮಪಡಿಸಲು ರಷ್ಯಾದ ಪ್ರಭಾವವನ್ನೂ ಬಾಲ್ಕನ್ ರಾಜ್ಯಗಳಲ್ಲಿ ತಡೆಹಿಡಿಯಲು ಜರ್ಮನಿಯ ಸಹಕಾರ ಇಂಗ್ಲೆಂಡ್‌ಗೆ ಬೇಕಾಗಿತ್ತು. ಅದೇ ರೀತಿ ಜರ್ಮನಿಯು ಇಂಗ್ಲೆಂಡಿನ ವಿರೋಧ ಕಟ್ಟಿಕೊಳ್ಳಬಾರದೆಂಬ ದೃಷ್ಟಿಯಿಂದ ಆಸ್ಟ್ರಿಯಾ-ಹಂಗೇರಿಗೆ ಬಾಲ್ಕನ್ ರಾಜ್ಯಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಮಟ್ಟದ ಯಾವ ಸಹಾಯವನ್ನು ನೀಡಲಿಲ್ಲ. ಒಟ್ಟಿನಲ್ಲಿ ಇಂಗ್ಲೆಂಡ್ ಮತ್ತು ಜರ್ಮನಿ ಬಿಸ್ಮಾರ್ಕನ ಕಾಲದಲ್ಲಿ ಪರಸ್ಪರ ಸಹಾಯ ಮತ್ತು ಸಹಕಾರದಿಂದ ಕೂಡಿದ್ದ ಸಂಬಂಧ ಹೊಂದಿದ್ದವು.

## 101.10 ಬಿಸ್ಮಾರ್ಕನ ಪತನ

1888 ರ ಮಾರ್ಚಿ ತಿಂಗಳಿನಲ್ಲಿ ಒಂದನೆಯ ವಿಲಿಯಂ ಮರಣ ಹೊಂದುವುದರೊಂದಿಗೆ ಛಾನ್ಸಲರ್ ಮತ್ತು ಚಕ್ರವರ್ತಿಯ ನಡುವಣ ಮಧುರ ಬಾಂದವ್ಯ ಕೊನೆಗೊಂಡಿತು. ವಿಲಿಯಂ ಮರಣವಾದಾಗ ಅವನಿಗೆ 91 ವರ್ಷ ವಯಸ್ಸಾಗಿತ್ತು. ಅನಂತರ ಅವನ ಮಗ ಮೂರನೆಯ ಫ್ರೆಡರಿಕ್

ಜರ್ಮನಿಯ ಚಕ್ರವರ್ತಿಯಾದನು. ಆದರೆ ಅವನು ಅನಾರೋಗ್ಯದಿಂದ ನರಳುತ್ತಿದ್ದುದರಿಂದ ಅವನು ಕೇವಲ ಮೂರು ತಿಂಗಳು ಆಳ್ವಿಕೆ ನಡೆಸಿ ಮರಣ ಹೊಂದಿದನು. ಅನಂತರ ಅವನ ಮಗ ಎರಡನೆಯ ವಿಲಿಯಂ ಜರ್ಮನಿಯ ಚಕ್ರವರ್ತಿಯಾದನು.

ಇಪ್ಪತ್ತೊಂಭತ್ತನೆಯ ವಯಸ್ಸಿಗೆ ಚಕ್ರವರ್ತಿಯಾದ ಎರಡನೆಯ ವಿಲಿಯಂ ಸ್ವತಃ ತಾನೆ ಆಳ್ವಿಕೆ ನಡೆಸಲು ತೀರ್ಮಾನಿಸಿದನು. ಬಿಸ್ಮಾರ್ಕನು ತನ್ನಲ್ಲಿಯೇ ಕೇಂದ್ರೀಕರಣಕೊಂಡಿದ್ದ ಪರಮಾಧಿಕಾರವನ್ನು ವಿಲಿಯಂ ಸಹಿಸಲಿಲ್ಲ. ಸಂಪುಟ ಸಭೆಗಳಲ್ಲಿ ಛಾನ್ಸಲರ್ ಮುಂದೆ ಅವನು ಅಧಿಕಾರವಿಲ್ಲದವನು ಎಂಬ ಭಾವನೆ ಅವನಿಗೆ ಉಂಟಾಯಿತು. ಆದ್ದರಿಂದ ಬಹುಬೇಗನೆ ಛಾನ್ಸಲರ್ ಮತ್ತು ಚಕ್ರವರ್ತಿಯ ನಡುವೆ ಭಿನ್ನಾಭಿಪ್ರಾಯಗಳು ಉಂಟಾದವು. ರಾಜ್ಯಾಂಗದ ಪ್ರಕಾರ ಚಕ್ರವರ್ತಿಯ ಬೆಂಬಲದಿಂದಲೆ ಛಾನ್ಸಲರ್ ಪರಮಾಧಿಕಾರ ಚಲಾಯಿಸುವ ಹಕ್ಕನ್ನು ಹೊಂದಿದ್ದನು. ಒಂದನೆಯ ವಿಲಿಯಂ ಬದುಕಿರುವಾಗ ಛಾನ್ಸಲರ್‌ನ ಯಾವ ನಿರ್ಧಾರಗಳನ್ನು ಅವನು ಪ್ರಶ್ನಿಸಲಿಲ್ಲ. ಬಿಸ್ಮಾರ್ಕನು ಆಡಳಿತವನ್ನು ನಡೆಸಲು ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಿದ್ದನು. ಆದರೆ ಕೈಸರ್ ವಿಲಿಯಂ ಎಲ್ಲರೂ ತನ್ನ ಆಜ್ಞೆಯನ್ನೇ ಪರಿಪಾಲಿಸಬೇಕೆಂಬ ಮನೋಭಾವವುಳ್ಳವನಾಗಿದ್ದನು. ಬಿಸ್ಮಾರ್ಕನು ಕೂಡ ತನ್ನ ನಿರ್ದೇಶನದಂತೆಯೇ ನಡೆಯಬೇಕೆಂಬ ನಿಲುವನ್ನು ಹೊಂದಿದ್ದನು. ಇದರಿಂದ ಬೇಸರಗೊಂಡ ಬಿಸ್ಮಾರ್ಕನು 1890 ರ ಮಾರ್ಚಿ 20 ರಂದು ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಿ ನಿರ್ಗಮಿಸಿದನು. ಕೈಸರ್ ವಿಲಿಯಂ ಯಾವುದೇ ಪಶ್ಚಾತ್ತಾಪವಿಲ್ಲದೆ ಬಿಸ್ಮಾರ್ಕನ ರಾಜೀನಾಮೆಯನ್ನು ಸ್ವೀಕರಿಸಿದನು. ಈ ರೀತಿಯಾಗಿ ನಿರ್ಗಮಿಸಿದ ಘಟನೆಯನ್ನು "ಚಾಲಕನನ್ನು ತ್ಯಜಿಸಿದುದು" (Dropping The Pilot) ಎಂದು ವಿವರಿಸಲಾಗಿದೆ. ಬಿಸ್ಮಾರ್ಕನು ತನ್ನ ಸ್ವಗ್ರಾಮಕ್ಕೆ ತೆರಳಿ ಅಲ್ಲಿ ಹಲವು ವರ್ಷಗಳನ್ನು ಕಳೆದನು. ಅನಂತರ 1898 ರಲ್ಲಿ ಬಿಸ್ಮಾರ್ಕನು ಮರಣಹೊಂದಿದನು. ಜರ್ಮನಿ ಮತ್ತು ಪ್ರಷ್ಯಾದ ಇತಿಹಾಸದಲ್ಲಿ ಉಜ್ವಲ ಶಕ್ತಿಯಾಗಿ ಮೆರೆದ ವ್ಯಕ್ತಿಯೋರ್ವನ ರಾಜಕೀಯ ಜೀವನವು ನಿಷ್ಠುರ ಹಾಗೂ ಅವಮಾನಕರ ರೀತಿಯಲ್ಲಿ ಕೊನೆಗೊಂಡಿತು.

## 101.11 ಬಿಸ್ಮಾರ್ಕನ ವ್ಯಕ್ತಿತ್ವ

ಬಿಸ್ಮಾರ್ಕನು ಯೂರೋಪಿನ ಕೆಲವೇ ರಾಷ್ಟ್ರ ನಿರ್ಮಾಪಕರಲ್ಲಿ ಅಗ್ರಗಣ್ಯನಾಗಿದ್ದಾನೆ. ಹರಿದು ಹಂಚಿ ಹೋಗಿದ್ದ ಜರ್ಮನಿಯನ್ನು ಒಂದುಗೂಡಿಸಿ ಯೂರೋಪಿನ ರಾಜಕೀಯದಲ್ಲಿ ಅದಕ್ಕೆ ಹಿರಿದಾದ ಸ್ಥಾನಮಾನವನ್ನು ಕಲ್ಪಿಸಿಕೊಡುವುದರಲ್ಲಿ ಯಶಸ್ವಿಯಾದನು. ಬಿಸ್ಮಾರ್ಕನು ಹತ್ತೊಂಭತ್ತನೆಯ ಶತಮಾನದ ಮಹಾನ್ ರಾಜಕಾರಣಿ ಮತ್ತು ಮುತ್ಸದ್ದಿಯಾಗಿದ್ದನು. "ಹತ್ತೊಂಭತ್ತನೆಯ ಶತಮಾನದ ಇತಿಹಾಸದಲ್ಲಿ ರಾಜನೀತಿ ನೈಪುಣ್ಯತೆಯಲ್ಲಿ ಅಗ್ರಸ್ಥಾನವನ್ನಲಂಕರಿಸಿರುವನು. ಕೆವೂರನನ್ನು ಬಿಟ್ಟರೆ ಇನ್ನಾರು ಆ ಸ್ಥಾನಕ್ಕೆ ಪೈಪೋಟಿ ನಡೆಸಲು ಸಾಧ್ಯವಿಲ್ಲ" ಎಂಬುದಾಗಿ ಮ್ಯಾರಿಯೆಟ್ ಅಭಿಪ್ರಾಯ. ಮತ್ತೊಬ್ಬ ಇತಿಹಾಸಕಾರ ಟರ್ನರ್ ಕೂಡ ಬಿಸ್ಮಾರ್ಕನ ಸಾಧನೆಗಳನ್ನು ಪ್ರಶಂಸಿಸಿದ್ದಾನೆ. " ಅವನ (ಬಿಸ್ಮಾರ್ಕನ) ಯಶಸ್ಸುಗಳು ಮತ್ತು ಸಾಧನೆಗಳು ಅಮೋಘ ಮತ್ತು ಅಚ್ಚರಿಗೊಳಿಸುವಂತಹವು. ಅವನ ಕಾಲದಲ್ಲೆ ಅಲ್ಲ ತದನಂತರದ ಕಾಲಗಳಲ್ಲೂ ಅವನೊಬ್ಬ ಮಹಾನ್ ವ್ಯಕ್ತಿಯೆಂದು ಪರಿಗಣಿಸಲಾಗಿತ್ತು " ಎಂದು ಟರ್ನರ್ ಅಭಿಪ್ರಾಯಪಟ್ಟಿದ್ದಾನೆ.

1862 ರಲ್ಲಿ ಸಂದಿಗ್ಧ ಸನ್ನಿವೇಶದಲ್ಲಿ ಪ್ರಷ್ಯಾದ ಪ್ರಧಾನಮಂತ್ರಿಯಾದ ಬಿಸ್ಮಾರ್ಕನು ಅಪ್ರತಿಮ ಧೈರ್ಯ, ಸ್ಥೈರ್ಯ ಹಾಗೂ ರಾಜನೀತಿ ನೈಪುಣ್ಯತೆಯಿಂದ ಜರ್ಮನಿಯನ್ನು ಒಂದುಗೂಡಿಸಿ, ಎರಡು ದಶಕಗಳವರೆಗೆ (1871-1890) ಸಾಮ್ರಾಜ್ಯದ ಛಾನ್ಸಲರ್ ಆಗಿ ಆಂತರಿಕ ಮತ್ತು ವಿದೇಶಾಂಗ ವ್ಯವಹಾರಗಳಲ್ಲಿ ಮಹತ್ವಪೂರ್ಣ ಪಾತ್ರ ವಹಿಸಿದನು. ಅಪೂರ್ವವಾದ ಚಾತುರ್ಯತೆಯನ್ನು ಪ್ರದರ್ಶಿಸಿ ಜರ್ಮನಿಯನ್ನು ಸಮರ್ಥ ಚಾಲಕನಾಗಿ (Pilot) ಮುನ್ನಡೆಸಿದನು.

ಬಿಸ್ಮಾರ್ಕನ ಕಾಲದಲ್ಲಿ ಜರ್ಮನಿ ಯೂರೋಪಿನ ರಾಜಕೀಯ ಕೇಂದ್ರವಾಯಿತು. 1871 ರಿಂದ 1890 ರವರೆಗೆ ಯೂರೋಪಿನ ರಾಜಕೀಯದಲ್ಲಿ ಗಾಢವಾದ ಪ್ರಭಾವವನ್ನು ಬೀರಿದನು. ಆದುದರಿಂದ ಈ ಕಾಲವನ್ನು ಯೂರೋಪಿನ ಇತಿಹಾಸದಲ್ಲಿ "ಬಿಸ್ಮಾರ್ಕನ ಯುಗ " ಎಂದು ವರ್ಣಿಸಲಾಗಿದೆ.

## 101.12 ಸಂಕ್ಷಿಪ್ತ ಅವಲೋಕನ

ಜರ್ಮನಿಯ ಏಕೀಕರಣ 1871 ರಲ್ಲಿ ಪೂರ್ಣಗೊಂಡಿತು. ಏಕೀಕರಣಗೊಂಡ ಜರ್ಮನಿಯನ್ನು ಜರ್ಮನ್ ಸಂಯುಕ್ತ ಸಾಮ್ರಾಜ್ಯ (ಜರ್ಮನಿ ಸಾಮ್ರಾಜ್ಯದ ಒಕ್ಕೂಟ ) ಎಂದು ನಾಮಕರಣ ಮಾಡಲಾಯಿತು. ಒಂದನೆಯ ವಿಲಿಯಂ ಸಂಯುಕ್ತ ಸಾಮ್ರಾಜ್ಯದ ಚಕ್ರವರ್ತಿಯಾದನು. ಬಿಸ್ಮಾರ್ಕನು ಛಾನ್ಸಲರ್ ಆಗಿ ನೇಮಕಗೊಂಡನು. ಜರ್ಮನ್ ಒಕ್ಕೂಟದ ಒಳಾಡಳಿತ ಮತ್ತು ವಿದೇಶಾಂಗ ವ್ಯವಹಾರಗಳಲ್ಲಿ ಬಿಸ್ಮಾರ್ಕನು ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿದನು. ಬಿಸ್ಮಾರ್ಕನು ಅನೇಕ ಕ್ರಮಗಳನ್ನು ತೆಗೆದುಕೊಳ್ಳುವುದರ ಮೂಲಕ ಜರ್ಮನಿಯ ಒಕ್ಕೂಟವನ್ನು ಬಲಪಡಿಸಿದನು.

ಜರ್ಮನ್ ಒಕ್ಕೂಟಕ್ಕೆ ಕ್ಯಾಥೊಲಿಕ್ಕರು ಮತ್ತು ಸಮಾಜವಾದಿಗಳು ಅನೇಕ ಸಮಸ್ಯೆಗಳನ್ನೊಡ್ಡಿದರು. ಬಿಸ್ಮಾರ್ಕನು ಮೊದಲು ರೋಮನ್ ಕ್ಯಾಥೊಲಿಕ್ಕರ ವಿರುದ್ಧ ಹೋರಾಟ ನಡೆಸಿದನು. ರೋಮನ್ ಕ್ಯಾಥೊಲಿಕ್ಕರನ್ನು ಸದೆ ಬಡಿಯಲು ಅನೇಕ ಕಾಯಿದೆಗಳನ್ನು ಹೊರಡಿಸಲಾಯಿತು. ಅವರನ್ನು ರಾಜ್ಯಕ್ಕೆ ವಿಧೇಯರಾಗಿರುವಂತೆ ಮಾಡಲು ಪ್ರಯತ್ನಿಸಿದನು. ಎಷ್ಟೋ ಉಗ್ರವಾದ ಕ್ರಮಗಳನ್ನು ತೆಗೆದುಕೊಂಡರೂ ಕ್ಯಾಥೊಲಿಕ್ಕರ ಪ್ರಭಾವವನ್ನು ಕುಂಠಿತಗೊಳಿಸಲು ಸಾಧ್ಯವಾಗಲಿಲ್ಲ. ಬಿಸ್ಮಾರ್ಕನು ತನ್ನ ಸೋಲನ್ನು ಒಪ್ಪಿಕೊಳ್ಳಬೇಕಾಯಿತು.

ಸಮಾಜವಾದಿಗಳ ವಿರುದ್ಧ ಹೋರಾಟ ಪ್ರಾರಂಭಿಸುವುದಕ್ಕೋಸ್ಕರ ಕ್ಯಾಥೊಲಿಕ್ಕರ ವಿರುದ್ಧದ ಹೋರಾಟವನ್ನು ನಿಲ್ಲಿಸಬೇಕಾಯಿತು. ರಾಜ್ಯಕ್ಕೆ ಸಮಾಜವಾದಿಗಳು ಕೂಡ ಹೆಚ್ಚು ಅಪಾಯಕಾರಿ ಎಂದು ಬಿಸ್ಮಾರ್ಕನು ಮನಗಂಡಿದ್ದನು. ಅವರು ಕ್ರಾಂತಿ, ವರ್ಗ ಸಂಘರ್ಷ, ರಾಜಕೀಯ ಪ್ರಜಾಪ್ರಭುತ್ವ ಮೊದಲಾದ ಕ್ರಾಂತಿಕಾರಕ ವಿಷಯಗಳ ಮೂಲಕ ಜನರನ್ನು ಪ್ರಚೋದಿಸುತ್ತಿದ್ದರು. ಅವರ ವಿರುದ್ಧವು ಕೂಡ ಅನೇಕ ಕಾಯಿದೆಗಳನ್ನು ಹೊರಡಿಸುವುದರ ಮೂಲಕ ಉಗ್ರ ಕ್ರಮಕೈಗೊಂಡನು. ಅವರು ಸಭೆ ಸೇರದಂತೆ, ಪ್ರಕಟಣೆಗಳನ್ನು ಹೊರತರದಂತೆ ಮತ್ತು ಸಂಘಗಳನ್ನು ಸ್ಥಾಪಿಸದಂತೆ ನಿರ್ಬಂಧ ಹೇರಲಾಯಿತು. ಅನೇಕ ಸಮಾಜವಾದಿ ಮುಖಂಡರನ್ನು ಸೆರೆಮನೆಗೆ ಕಳುಹಿಸಿದನು. ಅವರನ್ನು ಕೂಡ ಸದೆಬಡಿಯಲು ಬಿಸ್ಮಾರ್ಕನಿಂದ ಸಾಧ್ಯವಾಗಲಿಲ್ಲ.

ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ಯೂರೋಪಿನ ರಾಜಕೀಯದಲ್ಲಿ ಫ್ರಾನ್ಸನ್ನು ಏಕಾಂಗಿಗೊಳಿಸುವುದರಲ್ಲಿ ಬಿಸ್ಮಾರ್ಕನು ಯಶಸ್ವಿಯಾದನು. 1872 ರಲ್ಲಿ ಆಸ್ಟ್ರಿಯಾ, ಜರ್ಮನಿ ಮತ್ತು ರಷ್ಯಾಗಳನ್ನೊಳಗೊಂಡಂತೆ ಮೂವರು ಚಕ್ರವರ್ತಿಗಳ ಲೀಗನ್ನು ಸ್ಥಾಪಿಸಲಾಯಿತು. ಜರ್ಮನಿಯು ಆಸ್ಟ್ರಿಯದೊಡನೆ ಪ್ರತ್ಯೇಕ ಒಪ್ಪಂದವನ್ನು 1879 ರಲ್ಲಿ ಮಾಡಿಕೊಂಡಿತು. ಅನಂತರ ಈ ದ್ವಿರಾಷ್ಟ್ರ ಮೈತ್ರಿ ಕೂಟಕ್ಕೆ ಇಟಲಿಯನ್ನು ಸೇರಿಸಿಕೊಳ್ಳಲಾಯಿತು. ಈ ರೀತಿಯಾಗಿ 1882 ರಲ್ಲಿ ತ್ರಿರಾಷ್ಟ್ರ ಮೈತ್ರಿ ಒಕ್ಕೂಟ ಅಸ್ತಿತ್ವಕ್ಕೆ ಬಂತು. ಈ ಒಕ್ಕೂಟ 1915 ರವರೆಗೂ ಮುಂದುವರಿಯಿತು. 1897 ರಲ್ಲಿ ರಷ್ಯಾದೊಡನೆ ರೀಇನ್ಸುರೆನ್ಸ್ ಒಪ್ಪಂದವನ್ನು ಮಾಡಿಕೊಂಡನು. ಈ ರೀತಿಯಾಗಿ ಫ್ರಾನ್ಸ್‌ನ ವಿರುದ್ಧ ಅನೇಕ ಒಕ್ಕೂಟಗಳನ್ನು ರಚಿಸಿದನು. ಅದೇ ರೀತಿ ರಷ್ಯಾದ ವಿರುದ್ಧ ಒದಗಬಹುದಾದ ಅಪಾಯಕ್ಕೆ ಗುಪ್ತವಾಗಿ ಹಲವು ಒಪ್ಪಂದಗಳನ್ನು ಮಾಡಿಕೊಂಡನು. ಇಂಗ್ಲೆಂಡಿನೊಡನೆ ಸೌಹಾರ್ದತೆಯಿಂದ ಕೂಡಿದ್ದ ಸಂಬಂಧವನ್ನು ಜರ್ಮನಿ ಹೊಂದಿತ್ತು.

ಬಿಸ್ಮಾರ್ಕನು ತನ್ನ ಅಧಿಕಾರದ ಕೊನೆಯ ವರ್ಷಗಳಲ್ಲಿ ಆಫ್ರಿಕಾದಲ್ಲಿ ಅನೇಕ ವಸಾಹತುಗಳನ್ನು ಸ್ಥಾಪಿಸಿದನು.

ಎರಡನೆಯ ಕೈಸರ್ ವಿಲಿಯಂ ಚಕ್ರವರ್ತಿಯಾದ ಮೇಲೆ ಬಿಸ್ಮಾರ್ಕನು 1890 ರಲ್ಲಿ ರಾಜೀನಾಮೆ ನೀಡಿದನು.

## 101.13 ಕ್ಲಿಷ್ಟ ಪದಗಳ ಟಿಪ್ಪಣಿ

ಡ್ರೈಕೈಸರ್ ಬಂಡ್ : ಮೂವರು ಚಕ್ರವರ್ತಿಗಳ ಒಕ್ಕೂಟ

ಮೇ ಕಾನೂನುಗಳು : ಕಾಥೋಲಿಕ್ಕರ ವಿರುದ್ಧ ಹೊರಡಿಸಿದ ಕಾನೂನುಗಳು (ಮೇ ತಿಂಗಳಲ್ಲಿ ಜಾರಿಗೆ ತರಲಾಯಿತು).

## 101.14 ಮಾದರಿ ಪ್ರಶ್ನೆಗಳು

1. 1871 ರಲ್ಲಿ ಜರ್ಮನಿಯು ಎದುರಿಸಿದ ಸಮಸ್ಯೆಗಳಾವುವು ವಿವರಿಸಿ. ಹೇಗೆ ಬಿಸ್ಮಾರ್ಕನು ಆ ಸಮಸ್ಯೆಗಳನ್ನು ಬಗೆಹರಿಸಿದನು.

2. ಜರ್ಮನ್ ಸಾಮ್ರಾಜ್ಯವನ್ನು ಸ್ಥಾಪಿಸಿದ ನಂತರ ರಾಜ್ಯ ಮತ್ತು ಚರ್ಚ್‌ನ ನಡುವೆ ಉಂಟಾದ ವಿವಾದದ ಬಗ್ಗೆ ವಿವರಿಸಿ

3. ಬಿಸ್ಮಾರ್ಕನ ವಿದೇಶಾಂಗ ನೀತಿಯ ಉದ್ದೇಶಗಳೇನು ? ಅವನು ಎಷ್ಟರಮಟ್ಟಿಗೆ ಈ ಉದ್ದೇಶಗಳನ್ನು ಈಡೇರಿಸಿಕೊಳ್ಳುವುದರಲ್ಲಿ ಯಶಸ್ವಿಯಾದನು.

## 101.15 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು


Crarig .G.A. **Europe Since 1815,** London 1966

Ketelbey, C.D.M. **AHistory of Modern Times from 1789,** Bombay 1976.

Maniot .J.A.R **A History of Europe,** Delhi 1979

Langer W.L. **European Alliances and Alignments 1871-90**

Taylor A.J.P. **Bismarck, the man and the Statesman**


ಪ್ರೊ॥ ಶಿವಣ್ಣ

# ಟಿಪ್ಪಣಿಗಳು

# ಘಟಕ - 102

## ಜರ್ಮನ್ ಸಾಮ್ರಾಜ್ಯ : ಕೈಸರ್ ಎರಡನೇ ವಿಲಿಯಂನ ಕಾಲ (1888-1918)

ರಚನೆ


102.0 ಉದ್ದೇಶಗಳು

102.1 ಪೀಠಿಕೆ

102.2 ಎರಡನೆಯ ವಿಲಿಯಂನ ಛಾನ್ಸಲರ್‌ಗಳು

102.3 ಒಳಾಡಳಿತ ನೀತಿ

102.3.1 ಕೈಗಾರಿಕಾ ಬೆಳವಣಿಗೆ

102.3.2 ಕೃಷಿ ಅಭಿವೃದ್ಧಿ

102.4 ಕಾರ್ಮಿಕರಿಗೆ ಸಂಬಂಧಿಸಿದ ಕಾಯಿದೆಗಳು

102.5 ಎರಡನೆಯ ವಿಲಿಯಂ ಮತ್ತು ಸಮಾಜವಾದಿಗಳು

102.6 ಸೈನ್ಯ ಮತ್ತು ನೌಕಾದಳದ ಬಲವರ್ಧನೆ

102.7 ವಸಾಹತು ನೀತಿ

102.8 ವಿದೇಶಾಂಗ ನೀತಿ

102.8.1 ರಷ್ಯಾದೊಡನೆ ರೀಇನ್ಶೂರೆನ್ಸ್ ಒಪ್ಪಂದ ರದ್ದು

102.8.2 ಮೊರೊಕ್ಕೊ ಬಿಕ್ಕಟ್ಟು (1905)

102.8.3 ಎರಡನೆಯ ಮೊರೊಕ್ಕೊ ಬಿಕ್ಕಟ್ಟು (1911)

102.8.4 ಇತರ ದೇಶಗಳೊಡನೆ ಸಂಬಂಧ

102.9 ಮೊದಲನೆಯ ಮಹಾಯುದ್ಧದಲ್ಲಿ ಕೈಸರ್ ಎರಡನೆಯ ವಿಲಿಯಂನ ಪಾತ್ರ

102.9.1 ನೌಕಾಬಲದ ಪೈಪೋಟಿ

102.9.2 ಆರ್ಥಿಕ ಪೈಪೋಟಿ

102.9.3 ವಸಾಹತು ಪೈಪೋಟಿ

102.9.4 ಯುದ್ಧದ ಪ್ರಾರಂಭ ಮತ್ತು ಜರ್ಮನಿಯ ದಿಗ್ವಿಜಯಗಳು

102.9.5 ಜರ್ಮನಿಯ ಸೋಲು ಮತ್ತು ಕೈಸರ್‌ನ ಪತನ

102.10 ಸಂಕ್ಷಿಪ್ತ ಅವಲೋಕನ

102.11 ಕ್ಲಿಷ್ಟ ಪದಗಳ ಅರ್ಥ

102.12 ಮಾದರಿ ಪ್ರಶ್ನೆಗಳು

102.13 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 102.0 ಉದ್ದೇಶಗಳು

ಈ ಘಟಕವನ್ನು ಅಧ್ಯಯನ ಮಾಡುವುದರಿಂದ ನೀವು ಗ್ರಹಿಸುವ ಅಂಶಗಳೆಂದರೆ :

* ಕೈಸರ್ ಎರಡನೆಯ ವಿಲಿಯಂನು ಜರ್ಮನಿಯ ಚಕ್ರವರ್ತಿಯಾದ ಮೇಲೆ ಅವರ ಇತಿಹಾಸದಲ್ಲಿ ಹೊಸ ಅಧ್ಯಾಯದ ಪ್ರಾರಂಭ.
* ಬಿಸ್ಮಾರ್ಕನ ರಾಜೀನಾಮೆಯ ನಂತರ ಮಹತ್ವಾಕಾಂಕ್ಷೆಯಿಂದ ಕೂಡಿದ್ದ ಕೈಸರ್ ವಿಲಿಯಂನ ಅಧೀನದಲ್ಲಿ ಕೈಗೊಂಬೆಗಳಂತೆ ಕೆಲಸ ನಿರ್ವಹಿಸಿದ ಛಾನ್ಸಲರ್‌ಗಳು.
* ಕೈಸರ್ ವಿಲಿಯಂನ ಆಳ್ವಿಕೆಯ ಕಾಲದಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ ಜರ್ಮನಿಯಲ್ಲಾದ ಅದ್ಭುತ ಬೆಳವಣಿಗೆ.
* ಪ್ರಬಲ ಸೈನ್ಯ ಮತ್ತು ನೌಕಾದಳದ ನಿರ್ಮಾಣ ಹಾಗೂ ವಸಾಹತುಗಳ ಸ್ಥಾಪನೆ.
* ಕೈಸರ್ ವಿಲಿಯಂನ ವಿಶ್ವರಾಜಕೀಯ ಹಾಗೂ ಪ್ರಬಲ ರಾಷ್ಟ್ರಗಳಾದ ಇಂಗ್ಲೆಂಡ್, ಫ್ರಾನ್ಸ್ ಮತ್ತು ರಷ್ಯಾಗಳೊಡನೆ ವಿರೋಧ.
* ಮೊದಲನೆಯ ಜಾಗತಿಕ ಯುದ್ಧಕ್ಕೆ ಕೈಸರ್‌ನ ಒಳಾಡಳಿತ ಮತ್ತು ವಿದೇಶಾಂಗ ನೀತಿಗಳು ಎಷ್ಟರ ಮಟ್ಟಿಗೆ ಕಾರಣ.
* ವಿಶ್ವಶಾಂತಿ ಹದಗೆಡಲು ಪ್ರಮುಖ ಕಾರಣ ಜರ್ಮನಿಯು ಇಂಗ್ಲೆಂಡಿನೊಡನೆ ನಡೆಸಿದ ನೌಕಾಬಲದ ಪೈಪೋಟಿ, ಆರ್ಥಿಕ ಪೈಪೋಟಿ, ಶಸ್ತ್ರಾಸ್ತ್ರ ಪೈಪೋಟಿ ಮತ್ತು ವಸಾಹತುಗಳ ಪೈಪೋಟಿ.
* ಮೊದಲನೆಯ ಜಾಗತಿಕ ಯುದ್ಧದಲ್ಲಿ ಆಸ್ಟ್ರಿಯಾ-ಹಂಗೇರಿ, ಬಲ್ಗೇರಿಯ ಮತ್ತು ಟರ್ಕಿಯೊಡನೆ ಜೊತೆಗೂಡಿ ಕೈಸರ್ ವಿಲಿಯಂ ನಡೆಸಿದ ಹೋರಾಟ.
* ಯುದ್ಧದ ಪ್ರಾರಂಭದಲ್ಲಿ ಜರ್ಮನಿ ತನ್ನ ಮಿತ್ರ ರಾಷ್ಟ್ರಗಳೊಡನೆ ಜೊತೆಗೂಡಿ ಗಳಿಸಿದ ದಿಗ್ವಿಜಯಗಳು.
* ಜರ್ಮನಿಯು ಅನುಭವಿಸಿದ ಅಪಜಯಗಳು.
* ಕೈಸರ್‌ನ ಪತನ ಮತ್ತು ಅವನ ಪಲಾಯನ.

## 102.1 ಪೀಠಿಕೆ

1888 ರಲ್ಲಿ ಒಂದನೆಯ ವಿಲಿಯಂ ಮರಣ ಹೊಂದಿದ ನಂತರ, ಮೂರನೆಯ ಫ್ರೆಡರಿಕ್ ಜರ್ಮನಿಯ ಸಿಂಹಾಸನಕ್ಕೆ ಬಂದನು. ಆದರೆ ಅವನು ಅನಾರೋಗ್ಯಕ್ಕೆ ತುತ್ತಾಗಿದ್ದುದರಿಂದ ಕೇವಲ ಮೂರು ತಿಂಗಳಲ್ಲೇ ಸಾವನ್ನಪ್ಪಿದನು. ಅನಂತರ ಅವನ ಮಗ ಎರಡನೆಯ ವಿಲಿಯಂ ಜರ್ಮನಿಯ ಸಿಂಹಾಸನವನ್ನಲಂಕರಿಸಿದನು. ಅವನ ಆಳ್ವಿಕೆಯ ಪ್ರಾರಂಭದಿಂದ ಜರ್ಮನಿಯ ಇತಿಹಾಸದಲ್ಲಿ ಹೊಸ ಅಧ್ಯಾಯವೊಂದು ಪ್ರಾರಂಭವಾಯಿತು. ಜರ್ಮನಿಯಲ್ಲಿ ಆಳ್ವಿಕೆ ನಡೆಸಿದ ರಾಜರುಗಳ ಪೈಕಿ ಎರಡನೆಯ ವಿಲಿಯಂ ಅತ್ಯಂತ ಮಹತ್ವಾಕಾಂಕ್ಷೆಯುಳ್ಳ ಅರಸನಾಗಿದ್ದನು. ಇಪ್ಪತ್ತೊಂಭತ್ತನೆಯ ವಯಸ್ಸಿನಲ್ಲಿ ಸಿಂಹಾಸನಾರೋಹಣ ಮಾಡಿದ ಎರಡನೆಯ ವಿಲಿಯಂ ಬಹುಮುಖ ಪ್ರತಿಭಾ ಸಂಪನ್ನನಾಗಿದ್ದನು. ಈ ನೂತನ ಯುವ ಚಕ್ರವರ್ತಿಯು ಕುಶಾಗ್ರಮತಿಯೂ, ಕರ್ತವ್ಯ ಶೀಲನೂ, ದಕ್ಷನೂ, ಮಹತ್ವಾಕಾಂಕ್ಷಿಯೂ ಆಗಿದ್ದನು. ರಾಜರ 'ದೈವಿಕ ಸಿದ್ಧಾಂತ ' ದಲ್ಲಿ ಅಚಲವಾದ ನಂಬಿಕೆಯನ್ನಿಟ್ಟಿದ್ದನು. ಈತನು ಪ್ರಜಾಪ್ರಭುತ್ವ ಮತ್ತು ಜನರ ಸ್ವಾತಂತ್ರ್ಯ ವಿರೋಧಿಯಾಗಿದ್ದನು. ಜರ್ಮನಿಯನ್ನು ಯೂರೋಪಿನಲ್ಲಷ್ಟೆ ಅಲ್ಲದೆ, ಇಡೀ ಪ್ರಪಂಚದಲ್ಲೇ ಪ್ರಬಲ ಶಕ್ತಿಯನ್ನಾಗಿ ಮಾಡುವ ಹಂಬಲ ಹೊಂದಿದ್ದನು. ವ್ಯವಸಾಯ ಮತ್ತು ಕೈಗಾರಿಕೆಗೆ ಪ್ರೋತ್ಸಾಹ ನೀಡುವುದರ ಮೂಲಕ ಜರ್ಮನಿಯನ್ನು ವಿಶ್ವದಲ್ಲೆ ಪ್ರಬಲ ರಾಷ್ಟ್ರವನ್ನಾಗಿ ಮಾಡಿದನು. ಅದೇ ರೀತಿ ಸೈನ್ಯ ಮತ್ತು ನೌಕಾ ಬಲವನ್ನು ಹೆಚ್ಚಿಸುವುದರ ಮೂಲಕ ವಿಶ್ವದಲ್ಲೇ ಅತ್ಯಂತ ಪ್ರಬಲ ರಾಷ್ಟ್ರವೆನಿಸಿದ್ದ ಇಂಗ್ಲೆಂಡಿನೊಡನೆ ಪೈಪೋಟಿ ನಡೆಸಲು ಜರ್ಮನಿಯನ್ನು ಸಜ್ಜುಗೊಳಿಸಿದನು. ತನ್ನ ವಸಾಹತು ನೀತಿ ಮತ್ತು ಶಸ್ತ್ರಾಸ್ತ್ರಗಳ ಪೈಪೋಟಿಯ ಮೂಲಕ ಇಂಗ್ಲೆಂಡ್ ಮತ್ತು ಇತರ ದೇಶಗಳಿಗೆ ಸವಾಲೊಡ್ಡುವ ಮೂಲಕ ಎರಡನೆಯ ಕೈಸರ್ ವಿಲಿಯಂ ಮೊದಲನೆಯ ಯುದ್ಧಕ್ಕೆ ಕಾರಣನಾದನು.

ಎರಡನೆಯ ವಿಲಿಯಂ ಅಧಿಕಾರ ರೂಢನಾದ ನಂತರ ಛಾನ್ಸಲರ್ ಬಿಸ್ಮಾರ್ಕ್ ಮತ್ತು ಚಕ್ರವರ್ತಿಯ ಭಿನ್ನಾಭಿಪ್ರಾಯಗಳು ಪ್ರಾರಂಭವಾದವು. ಒಂದನೆಯ ವಿಲಿಯಂನ ಕಾಲದಲ್ಲಿ ಬಿಸ್ಮಾರ್ಕ್ ಜರ್ಮನಿಯ ಆಡಳಿತವನ್ನು ಸಂಪೂರ್ಣವಾಗಿ ತನ್ನಲ್ಲಿ ಕೇಂದ್ರಿಕರಿಸಿಕೊಂಡಿದ್ದನು. ವಿಲಿಯಂ ಮತ್ತು ಬಿಸ್ಮಾರ್ಕನ ನಡುವೆ ಸಂಬಂಧ ಉತ್ತಮವಾಗಿತ್ತು. ಆದರೆ ಎರಡನೇ ವಿಲಿಯಂ ತಾನೇ ಸ್ವತಃ ಆಡಳಿತವನ್ನು ನಡೆಸಲು ನಿರ್ಧರಿಸಿದನು. ಆದ್ದರಿಂದ ಬಿಸ್ಮಾರ್ಕ್ ಮತ್ತು ವಿಲಿಯಂನ ನಡುವೆ ಮನಸ್ತಾಪ ಪ್ರಾರಂಭವಾಗಿ ಅಂತಿಮವಾಗಿ 1890 ರಲ್ಲಿ ಬಿಸ್ಮಾರ್ಕನು ರಾಜೀನಾಮೆ ನೀಡಿದನು.

## 102.2 ಎರಡನೆಯ ವಿಲಿಯಂನ ಛಾನ್ಸಲರ್‌ಗಳು

1890 ರಲ್ಲಿ ಬಿಸ್ಮಾರ್ಕನು ನಿರ್ಗಮಿಸಿದ ಮೇಲೆ ಜರ್ಮನ್ ಸಾಮ್ರಾಜ್ಯಕ್ಕೆ ಸಂಬಂಧಿಸಿದಂತೆ ಎಲ್ಲಾ ವಿಷಯಗಳ ಬಗ್ಗೆ ತಾನೇ ನಿರ್ಧಾರ ತೆಗೆದುಕೊಳ್ಳಲು ಪ್ರಾರಂಭಿಸಿದನು. ಆದುದರಿಂದ ಛಾನ್ಸಲರ್‌ಗಳು ಅವನ ನಿರ್ಧಾರಗಳನ್ನು ಕಾರ್ಯಗತಗೊಳಿಸುವ ಕೆಲಸವನ್ನು ಮಾತ್ರ ಮಾಡಬೇಕಾಗಿತ್ತು. ಛಾನ್ಸಲರ್‌ಗಳು ಬಿಸ್ಮಾರ್ಕನ ರೀತಿ ಸ್ವತಃ ನಿರ್ಧಾರ ತೆಗೆದುಕೊಂಡು ಕಾರ್ಯಗತಗೊಳಿಸುವ ಕಾಲ ಕೊನೆಗೊಂಡಿತು. ಕೈಸರ್ ವಿಲಿಯಂನ ಕಾಲದಲ್ಲಿ ಸೇವೆ ಸಲ್ಲಿಸಿದ ಛಾನ್ಸಲರ್‌ಗಳೆಂದರೆ ; ಕೆಪ್ರಿವಿ (1890-1894), ಹೊಹೆನ್‌ಲೊಹೆ (1894-1900), ಬುಲೊ (1900-1909), ಬೆತ್‌ಮನ್ ಹಾಲ್ವೆಗ್ (1909-1917). ಈ ನಾಲ್ಕು ಛಾನ್ಸಲರ್‌ಗಳಲ್ಲದೆ ಮೆಕೇಲಿಸ್, ಹರ್ಟ್‌ಲಿಂಗ್ ಮತ್ತು ರಾಜಕುಮಾರ ಮ್ಯಾಕ್ಸಿಮಿಲಿಯನ್. ಆದರೆ ಇವರ ಸೇವಾ ಅವಧಿ ತುಂಬಾ ಕಡಿಮೆ.

## 102.3 ಒಳಾಡಳಿತ ನೀತಿ

ಎರಡನೆಯ ಕೈಸರ್ ವಿಲಿಯಂ ಪ್ರಪಂಚದಲ್ಲೆ ಜರ್ಮನಿಯನ್ನು ಬಲಿಷ್ಠ ರಾಷ್ಟ್ರವನ್ನಾಗಿ ಮಾಡಲು ಪಣತೊಟ್ಟನು. ಆದ್ದರಿಂದ ಅವನು ಮೊದಲನೆಯದಾಗಿ ಕೈಗಾರಿಕಾ ಬೆಳವಣಿಗೆ ಮತ್ತು ವ್ಯವಸಾಯದ ಅಭಿವೃದ್ಧಿಯ ಕಡೆ ಗಮನ ಹರಿಸಿದನು. ಜನರಲ್ಲಿ ರಾಷ್ಟ್ರೀಯತೆಯ ಭಾವನೆ ಹೆಚ್ಚುವಂತೆ ಮಾಡಲು ಇನ್ನೂ ಅನೇಕ ಸುಧಾರಣೆಗಳನ್ನು ಜಾರಿಗೆ ತಂದನು. ಏಕೆಂದರೆ ಜರ್ಮನಿಯನ್ನು ಒಂದು ಪ್ರಬಲ ರಾಷ್ಟ್ರವನ್ನಾಗಿ ಮಾಡಲು ಇಂತಹ ಭಾವನೆಗಳ ಬೆಳವಣಿಗೆಯ ಅವಶ್ಯಕತೆ ಇತ್ತು.

### *102.3.1 ಕೈಗಾರಿಕೆಯ ಬೆಳವಣಿಗೆ*

ಬಿಸ್ಮಾರ್ಕನ ಕಾಲದಲ್ಲಿ ಪ್ರಾರಂಭವಾದ ಕೈಗಾರಿಕಾ ಬೆಳವಣಿಗೆಯು ಎರಡನೆಯ ಕೈಸರ್ ವಿಲಿಯಂನ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯನ್ನು ತಲುಪಿತು. 1914 ರ ವೇಳೆಗೆ ಪ್ರಪಂಚದಲ್ಲಿ ಅತ್ಯಂತ ದೊಡ್ಡ ಮೂರು ಕೈಗಾರಿಕಾ ರಾಷ್ಟ್ರಗಳಲ್ಲಿ ಜರ್ಮನಿಯು ಒಂದಾಯಿತು. ಇಂಗ್ಲೆಂಡ್ ಮತ್ತು ಅಮೇರಿಕಾ ಇನ್ನೆರಡು ರಾಷ್ಟ್ರಗಳು. ಫ್ರಾನ್ಸ್‌ನಿಂದ ಪಡೆದುಕೊಂಡ ಅಪಾರ ಯುದ್ಧ ಪರಿಹಾರ ಹಣ ಮತ್ತು ಫ್ರಾನ್ಸ್‌ನಿಂದ ಕಿತ್ತುಕೊಂಡ ಅಲ್ಸೇಸ್ ಮತ್ತು ಲೊರೈನ್ ಪ್ರಾಂತ್ಯಗಳು ಒದಗಿಸಿದ ಕಚ್ಚಾ ಪದಾರ್ಥಗಳು ಇಂತಹ ಕ್ಷಿಪ್ರಗತಿಯಲ್ಲಿ ಜರ್ಮನಿಯ ಕೈಗಾರಿಕೆಯ ಅಭಿವೃದ್ಧಿ ಉಂಟಾಗಲು ಕಾರಣವಾದ ಪ್ರಮುಖ ಅಂಶಗಳಾಗಿವೆ. ಬಿಸ್ಮಾರ್ಕನು ಅನುಸರಿಸಿದ್ದ ಸುಂಕ ರಕ್ಷಣಾ ನೀತಿಯನ್ನು ವಿಲಿಯಂ ಮುಂದುವರಿಸಿದನು. ಇಂತಹ ನೀತಿಯು ಕೂಡ ಕೈಗಾರಿಕೆ ಮತ್ತು ವ್ಯಾಪಾರ ಅಭಿವೃದ್ಧಿ ಹೊಂದಲು ಸಹಕಾರಿಯಾಯಿತು. ಜರ್ಮನಿಯಲ್ಲಿದ್ದ ನೂಲುವ ಯಂತ್ರಗಳು ಇಮ್ಮಡಿಗೊಂಡು ಹತ್ತಿಗಿರಣಿಯ ಬೆಳವಣಿಗೆ ಉಂಟಾಗಲು ಲೊರೈನ್ ಪ್ರಾಂತ್ಯ ಸಹಾಯ ಮಾಡಿತು. ಲೊರೈನ್‌ನಲ್ಲಿ ಕಬ್ಬಿಣದ ಅದಿರು ಯಥೇಚ್ಛವಾಗಿ ದೊರಕುತ್ತಿದ್ದುದು ಜರ್ಮನಿಯ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಅಭಿವೃದ್ಧಿ ಹೊಂದಲು ಸಹಕಾರಿಯಾಯಿತು. ಯೂರೋಪ್‌ನಲ್ಲೆ ಉಕ್ಕು ಮತ್ತು ಕಬ್ಬಿಣ ಕೈಗಾರಿಕೆಗೆ ಸಂಬಂಧಿಸಿದಂತೆ ಒಂದು ಪ್ರಗತಿ ಹೊಂದಿದ ರಾಷ್ಟ್ರವಾಯಿತು. ಉಕ್ಕು ಮತ್ತು ಕೈಗಾರಿಕೆಯ ಬೆಳವಣಿಗೆಯು ಹೆಚ್ಚು ರೈಲ್ವೆ ಮಾರ್ಗಗಳನ್ನು ನಿರ್ಮಿಸಲು, ಹಡಗುಗಳ ನಿರ್ಮಾಣಕ್ಕೆ ಶಸ್ತ್ರಾಸ್ತ್ರಗಳನ್ನು ಉತ್ಪಾದಿಸಲು, ಮತ್ತು ವಿವಿಧ ರೀತಿಯ ಯಂತ್ರೋಪಕರಣಗಳನ್ನು ತಯಾರಿಸಲು ಸಹಕಾರಿಯಾಯಿತು.

ಜರ್ಮನಿಯ ವಿದ್ಯುಚ್ಛಕ್ತಿ ಮತ್ತು ರಸಾಯನಿಕ ಕೈಗಾರಿಕೆಗಳು ಪ್ರಪಂಚದಲ್ಲೇ ಶ್ರೇಷ್ಠ ಎನಿಸಿಕೊಂಡು 1847ರಲ್ಲಿ ಬರ್ಲಿನ್‌ನಲ್ಲಿ ಸ್ಥಾಪಿತವಾದ ಸೀಮನ್ಸ್ ಮತ್ತು ಹಲ್ಸಕೆ ( Siemans and Halske) ಸಂಸ್ಥೆಯು ಟೆಲಿಗ್ರಾಫ್ ವ್ಯವಸ್ಥೆ, ವಿದ್ಯುತ್ ರೈಲ್ವೆ ಮತ್ತು ಟ್ರಾಲಿ ವ್ಯವಸ್ಥೆಗೆ ಸಂಬಂಧಿಸಿದಂತೆ ಜರ್ಮನಿಯಲ್ಲಿ ಕ್ರಾಂತಿಯನ್ನುಂಟುಮಾಡಿತು. ಅದೇ ರೀತಿ ಎಮಿಲ್ ರಥೇನೌ ಒಂದು ಎಲೆಕ್ಟ್ರಿಕಲ್ ಕಂಪನಿಯನ್ನು ಸ್ಥಾಪಿಸಿದನು. ಸಾರ್ವಜನಿಕರಿಂದ ವಿದ್ಯುತ್ ಉಪಕರಣಗಳಿಗೆ ಹೆಚ್ಚು ಬೇಡಿಕೆ ಉಂಟಾಯಿತು. ವಿದ್ಯುತ್ ಉಪಕರಣಗಳ ಕಂಪನಿಗಳು ಅತಿ ಶೀಘ್ರದಲ್ಲಿ ಬೆಳವಣಿಗೆ ಕಂಡವು. 1895 ರಲ್ಲಿ ಈ ಕಂಪನಿಗಳಲ್ಲಿ 26,000 ಜನ ಕೆಲಸ ನಿರ್ವಹಿಸುತ್ತಿದ್ದರು. 1906 ರ ವೇಳೆಗೆ ಈ ಕೆಲಸಗಾರರ ಸಂಖ್ಯೆ 10, 7000 ಕ್ಕೆ ಏರಿತು. ಇದೇ ರೀತಿ ಜರ್ಮನಿಯ ಎಲ್ಲಾ ಕೈಗಾರಿಕೆಗಳಲ್ಲೂ ಉದ್ಯೋಗದ ಅವಕಾಶ ಉಂಟಾಗಿ ಹೆಚ್ಚು ಜನರಿಗೆ ಕೆಲಸ ಲಭಿಸಿತು. ಇದೇ ರೀತಿ ರಸಾಯನಿಕ ಕೈಗಾರಿಕೆ, ಸಿಂಥೆಟಿಕ್ ಬಣ್ಣದ ಕೈಗಾರಿಕೆ ಮತ್ತು ಔಷದ ತಯಾರಿಕೆಗೆ ಸಂಬಂಧಿಸಿದಂತೆ ಪ್ರಗತಿ ಉಂಟಾಯಿತು.

### *102.3.2 ಕೃಷಿ ಅಭಿವೃದ್ಧಿ*

ಕೈಗಾರಿಕೆಗೆ ಪ್ರೋತ್ಸಾಹ ನೀಡುವುದರ ಜೊತೆಗೆ ವ್ಯವಸಾಯಕ್ಕೂ ವಿಲಿಯಂ ಪ್ರೋತ್ಸಾಹ ನೀಡಿದನು. ಏಕೀಕರಣವಾದ ಇಪ್ಪತ್ತೈದು ವರ್ಷಗಳಲ್ಲಿ ವ್ಯವಸಾಯೋತ್ಪನ್ನಗಳು ಶೇ. 50 ರಷ್ಟು ಹೆಚ್ಚಾಗಲು ವ್ಯವಸಾಯದಲ್ಲಿ ಅಳವಡಿಸಿಕೊಂಡ ಹೊಸ ತಂತ್ರಗಳು ಮತ್ತು ವ್ಯವಸಾಯದಲ್ಲಿ

ರಸಾಯನಿಕ ವಸ್ತುಗಳ ಬಳಕೆ ಕಾರಣವಾಗಿದ್ದವು. ಇಷ್ಟೆಲ್ಲಾ ಉತ್ಪಾದನೆ ಹೆಚ್ಚಾದರೂ ವ್ಯವಸಾಯಗಾರರು ತಮ್ಮ ದಾನ್ಯಗಳಿಗೆ ಬೆಲೆಯನ್ನು ಕಾಪಾಡಿಕೊಳ್ಳಲು ಸರ್ಕಾರದ ಸುಂಕ ರಕ್ಷಣಾ ಪದ್ಧತಿಯನ್ನು ಅವಲಂಬಿಸಿದ್ದರು.

## 102.4 ಕಾರ್ಮಿಕರಿಗೆ ಸಂಬಂಧಿಸಿದ ಶಾಸನಗಳು

ಕೆಪ್ರಿವಿಯು ಛಾನ್ಸಲರ್ ಆಗಿದ್ದಾಗ 1890 ರಲ್ಲಿ ಒಂದು ಶಾಸನವನ್ನು ಹೊರಡಿಸಿ ಕಾರ್ಮಿಕ ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು. ಮುಖ್ಯವಾಗಿ ಈ ನ್ಯಾಯಾಲಯಗಳು ಕಾರ್ಮಿಕರ ವೇತನಕ್ಕೆ ಸಂಬಂಧಿಸಿದ ವ್ಯಾಜ್ಯಗಳನ್ನು ಬಗೆಹರಿಸಬೇಕಾಗಿತ್ತು. ಕಾರ್ಮಿಕರ ನ್ಯಾಯಾಲಯಗಳಲ್ಲಿ ಕಾರ್ಮಿಕರ ಪ್ರತಿನಿಧಿಗಳು ಮತ್ತು ಕಾರ್ಖಾನೆಗಳ ಒಡೆಯರ ಪ್ರತಿನಿಧಿಗಳು ಇರುತ್ತಿದ್ದರು. ವಸ್ತುಗಳ ರೂಪದಲ್ಲಿ ನೀಡುತ್ತಿದ್ದ ವೇತನವನ್ನು ಕೊನೆಗೊಳಿಸಿ ಹಣದ ರೂಪದಲ್ಲಿ ವೇತನವನ್ನು ನೀಡುವ ವ್ಯವಸ್ಥೆಯನ್ನು ಜಾರಿಗೊಳಿಸಲಾಯಿತು. ಕಾರ್ಖಾನೆಗಳಲ್ಲಿ ಸ್ತ್ರೀಯರನ್ನು ಮತ್ತು ಮಕ್ಕಳನ್ನು ನೇಮಕಮಾಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ನಿರ್ಬಂಧ ಹೇರಲಾಯಿತು. ಎಲ್ಲಾ ಕೆಲಸಗಾರರಿಗೂ ಭಾನುವಾರವನ್ನು ರಜಾದಿನವೆಂದು ಘೋಷಿಸಲಾಯಿತು.

1900 ರಲ್ಲಿ ಅಪಘಾತಕ್ಕೆ ಸಂಬಂಧಿಸಿದ ಜೀವ ವಿಮೆಯನ್ನು ಎಲ್ಲಾ ವೃತ್ತಿಗಳಿಗೂ ವಿಸ್ತರಿಸಲಾಯಿತು (Accident - Insurance Law). ಅಶಕ್ತ ಹಾಗೂ ವೃದ್ಧರಿಗೆ ಪಿಂಚಣಿ ಕೊಡುವ ಸೌಲಭ್ಯವನ್ನು ಹೆಚ್ಚಿಸಲಾಯಿತು. 1903ರಲ್ಲಿ ಅಸ್ವಸ್ಥತೆಗೆ ಸಂಬಂಧಿಸಿದಂತೆ ಮತ್ತೊಂದು ಶಾಸನ ಹೊರಡಿಸಿ ಹೆಚ್ಚಿನ ಸಹಾಯ ಒದಗಿಸಿಕೊಡಲಾಯಿತು.

## 102.5 ಎರಡನೆಯ ವಿಲಿಯಂ ಮತ್ತು ಸಮಾಜವಾದಿಗಳು

ಎರಡನೆಯ ವಿಲಿಯಂ ಅಧಿಕಾರಕ್ಕೆ ಬಂದ ನಂತರ ಹಲವಾರು ಉದಾರವಾದಿ ಕ್ರಮಗಳನ್ನು ಜರ್ಮನಿಯಲ್ಲಿ ಜಾರಿಗೊಳಿಸಿದನು. ಬಿಸ್ಮಾರ್ಕನು ಸಮಾಜವಾದಿಗಳ ವಿರುದ್ಧ ಹೊರಡಿಸಿದ್ದ ಆಜ್ಞೆಗಳನ್ನು 1890 ರಲ್ಲಿ ನವೀಕರಿಸಲಿಲ್ಲ. ಬಿಸ್ಮಾರ್ಕ್ ಮತ್ತು ವಿಲಿಯಂ ನಡುವೆ ಮನಸ್ತಾಪ ತಲೆದೋರಲು ಇದು ಒಂದು ಪ್ರಬಲ ಕಾರಣವಾಗಿತ್ತು. ವಿಲಿಯಂ ಸಮಾಜವಾದಿಗಳನ್ನು ಕಾರ್ಮಿಕರಿಗೆ ಅನುಕೂಲವಾಗುವಂತಹ ಆಜ್ಞೆಗಳನ್ನು ಹೊರಡಿಸುವುದರ ಮೂಲಕ ಸಮಾಜವಾದಿಗಳ ಶಕ್ತಿ ಕುಂದುತ್ತದೆಂದು ಭಾವಿಸಿದನು. ಕಾರ್ಮಿಕರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳು ಸುಧಾರಿಸಿದರೆ ಅವರು ಸಮಾಜವಾದಿಗಳಿಂದ ದೂರವಾಗುತ್ತಾರೆಂದು ಲೆಕ್ಕ ಹಾಕಿದನು. ಆದರೆ ಸೌಮ್ಯ ವಿಧಾನಗಳಿಂದ ಯಾವುದೇ ಪ್ರಯೋಜನವಾಗಲಿಲ್ಲ. ಸಮಾಜವಾದಿಗಳು ಇನ್ನೂ ಪ್ರಬಲರಾದರು. ಇದರಿಂದ ಕುಪಿತನಾದ ಕೈಸರ್ ವಿಲಿಯಂ ಪುನಃ ಬಿಸ್ಮಾರ್ಕ್‌ನ ರೀತಿಯೇ ಸಮಾಜವಾದಿಗಳ ವಿರುದ್ಧ ಕಾನೂನನ್ನು ಹೊರಡಿಸಿ ಅವರನ್ನು ದಮನ ಮಾಡಬೇಕೆಂದು ತೀರ್ಮಾನಿಸಿದನು. ಇದಕ್ಕೆ ಸಂಬಂಧಿಸಿದಂತೆ ರೀಚ್‌ಸ್ಟಾಗ್‌ನಲ್ಲಿ ಕಾನೂನನ್ನು ಹೊರಡಿಸಲು ಪ್ರಯತ್ನಿಸಿದನು. ಆದರೆ ಇದಕ್ಕೆ ಪ್ರಬಲವಾದ ವಿರೋಧವಿದ್ದುದರಿಂದ ಸಮಾಜವಾದಿಗಳ ವಿರುದ್ಧ ಯಾವ ಕಾನೂನನ್ನು ಹೊರಡಿಸಲು ಸಾಧ್ಯವಾಗಲಿಲ್ಲ.

## 102.6 ಸೈನ್ಯ ಮತ್ತು ನೌಕಾ ದಳದ ಬಲವರ್ಧನೆ

ಎರಡನೆಯ ವಿಲಿಯಂ ಒಂದು ಬಲವಾದ ಸೈನ್ಯ ಮತ್ತು ನೌಕಾ ಬಲವನ್ನು ನಿರ್ಮಿಸಲು ಕ್ರಮಕೈಗೊಂಡನು. ಜರ್ಮನಿ ತನ್ನ ಸೈನ್ಯದ ಬಲವನ್ನು ಹೆಚ್ಚಿಸಿಕೊಂಡರೆ ಮಾತ್ರ ಪ್ರಪಂಚದಲ್ಲಿ ಒಂದು ಬಲಿಷ್ಠರಾಷ್ಟ್ರವಾಗಿ ಹೊರಹೊಮ್ಮಲು ಸಾಧ್ಯ ಎಂದು ವಾದಿಸಿದನು. "ನನ್ನ ನಂಬಿಕೆ ಇರುವುದು ನನ್ನ ಸೈನ್ಯದಲ್ಲಿ " ಎಂದು ಪ್ರತಿಪಾದಿಸಿದನು. ಆದ್ದರಿಂದ ಸೈನಿಕರ ಸಂಖ್ಯೆಯನ್ನು ಹೆಚ್ಚಿಸಲು ನಿರ್ಧರಿಸಿದನು. ಖಾಯಂಸೈನಿಕ ಸೇವೆಯನ್ನು ಮೂರು ವರ್ಷಗಳಿಂದ ಎರಡು ವರ್ಷಗಳಿಗೆ ಇಳಿಸಿದನು. ಅವನ ಈ ಪ್ರಯತ್ನಗಳಿಂದಾಗಿ 1914 ರಲ್ಲಿ ಮೊದಲನೆ ಜಾಗತಿಕ ಯುದ್ಧ ಪ್ರಾರಂಭವಾಗುವ ವೇಳೆಗೆ ಜರ್ಮನಿಯ ಸನ್ನದ್ಧ ಸೈನ್ಯದ ಬಲ 8,000,00 (Standing army) ಕ್ಕೇರಿತು. (ಕೆಲವು ಇತಿಹಾಸಕಾರರು 17.000.00 ಎಂದು ಅಭಿಪ್ರಾಯ ಪಟ್ಟಿದ್ದಾರೆ).

ಅದೇ ರೀತಿ ನೌಕಾಬಲವನ್ನು ವಿಸ್ತರಿಸಿದನು. ಜರ್ಮನಿಯ ಹೊಸ ವಸಾಹತುಶಾಹಿಗಳಿಗೆ ನೌಕಾಬಲದ ಅವಶ್ಯಕತೆ ಇತ್ತು. ಬೇರೆ ದೇಶಗಳೊಡನೆ ಪೈಪೋಟಿ ನಡೆಸಬೇಕಾದರೆ ಸೈನಿಕ ಮತ್ತು ನೌಕಾಬಲವನ್ನು ಹೆಚ್ಚಿಸಬೇಕಾಗಿತ್ತು. ಬಿಸ್ಮಾರ್ಕನು ಕೂಡ ನೌಕಾಬಲದ ಅವಶ್ಯಕತೆಯನ್ನು ಮನಗಂಡಿದ್ದರೂ, ಬ್ರಿಟನ್‌ನೊಡನೆ ಘರ್ಷಣೆಯನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ಬಹಳ ಎಚ್ಚರಿಕೆಯಿಂದ ಮುನ್ನಡೆದಿದ್ದನು. ಎರಡನೇ ವಿಲಿಯಂ ಒಂದು ಪ್ರಬಲ ನೌಕಾಬಲವನ್ನು ಜರ್ಮನಿ ಹೊಂದಬೇಕೆಂದು ಪಣತೊಟ್ಟನು. ಜರ್ಮನ್ ಸಾಮ್ರಾಜ್ಯವು ಒಂದು ಪ್ರಬಲ ಶಕ್ತಿಯಾಗಿ ತನ್ನ ಘನತೆಯನ್ನು ಕಾಪಾಡಿಕೊಳ್ಳಬೇಕಾದರೆ ಪ್ರಬಲ ನೌಕಾದಳವನ್ನು ಹೊಂದಬೇಕೆಂದು ತೀರ್ಮಾನಿಸಿದನು. "ಸಮುದ್ರ ಶಕ್ತಿಯೇ ಪ್ರಪಂಚದ ಶಕ್ತಿ " ಎಂದು ಘೋಷಿಸಿದನು. "ನನ್ನ ನೌಕಾಬಲವನ್ನು ನನ್ನ ಸೈನ್ಯಕ್ಕೆ ಸಮನಾಗಿ ಏರಿಸುವವರೆಗೆ ನಾನು ವಿಶ್ರಾಂತಿ ತೆಗೆದುಕೊಳ್ಳುವುದಿಲ್ಲ" ಎಂದು ಪ್ರಕಟಿಸಿದನು. 1897 ರಿಂದ ನೌಕಾ ಇಲಾಖೆಯ ಮುಖ್ಯಸ್ಥನಾಗಿದ್ದ ಅಡ್ಮಿರಲ್ ಒನ್ ಟಿರ್‌ಪಿಟ್ಸ್ ನೌಕಾ ಬಲದ ವಿಸ್ತರಣೆಯ ಕೆಲಸಕ್ಕೆ ಪ್ರೇರೇಪಣೆ ಮಾಡಿದವನು 1898 ರಲ್ಲಿ ಮೊದಲನೆಯ ನೌಕಾ ಮಸೂದೆಯನ್ನು (Navy Law) ಹೊರಡಿಸಲಾಯಿತು ಮತ್ತು ಇಂಗ್ಲೆಂಡಿನೊಡನೆ ಹಂತ ಹಂತವಾಗಿ ಘರ್ಷಣೆಗೆ ಅವಕಾಶ ಮಾಡಿಕೊಟ್ಟಿತು. ಯುದ್ಧದ ನೌಕೆಗಳನ್ನು ನಿರ್ಮಿಸಲು ಒಂದು ಹೊಸ ಯೋಜನೆಯನ್ನು ರೂಪಿಸಲಾಯಿತು. ಈ ಎಲ್ಲಾ ಕಾರಣಗಳಿಂದಾಗಿ ಜರ್ಮನಿಯು ಬ್ರಿಟನ್‌ನನ್ನು ಹೊರತುಪಡಿಸಿ ಪ್ರಪಂಚದಲ್ಲೇ ಅತ್ಯಾಧುನಿಕ ನೌಕೆಗಳನ್ನು ನಿರ್ಮಿಸಿತು.

1890 ರಲ್ಲಿ ಕೈಸರ್ ವಿಲಿಯಂ ಇಂಗ್ಲೆಂಡಿಗೆ ಜಾಂಜಿಬಾರ್‌ನ್ನು ನೀಡಿ ಅದರಬದಲು ಇಂಗ್ಲೆಂಡಿನಿಂದ ಹೆಲಿಗೊಲ್ಯಾಂಡನ್ನು ಪಡೆದುಕೊಂಡನು. ಆ ದ್ವೀಪದಲ್ಲಿ ಒಂದು ನೌಕಾ ಕೇಂದ್ರವನ್ನು ನಿರ್ಮಿಸಿದನು.

## 102.7 ವಸಾಹತುನೀತಿ

ಜರ್ಮನಿಯು ವಸಾಹತು ನೀತಿಗೆ ಆಸಕ್ತಿ ತೋರಿಸಿದ ಮೇಲೆ ಇದಕ್ಕೆ ಪ್ರೇರಣೆ ನೀಡಲು ಅನೇಕ ಸಂಸ್ಥೆಗಳು ಪ್ರಾರಂಭವಾದವು. 1882 ರಲ್ಲಿ ಕಲೋನಿಯಲ್ ಲೀಗ್ ಸ್ಥಾಪಿತವಾಯಿತು. 1893 ರಲ್ಲಿ ಪ್ಯಾನ್ - ಜರ್ಮನ್ ಲೀಗ್ ಅಸ್ತಿತ್ವಕ್ಕೆ ಬಂತು. 1898 ರಲ್ಲಿ ನೇವಿ ಲೀಗ್ ಸ್ಥಾಪನೆಯಾಯಿತು. ಈ ಸಂಸ್ಥೆಗಳ ಸ್ಥಾಪನೆಗೆ ಮತ್ತು ಅವುಗಳ ಚಟುವಟಿಕೆಗಳಿಗೆ ಜರ್ಮನಿಯ ಅನೇಕ ಧನಿಕರು ಹಣ ನೀಡಿದರು.

ಬುಲೊ ಛಾನ್ಸಲರ್ ಆಗಿದ್ದಾಗ 1907 ರಲ್ಲಿ ಬರ್ನ್‌ಹಾರ್ಡ್ ಡೆರ್‍ನ್ಬರ್ಗ್‌ನ ನೇತೃತ್ವದಲ್ಲಿ ಒಂದು ಪ್ರತ್ಯೇಕ ವಸಾಹತು ಇಲಾಖೆಯನ್ನು ಪ್ರಾರಂಭಿಸಿದನು. ಇದರಿಂದ ಜರ್ಮನಿಯ ವಸಾಹತು ನೀತಿಗೆ ಸಂಬಂಧಿಸಿದಂತೆ ಒಂದು ಹೊಸ ಯುಗ ಪ್ರಾರಂಭವಾಯಿತು. ಈ ಇಲಾಖೆಯ ಕೆಲಸ ಈ ವೇಳೆಗೆ ಜರ್ಮನಿಯ ಹಿಡಿತದಲ್ಲಿದ್ದ ವಸಾಹತುಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ಪ್ರಾರಂಭಿಸುವುದಾಗಿತ್ತು. ಆಡಳಿತದ ಸುಧಾರಣೆ, ರೈಲ್ವೆ ನಿರ್ಮಾಣ, ಪ್ಲಾಂಟರ್ಸ್‌ಗೆ ಸಹಾಯ ಧನ, ಶಾಲೆಗಳ ಸ್ಥಾಪನೆ ಮುಂತಾದ ಅಭಿವೃದ್ಧಿ ಕೆಲಸಗಳ ಮೂಲಕ ತನ್ನ ವಸಾಹತುಗಳನ್ನು ಬಲಪಡಿಸಿಕೊಂಡು ಇನ್ನಿತರ ರಾಷ್ಟ್ರಗಳೊಡನೆ ಪೈಪೋಟಿ ನಡೆಸುವ ಗುರಿಯನ್ನು ಹೊಂದಿತ್ತು. ಈಗಾಗಲೇ ತಿಳಿಸಿರುವಂತೆ ಜರ್ಮನಿಯು ಜಾಂಜಿಬಾರ್‌ನ್ನು ಇಂಗ್ಲೆಂಡ್‌ಗೆ ನೀಡಿ, ಅದರಿಂದ ಹೆಲಿಗೊಲ್ಯಾಂಡನ್ನು ಪಡೆಯಿತು. 1895 ರಲ್ಲಿ ಉತ್ತರ ಸಮುದ್ರ ಮತ್ತು ಬಾಲ್ಟಿಕ್ ಸಮುದ್ರದ ನಡುವೆ ಕೀಲ್ ಕಾಲುವೆಯನ್ನು ತೋಡಿಸಿ, ಅದನ್ನು ನೌಕಾದಳದ ಉಪಯೋಗಕ್ಕೆ ತೆರೆಯಲಾಯಿತು. 1896 ರ ಕ್ರೂಗರ್ ಟೆಲಿಗ್ರಾಂ ಘಟನೆಯು ಜರ್ಮನಿ ಮತ್ತು ಇಂಗ್ಲೆಂಡ್‌ನ ನಡುವಣ ಘರ್ಷಣೆಗೆ ಸಂಬಂಧಿಸಿದಂತೆ ಮೊಟ್ಟಮೊದಲನೆಯ ಘಟನೆಯಾಗಿದೆ. ದಕ್ಷಿಣ ಆಫ್ರಿಕಾದ ಗಣರಾಜ್ಯ ಅಧ್ಯಕ್ಷನಾಗಿದ್ದ ಕ್ರೂಗರ್ (ಟ್ರಾನ್ಸ್‌ವಾಲ್) ಡಾ. ಜೇಮ್ಸನ್ (Jameson) ನ ಧಾಳಿಯನ್ನು

ಹಿಮ್ಮೆಟ್ಟಿಸುವುದರಲ್ಲಿ ಯಶಸ್ವಿಯಾದನು. ಜರ್ಮನಿಯ ವಿಲಿಯಂ ಕ್ರೂಗರ್‌ಗೆ ಅಭಿನಂದಿಸಿ ಒಂದು ತಂತಿ ಸಂದೇಶವನ್ನು ಕಳುಹಿಸಿದನು. ಈ ಕ್ರೂಗರ್ ಟೆಲಿಗ್ರಾಂ ಇಂಗ್ಲೆಂಡಿನ ಸಾರ್ವಜನಿಕರ ಕೋಪವನ್ನು ಕೆರಳಿಸಿತು. ಎರಡು ರಾಷ್ಟ್ರಗಳಲ್ಲೂ ಸಾರ್ವಜನಿಕರು ಪರಸ್ಪರ ನಿಂದನೆಯಲ್ಲಿ ತೊಡಗಿದರು. ಈ ಘಟನೆಯು ಎರಡು ರಾಷ್ಟ್ರಗಳ ನಡುವೆ ಸೌಹಾರ್ಧತೆಯ ಸಂಬಂಧದಿಂದ ದೂರ ಸರಿಯಲು ಕಾರಣವಾಯಿತು.

ಜರ್ಮನರು ಜಪಾನಿಯರ ವಿರುದ್ಧದ ಸಹಾಯದ ಪ್ರತಿಫಲವಾಗಿ ಒಂದು ಬಂದರನ್ನು ನೀಡುವಂತೆ ಒತ್ತಾಯಿಸುತ್ತಿದ್ದರು. 1895 ರಿಂದಲೂ ಚೀನಾದ ತೀರ ಪ್ರದೇಶದಲ್ಲಿ ಒಂದು ಬಂದರನ್ನು ನೀಡುವಂತೆ ಒತ್ತಾಯಿಸುತ್ತಿದ್ದರು. ಮುಖ್ಯವಾಗಿ ಕಿಯಾಚೌ ಬಂದರನ್ನು ನೀಡಬೇಕೆಂದು ಒತ್ತಾಯಿಸಿದರು. ಇದೇ ವೇಳೆಯಲ್ಲಿ ಜರ್ಮನಿಯ ಇಬ್ಬರು ಕ್ರೈಸ್ತಧರ್ಮ ಪ್ರಚಾರಕರು ಕೊಲೆ ಮಾಡಲ್ಪಟ್ಟರು. ಈ ಘಟನೆಯ ನಂತರ ಜರ್ಮನರು ಚೀನಾದ ಮೇಲೆ ಮತ್ತಷ್ಟು ಒತ್ತಡ ಹೇರಿದರು. ಚೀನಿಯರು ಬಹಳ ದಿನಗಳವರೆಗೆ ಮಣಿಯಲಿಲ್ಲ. ಆದರೆ ಅಂತಿಮವಾಗಿ 1898 ರ ಮಾರ್ಚ್ 6 ರಂದು ಒಂದು ಒಪ್ಪಂದವನ್ನು ಜರ್ಮನಿಯೊಡನೆ ಚೀನಾ ಮಾಡಿಕೊಂಡಿತು. ಈ ಒಪ್ಪಂದದಲ್ಲಿ ಕಿಯಾಚೌ ಬಂದರನ್ನು 99 ವರ್ಷಗಳ ಗುತ್ತಿಗೆಗೆ ಜರ್ಮನಿಗೆ ನೀಡಲಾಯಿತು. ಇದರ ಜೊತೆಗೆ ಷಾಟುಂಗ್ ಪ್ರಾಂತ್ಯದಲ್ಲಿ ಎರಡು ರೈಲ್ವೆ ಮಾರ್ಗಗಳನ್ನು ನಿರ್ಮಿಸಲು ಜರ್ಮನಿಗೆ ಅನುಮತಿ ನೀಡಲಾಯಿತು.

ಯೂರೋಪಿನ ರೋಗಗ್ರಸ್ತ ಮನುಷ್ಯನೆಂದೆ ಖ್ಯಾತಿ ಹೊಂದಿದ್ದ ತುರ್ಕಿ ಸಾಮ್ರಾಜ್ಯದೊಡನೆ ಸೌಹಾರ್ಧತೆಯ ಹಸ್ತ ಚಾಚಿದನು. ಎರಡನೆಯ ವಿಲಿಯಂ 1889 ಮತ್ತು 1898 ರಲ್ಲಿ ಎರಡನೆಯ ಅಬ್ದುಲ್ ಹಮೀದನೊಡನೆ ಮಾತುಕತೆ ನಡೆಸಿದನು. ಮುಖ್ಯವಾಗಿ ಬರ್ಲಿನ್ ಮತ್ತು ಬಾಗ್ದಾದ್ ನಡುವೆ ಒಂದು ರೈಲ್ವೆ ಮಾರ್ಗವನ್ನು ನಿರ್ಮಿಸಲು ಜರ್ಮನಿಯು ಎಲ್ಲಾ ರೀತಿಯ ಸಹಾಯವನ್ನು ನೀಡಲು ಒಪ್ಪಿಕೊಂಡಿತು.

## 102.8 ವಿದೇಶಾಂಗ ನೀತಿ

ಪ್ರಪಂಚ ರಾಜಕೀಯ ವಿಸ್ತರಣೆ ಮತ್ತು ನೌಕಾಬಲ ಕೈಸರ್ ವಿಲಿಯಂನ ವಿದೇಶಾಂಗ ನೀತಿಯ ಮೂರು ಪ್ರಮುಖ ಲಕ್ಷಣಗಳಾಗಿದ್ದವು. ಈ ರೀತಿಯಾಗಿ ಬಿಸ್ಮಾರ್ಕ್‌ನು ಅನುಸರಿಸಿದ್ದ ಜಾಗರೂಕತೆಯ ವಿದೇಶಾಂಗ ನೀತಿಯು ಸಂಪೂರ್ಣವಾಗಿ ಕೊನೆಗೊಂಡಿತು. "ಬಿಸ್ಮಾರ್ಕನ ಹೊಂದಾಣಿಕೆಯ ವಿದೇಶಾಂಗ ನೀತಿಗೆ ವಿಲಿಯಂನು ವಿದಾಯ ಹೇಳಿದನು ಮತ್ತು ವಿಶ್ವ ರಾಜಕೀಯ ನೀತಿಯನ್ನು ಅನುಸರಿಸಿದನು" ಎಂಬುದಾಗಿ ಹೆಚ್.ಎ. ಎಲ್ ಫಿಷರ್ ಅವರು ಅಭಿಪ್ರಾಯ ಪಟ್ಟಿದ್ದಾರೆ. ವಿಶ್ವದ ಎಲ್ಲ ರಾಜಕೀಯ ಘಟನೆಗಳಲ್ಲೂ ಜರ್ಮನಿ ಪ್ರಮುಖ ಪಾತ್ರವನ್ನು ವಹಿಸಬೇಕೆಂದು ಘೋಷಿಸಿದನು. " ವಿಶ್ವದ ಯಾವುದೇ ಭಾಗದಲ್ಲೂ ಯಾವ ಘಟನೆಯು ನಡೆಯಕೂಡದು" ಎಂದು ಸಾರಿದನು. ಜರ್ಮನ್ ಜನಾಂಗದ ಶ್ರೇಷ್ಠತೆಯಲ್ಲಿ ನಂಬಿಕೆ ಇಟ್ಟಿದ್ದನು. ಜರ್ಮನ್ ಜನಾಂಗ ವಿಶ್ವದ ರಾಜಕೀಯದಲ್ಲೇ ಪ್ರಮುಖ ಪಾತ್ರ ವಹಿಸಬೇಕೆಂದು ಹೇಳಿದನು. " ನಾನು ಮತ್ತು ನನ್ನ **25** ಸೈನ್ಯದಳಗಳನ್ನು ಬಿಟ್ಟರೆ ಯಾವ ಸಮತೋಲನ ಶಕ್ತಿಯು ಇಲ್ಲ " ಎಂಬುದಾಗಿ ಕೈಸರ್ ಹೇಳಿದನೆಂಬುದಾಗಿ ತಿಳಿದುಬರುತ್ತದೆ. ಜರ್ಮನ್ ರಾಷ್ಟ್ರೀಯ ನೀತಿಯು ಆಕ್ರಮಣಶೀಲ ಹಾಗೂ ವಿಸ್ತರಣಾ ನೀತಿಯಿಂದ ಕೂಡಿರಬೇಕೆಂದು ಹೇಳಿದನು. ಇಂತಹ ಆಕ್ರಮಣಕಾರಕ ವಿದೇಶಾಂಗ ನೀತಿಯು ಇಂಗ್ಲೆಂಡ್ ಮತ್ತು ಜರ್ಮನಿಯ ಸಂಬಂಧ ಹದಗೆಟ್ಟು ಘರ್ಷಣೆಗೆ ಅವಕಾಶ ಮಾಡಿಕೊಟ್ಟಿತು. ತುರ್ಕಿಯ ಸುಲ್ತಾನನೊಡನೆ ಒಪ್ಪಂದ ಮಾಡಿಕೊಂಡಿದುದು ಇಂಗ್ಲೆಂಡಿನೊಡನೆ ಸಂಬಂಧ ಮತ್ತಷ್ಟು ಹದಗೆಡಲು ಕಾರಣವಾಯಿತು.

### 102.8.1 *ರಷ್ಯಾದೊಡನೆ ಮಾಡಿಕೊಂಡಿದ್ದ ರೀಇನ್ಸೂರೆನ್ಸ್ ಒಪ್ಪಂದ ರದ್ದು*

ಕೈಸರ್ ವಿಲಿಯಂನ ವಿದೇಶಾಂಗ ನೀತಿಯಿಂದಾಗಿ ರಾಜ್ಯ ತಂತ್ರ ದಿವಾಳಿ ಪ್ರಾರಂಭವಾಯಿತು. ಬಿಸ್ಮಾರ್ಕನ ವಿಸ್ತಾರವಾದ ಒಕ್ಕೂಟಗಳ ಪದ್ಧತಿ ಕೊನೆಗೊಂಡಿತು. ವಿಲಿಯಂನು ಅಧಿಕಾರಕ್ಕೆ ಬಂದ ಮೂರು ವರ್ಷಗಳಲ್ಲೇ ರಷ್ಯಾದ ವಿರೋಧವನ್ನೂ ಕಟ್ಟಿಕೊಂಡನು. ಆದ್ದರಿಂದಾಗಿ ರಷ್ಯಾವು ಫ್ರಾನ್ಸಿನೊಡನೆ ತನ್ನ ಸೌಹಾರ್ದದ ಸಂಬಂಧ ಬೆಳೆಸಿಕೊಳ್ಳಲು ಪ್ರಯತ್ನ ನಡೆಸತೊಡಗಿತು. ಬಿಸ್ಮಾರ್ಕನು ನಿರ್ಗಮಿಸುತ್ತಿದ್ದಂತೆಯೇ ರಷ್ಯಾದೊಡನೆ ಮಾಡಿಕೊಂಡಿದ್ದ ರೀಇನ್ಸೂರೆನ್ಸ್ ಒಪ್ಪಂದ ಮುರಿದು ಬೀಳುವುದಕ್ಕೆ ಕಾರಣನಾದನು. ವಿಲಿಯಂನ ದೃಷ್ಟಿಯಲ್ಲಿ ಈ ಒಪ್ಪಂದವು ಅತ್ಯಂತ ಸಂಕೀರ್ಣದಿಂದ ಕೂಡಿದೆ ಹಾಗೂ ಆಸ್ಟ್ರಿಯಾದ ಹಿತಾಸಕ್ತಿಗಳಿಗೆ ದಕ್ಕೆ ಉಂಟುಮಾಡುತ್ತದೆ ಎಂದು ಕೈಸರ್ ಹೇಳಿದ. ಈ ರೀತಿ ವಿಲಿಯಂ ರೀಇನ್ಸುರೆನ್ಸ್ ಒಪ್ಪಂದವನ್ನು ರಷ್ಯಾದೊಡನೆ ನವೀಕರಿಸದೆ ಹೋದುದರಿಂದ ರಷ್ಯಾ ಮತ್ತು ಫ್ರಾನ್ಸ್ ಒಂದಾಗಲು ಅವಕಾಶ ಮಾಡಿಕೊಟ್ಟನು. ಫ್ರಾನ್ಸ್ ಜೊತೆ ಒಪ್ಪಂದ ಮಾಡಿಕೊಳ್ಳುವುದರ ಮೂಲಕವೇ ರಷ್ಯಾ ತನ್ನ ಏಕಾಂಗಿತನದ ಭಯದಿಂದ ಹೊರಬರಲು ಸಾಧ್ಯ ಎಂದು ತೀರ್ಮಾನಿಸಿತು. ಕ್ರಿಮಿಯಾ ಯುದ್ಧ ಮುಗಿದ ಸುಮಾರು 36 ವರ್ಷಗಳ ನಂತರ ಮೊಟ್ಟಮೊದಲನೆಯದಾಗಿ ಫ್ರಾನ್ಸ್ ತನ್ನ ನೌಕೆಯನ್ನು 1891 ರಲ್ಲಿ ರಷ್ಯಾದ ಬಂದರಾದ ಕ್ರಾನ್‌ಸ್ಟಟ್‌ಗೆ (Kronstadt) ಕಳುಹಿಸಿಕೊಟ್ಟಿತು. 1893ರಲ್ಲಿ ಒಂದು ನೌಕೆ ಫ್ರಾನ್ಸ್‌ಗೆ ಭೇಟಿ ಕೊಟ್ಟಿತು. 1893 ರ ಡಿಸೆಂಬರ್ 31 ರಂದು ಇವೆರಡು ರಾಷ್ಟ್ರಗಳು ಗುಪ್ತವಾಗಿ ಒಂದು ಒಪ್ಪಂದವನ್ನು ಮಾಡಿಕೊಂಡವು. ಮೂರನೆಯ ಅಲೆಗ್ಸಾಂಡರ್‌ನ ಮರಣದ ನಂತರ 1895 ರ ಜನವರಿಯಲ್ಲಿ ಒಪ್ಪಂದವನ್ನು ಬಹಿರಂಗಗೊಳಿಸಲಾಯಿತು. ಈ ಒಪ್ಪಂದವು 1918 ರವರೆಗೂ ಅಸ್ತಿತ್ವದಲ್ಲಿತ್ತು. ಫ್ರಾಂಕೋ- ರಷ್ಯನ್ ಒಪ್ಪಂದವು ಜರ್ಮನಿಯಲ್ಲಿ ಭೀತಿಯ ಗಾಳಿಯನ್ನೆಬ್ಬಿಸಿತು.

### 102.8.2 *ಮೊದಲನೆಯ ಮೊರೊಕ್ಕೊ ಬಿಕ್ಕಟ್ಟು (1905)*

ಜರ್ಮನಿಯು ಫ್ರಾನ್ಸನ್ನು ಮೊರಾಕ್ಕೊದಿಂದ ಹೊರದಬ್ಬಲು ನಡೆಸಿದ ಪ್ರಯತ್ನಗಳು ಫ್ರಾನ್ಸ್ ಮತ್ತು ಜರ್ಮನಿಯ ಸಂಬಂಧ ಮತ್ತಷ್ಟು ಹದಗೆಡಲು ಕಾರಣವಾಯಿತು.

1904 ರಲ್ಲಿ ಫ್ರಾನ್ಸ್ ಇಂಗ್ಲೆಂಡಿನೊಡನೆ ಒಂದು ಒಪ್ಪಂದವನ್ನು ಮಾಡಿಕೊಳ್ಳುವುದರ ಮೂಲಕ ಎರಡು ರಾಷ್ಟ್ರಗಳ ಮಧ್ಯೆ ಇದ್ದ ಘರ್ಷಣೆಗಳು ಕೊನೆಗೊಂಡು ಸೌಹಾರ್ದತೆಗೆ ನಾಂದಿಯಾಯಿತು. ಈ ಒಪ್ಪಂದವನ್ನು ಆಂಗ್ಲೊ-ಫ್ರೆಂಚ್ ಎನ್‌ಟಿಟಿ ಕಾರ್ಡಿಯಲ್ ಎಂದು ಕರೆಯಲಾಗಿದೆ. ಈ ಒಪ್ಪಂದದ ಪ್ರಕಾರ ಇಂಗ್ಲೆಂಡ್ ಈಜಿಪ್ಟಿನಲ್ಲಿ ಹೊಂದಿದ್ದ ಹಿತಾಸಕ್ತಿಗಳಿಗೆ ಫ್ರಾನ್ಸ್ ತನ್ನ ಸಮ್ಮತಿಯನ್ನು ಸೂಚಿಸಿತು. ಅದೇ ರೀತಿ ಫ್ರಾನ್ಸ್ ಹಿತಾಸಕ್ತಿಗಳನ್ನು ಮೊರಾಕ್ಕೊದಲ್ಲಿ ಇಂಗ್ಲೆಂಡ್ ಗುರುತಿಸಿತು. ಮೊರಾಕ್ಕೊಗೆ ಸಂಬಂಧಿಸಿದಂತೆ ಇಂಗ್ಲೆಂಡ್ ಮತ್ತು ಫ್ರಾನ್ಸ್ ನಡುವೆ ಆದ ಒಪ್ಪಂದಕ್ಕೆ ಜರ್ಮನಿ ತನ್ನ ವಿರೋಧವನ್ನು ವ್ಯಕ್ತಪಡಿಸಿತು. ಈ ವಿಷಯದಲ್ಲಿ ಜರ್ಮನಿಯ ಸಲಹೆಯನ್ನು ಕೇಳಬೇಕಾಗಿತ್ತು ಎಂದು ಅದು ವಾದಿಸಿತು. ಜರ್ಮನಿಯ ಈ ನಿಲುವು ಅಂತರರಾಷ್ಟ್ರೀಯ ವಿವಾದಕ್ಕೆ ಕಾರಣವಾಯಿತು. ಇದೇ ಮೊದಲನೆಯ ಮೊರಾಕ್ಕೊ ಬಿಕ್ಕಟ್ಟು. ಈ ಬಿಕ್ಕಟ್ಟನ್ನು ಪರಿಹರಿಸಲು 12 ರಾಷ್ಟ್ರಗಳು ದಕ್ಷಿಣ ಸ್ಪೇನ್‌ನಲ್ಲಿದ್ದ ಅಲ್ಜಿಕರಾಸ್‌ನಲ್ಲಿ ಸಭೆ ನಡೆಸಿದವು (1906). ಈ ಸಮ್ಮೇಳನದಲ್ಲಿ ಜರ್ಮನಿಯು ಹೆಚ್ಚು ಪ್ರಭಾವ ಬೀರಲು ಸಾಧ್ಯವಾಗಲಿಲ್ಲ. ಬಹುತೇಕ ರಾಷ್ಟ್ರಗಳು ಇಂಗ್ಲೆಂಡ್ ಮತ್ತು ಫ್ರಾನ್ಸನ್ನು ಬೆಂಬಲಿಸಿದವು. ಜರ್ಮನಿಗೆ ಅಪಮಾನವಾದಂತಾಯಿತು. ಮೊರಾಕ್ಕೊದಲ್ಲಿ ಶಾಂತಿಯನ್ನು ಕಾಪಾಡಲು ಸ್ಪ್ಯಾನಿಷ್ ಮತ್ತು ಫ್ರೆಂಚ್ ಸೈನಿಕರನ್ನೊಳಗೊಂಡಂತೆ ಒಂದು ಕಾವಲು ಪಡೆಯನ್ನು ನೇಮಿಸಲಾಯಿತು. ಈ ಸಮ್ಮೇಳನವು ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಮತ್ತು ಸ್ಪೆಯಿನ್ ದೇಶಗಳ ನೇತೃತ್ವದಲ್ಲಿ ವ್ಯಾಪಾರ ಮತ್ತು ವಾಣಿಜ್ಯವನ್ನು ನೋಡಿಕೊಳ್ಳುವ ದೃಷ್ಟಿಯಿಂದ ಒಂದು ಬ್ಯಾಂಕನ್ನು ಸ್ಥಾಪಿಸಲು ನಿರ್ಧರಿಸಿತು. ಅಲ್ಲಿಯ ಸುಂಕ ವಸೂಲಿ ಕೆಲಸ ನಿರ್ವಹಿಸಲು ಫ್ರಾನ್ಸ್ ಮತ್ತು ಸ್ಪೆಯಿನ್‌ಗೆ ಅಧಿಕಾರ ನೀಡಲಾಯಿತು. ಸಂಕ್ಷಿಪ್ತವಾಗಿ ಹೇಳುವುದಾದರೆ ಜರ್ಮನಿಯು ಮೊರಾಕ್ಕೊದಲ್ಲಿ ಫ್ರಾನ್ಸಿನ ಪ್ರಭಾವವನ್ನು ತಡೆಗಟ್ಟುವುದರಲ್ಲಿ ವಿಫಲವಾಯಿತು.

### 102.8.3 ಎರಡನೆಯ ಮೊರೊಕ್ಕೊ ಬಿಕ್ಕಟ್ಟು (1911)

1911 ರಲ್ಲಿ ಮತ್ತೊಂದು ಬಿಕ್ಕಟ್ಟು ಉಂಟಾಯಿತು. ಮೊರಾಕ್ಕೊದ ಜನರು ಸುಲ್ತಾನನ ವಿರುದ್ಧ ದಂಗೆ ಎದ್ದರು. ಫ್ರಾನ್ಸ್‌ನ ನಿರ್ದೇಶನದಂತೆ ಸುಲ್ತಾನನು ನಡೆದುಕೊಳ್ಳುತ್ತಿರುವನೆಂಬ ಆರೋಪವನ್ನು ಸುಲ್ತಾನನ ಮೇಲೆ ಹೊರಿಸಿ, ಜನರು ದಂಗೆ ಎದ್ದರು. ಫ್ರೆಂಚ್ ಮತ್ತು ಸ್ಪ್ಯಾನಿಷ್ ಸೈನಿಕರು ಈ ದಂಗೆಯನ್ನು ಹತ್ತಿಕ್ಕುವುದರಲ್ಲಿ ಯಶಸ್ವಿಯಾದರು. ಫ್ರೆಂಚ್ ಸೈನಿಕರು ಪೆಜ್ (Fez) ನ್ನು ಗೆದ್ದುಕೊಂಡು ಮೊರಾಕ್ಕೊದಲ್ಲಿ ಶಾಂತಿ ನೆಲಸುವವರೆಗೂ ಅಲ್ಲಿಂದ ಕದಲುವುದಿಲ್ಲವೆಂದು ಪ್ರಕಟಿಸಿದರು. ಜರ್ಮನಿಯು ಪುನಃ ಫ್ರಾನ್ಸಿನ ನೀತಿಯನ್ನು ವಿರೋಧಿಸಿತು. ಒಂದು ಯುದ್ಧದ ಹಡಗನ್ನು ಕೂಡ ಅಗಾಡಿರ್ (Agadir) ಕಳುಹಿಸಿ ತನ್ನ ಹಿತಾಸಕ್ತಿಗಳನ್ನು ಕಾಪಾಡುವುದಕ್ಕೆ ಜರ್ಮನಿ ಕ್ರಮಕೈಗೊಂಡಿತು. ಈ ರೀತಿಯಾಗಿ ಮತ್ತೊಂದು ಬಿಕ್ಕಟ್ಟು ತಲೆದೋರಿತು. ಫ್ರೆಂಚ್ ಕಾಂಗೊವನ್ನು ಬಿಟ್ಟುಕೊಟ್ಟರೆ ತನ್ನ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಳ್ಳುವುದಾಗಿ ಜರ್ಮನಿ ತಿಳಿಸಿತು. ಆದರೆ ಇಂಗ್ಲೆಂಡ್ ಫ್ರಾನ್ಸ್‌ಗೆ ಜರ್ಮನಿಯ ಯಾವುದೇ ಬೇಡಿಕೆಯನ್ನು ಒಪ್ಪಿಕೊಳ್ಳಬಾರದೆಂದು ಸೂಚಿಸಿತು. ಆದರೆ ಅಂತಿಮವಾಗಿ 1911 ರಲ್ಲಿ ಫ್ರಾನ್ಸ್ ಮತ್ತು ಜರ್ಮನಿಗಳೆರಡು ಒಂದು ರಾಜಿ ಮಾಡಿಕೊಂಡವು. ಈ ಒಪ್ಪಂದದ ಪ್ರಕಾರ ಜರ್ಮನಿಯು ಮೊರಾಕ್ಕೊದಲ್ಲಿ ಫ್ರಾನ್ಸ್‌ನ ಹಿತಾಸಕ್ತಿಗಳ ಹಕ್ಕನ್ನು ಒಪ್ಪಿಕೊಂಡಿತು. ಅದೇ ರೀತಿ ಫ್ರೆಂಚ್ ಕಾಂಗೊವಲ್ಲಿ ಜರ್ಮನಿಯ ಹಕ್ಕನ್ನು ಫ್ರಾನ್ಸ್ ಒಪ್ಪಿಕೊಂಡಿತು. ಅಂತಿಮವಾಗಿ ಮೊರಾಕ್ಕೊ ಫ್ರಾನ್ಸಿನ ಒಂದು ವಸಾಹತುವಾಗಿ ಫ್ರಾನ್ಸ್‌ನ ವಸಾಹತು ಸಾಮ್ರಾಜ್ಯದಲ್ಲಿ ವಿಲೀನವಾಯಿತು.

### 102.8.4 ಇನ್ನಿತರ ದೇಶಗಳೊಡನೆ ಸಂಬಂಧ

ಈಗಾಗಲೆ ವಿವರಿಸಿರುವಂತೆ ಜರ್ಮನಿಯು ತುರ್ಕಿ ಸಾಮ್ರಾಜ್ಯದೊಡನೆ ಉತ್ತಮ ಸಂಬಂಧ ಹೊಂದಿತ್ತು. ಈ ಸಂಬಂಧ ಮೊದಲನೆಯ ಮಹಾಯುದ್ಧದಲ್ಲಿ ತುರ್ಕಿಯು ಜರ್ಮನಿಯ ಪರ ಹೋರಾಟಕ್ಕೆ ದುಮುಕಲು ಕಾರಣವಾಯಿತು.

1911 ರಲ್ಲಿ ತುರ್ಕಿ ಮತ್ತು ಇಟಲಿಯ ನಡುವೆ ಯುದ್ಧ ನಡೆದಾಗ ಜರ್ಮನಿ ಬಹಳ ಎಚ್ಚರಿಕೆಯಿಂದ ತಟಸ್ಥ ನೀತಿಯನ್ನು ಅನುಸರಿಸಿತು. ಏಕೆಂದರೆ ಇಟಲಿಯು ತ್ರಿರಾಷ್ಟ್ರಗಳ ಒಕ್ಕೂಟದ (Triple Alliance) ಸದಸ್ಯ. ಅದೇ ರೀತಿ ತುರ್ಕಿಯ ಸುಲ್ತಾನನು ಜರ್ಮನಿಯ ಸಹಾಯದಿಂದಾಗಿ ಎರಡನೆಯ ಕೈಸರ್‌ನಲ್ಲಿ ಅಚಲ ನಂಬಿಕೆ ಇಟ್ಟಿದ್ದನು. ಈ ಇಬ್ಬರ ಸ್ನೇಹವು ಹಾಳಾಗದಂತೆ ಜರ್ಮನಿ ಚಕ್ರವರ್ತಿ ತಟಸ್ಥ ನೀತಿಯನ್ನು ಅನುಸರಿಸಿದನು.

ಆದರೆ ಗ್ರೇಟ್ ಬ್ರಿಟನ್ನಿನೊಡನೆ ಜರ್ಮನಿಯ ಸಂಬಂಧ ಸಂಪೂರ್ಣವಾಗಿ ಹದಗೆಟ್ಟಿತು. ಇಂಗ್ಲೆಂಡ್ ಜರ್ಮನಿಯೊಡನೆ ಶಸ್ತ್ರಾಸ್ತ್ರಗಳ ಪೈಪೋಟಿಗೆ ಸಂಬಂಧಿಸಿದಂತೆ ಒಂದು ಒಪ್ಪಂದಕ್ಕೆ ಬರಲು ಅನೇಕ ಪ್ರಯತ್ನಗಳನ್ನು ನಡೆಸಿತು. 1912 ರಲ್ಲಿಯೂ ಕೂಡ ನೌಕಾ ಬಲಕ್ಕೆ ಸಂಬಂಧಿಸಿದಂತೆ ಒಂದು ನಿರ್ಣಯಕ್ಕೆ ಬರಲು ಇಂಗ್ಲೆಂಡ್ ಜರ್ಮನಿಗೆ ಒಂದು ನಿಯೋಗವನ್ನು ಕಳುಹಿಸಿತು. ಆದರೆ ಜರ್ಮನಿ ಇಂಗ್ಲೆಂಡಿನೊಡನೆ ಶಸ್ತ್ರಾಸ್ತ್ರ ಪೈಪೋಟಿಗೆ ಸಂಬಂಧಿಸಿದಂತೆ ಒಂದು ನಿರ್ಧಾರಕ್ಕೆ ಬರಲು ಒಪ್ಪಲಿಲ್ಲ.

1912 ಮತ್ತು 1913 ರ ಬಾಲ್ಕನ್ ಯುದ್ಧಗಳಲ್ಲೂ ಜರ್ಮನಿಯು ಆಸ್ಟ್ರಿಯಾ ಮತ್ತು ತುರ್ಕಿಯ ಬೆಂಬಲವಾಗಿ ನಿಂತಿತ್ತು.

## 102.9 ಮೊದಲನೆಯ ಮಹಾಯುದ್ಧದಲ್ಲಿ ಕೈಸರ್ ಎರಡನೆಯ ವಿಲಿಯಂನ ಪಾತ್ರ

ಒಂದನೆಯ ಜಾಗತಿಕ ಯುದ್ಧಕ್ಕೆ ತ್ರಿರಾಷ್ಟ್ರ ಒಕ್ಕೂಟ (Triple Alliance) ಮತ್ತು ಟ್ರಿಪಲ್ ಆಂತಾಂತ್ (Triple Entente) ರಚನೆಯಾದುದು ಮೂಲಭೂತ ಕಾರಣಗಳಲ್ಲೊಂದಾಗಿದೆ. ತ್ರಿರಾಷ್ಟ್ರ

ಒಕ್ಕೂಟವನ್ನು ಬಿಸ್ಮಾರ್ಕನು ಫ್ರಾನ್ಸ್‌ನ್ನು ಯೂರೋಪಿನಲ್ಲಿ ಏಕಾಂಗಿಯನ್ನಾಗಿ ಮಾಡುವ ಉದ್ದೇಶದಿಂದ ರಚಿಸಿದನು. ಹೊಸದಾಗಿ ನಿರ್ಮಾಣಗೊಂಡ ಜರ್ಮನ್ ಸಾಮ್ರಾಜ್ಯಕ್ಕೆ ಯಾವುದೇ ರೀತಿಯಾದ ತೊಂದರೆ ಫ್ರಾನ್ಸ್‌ನಿಂದ ಆಗಬಾರದೆಂಬುದು ಮುಖ್ಯ ಗುರಿಯಾಗಿತ್ತು. ಈ ರೀತಿ ಫ್ರಾನ್ಸನ್ನು ಯೂರೋಪಿನ ರಾಜಕೀಯದಲ್ಲಿ ಪ್ರತ್ಯೇಕಗೊಳಿಸುವ ಬೇರೆ ರಾಷ್ಟ್ರಗಳ ವಿಶ್ವಾಸವನ್ನು ಕಳೆದುಕೊಳ್ಳದಂತೆ ಎಚ್ಚರಿಕೆ ವಹಿಸಿದನು. ಅದರಲ್ಲೂ ವಿಶೇಷವಾಗಿ ಇಂಗ್ಲೆಂಡ್ ಮತ್ತು ರಷ್ಯಾದೊಡನೆ ಸಂಬಂಧ ಹದಗೆಡದಂತೆ ಎಚ್ಚರಿಕೆ ವಹಿಸಿದನು. ಆದರೆ ಬಿಸ್ಮಾರ್ಕನ ಜಾಗರೂಕತೆಯ ವಿದೇಶಾಂಗ ನೀತಿಯನ್ನು 1890 ರ ನಂತರ ಎರಡನೆಯ ಕೈಸರ್ ವಿಲಿಯಂ ಗಾಳಿಗೆ ತೂರಿಬಿಟ್ಟನು. ಕೈಸರ್ ವಿಲಿಯಂ ಹೊಸ ವಿದೇಶಾಂಗ ನೀತಿಯನ್ನು ರೂಪಿಸಿದನು. ಅದೇ ವೆಲ್ಟ್ ಪಾಲಿಟಿಕ್ (Welt Politik) ಅಥವಾ ಜಾಗತಿಕ ರಾಜಕೀಯ. ಇದೇ ಅವನ ಆಳ್ವಿಕೆಯ ಕಾಲದ ವಿದೇಶಾಂಗ ನೀತಿಯ ಮುಖ್ಯ ಲಕ್ಷಣವಾಗಿತ್ತು. ಜರ್ಮನಿ ಈಗಿರುವ ಸ್ಥಾನದಿಂದ ತೃಪ್ತಿಪಡದೆ ಅದು ದಿಗ್ವಿಜಯಗಳ ಮೂಲಕ ಹಾಗೂ ವ್ಯಾಪಾರ ಮತ್ತು ವಾಣಿಜ್ಯವನ್ನು ವಿಸ್ತರಿಸುವುದರ ಮೂಲಕ ಪ್ರಪಂಚದಲ್ಲಿ ತನ್ನ ಹಿರಿಮೆಯನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ ಹೊಸ ನೀತಿಯು ಕೂಡಿತ್ತು.

### *102.9.1 ನೌಕಾಬಲದ ಪೈಪೋಟಿ*

ಶಸ್ತ್ರಾಸ್ತ್ರ ಪೈಪೋಟಿಯಲ್ಲಿ ಒಂದು ವಿಶೇಷ ಅಂಶವೆಂದರೆ ಜರ್ಮನಿ ಮತ್ತು ಇಂಗ್ಲೆಂಡ್ ನಡುವೆ ಉಂಟಾದ ನೌಕಾಬಲದ ಸ್ಪರ್ಧೆ. ಎರಡನೆಯ ಕೈಸರ್ ವಿಲಿಯಂ ಯೂರೋಪಿನಲ್ಲಿ ಮಾತ್ರ ಜರ್ಮನಿ ಅತ್ಯಂತ ಪ್ರಬಲವಾದ ಸೈನ್ಯವನ್ನು ಹೊಂದಿರುವುದಕ್ಕೆ ತೃಪ್ತಿಗೊಳ್ಳಲಿಲ್ಲ. ಅವನು ಒಂದು ಪ್ರಬಲ ನೌಕಾಬಲವನ್ನು ನಿರ್ಮಿಸಲು ನಿರ್ಧರಿಸಿದನು. ಆದ್ದರಿಂದ ಶಸ್ತ್ರಾಸ್ತ್ರಗಳನ್ನು ಹೊಂದಿದ ನೌಕಾಪಡೆಯನ್ನು ನಿರ್ಮಿಸುವುದರ ಕಡೆ ಎರಡನೆಯ ಕೈಸರ್ ವಿಲಿಯಂ ವಿಶೇಷ ಗಮನ ಹರಿಸಿದನು. ಇದರ ಪರಿಣಾಮವಾಗಿ ಇಂಗ್ಲೆಂಡ್ ತನ್ನ ನೌಕಾಪಡೆಯ ಸಾಮರ್ಥ್ಯವನ್ನು ಹೆಚ್ಚಿಸಲು ಅಪಾರ ಹಣವನ್ನು ಖರ್ಚು ಮಾಡಬೇಕಾಯಿತು. ಅದು ಜರ್ಮನಿಯ ನೌಕಾಪಡೆಯ ಪೈಪೋಟಿಯನ್ನು ಎದುರಿಸಬೇಕಾಯಿತು. ನಾವು ಜರ್ಮನರು ದೇವರಿಗೆ ಹೆದರುತ್ತೇವೆ. ಪ್ರಪಂಚದಲ್ಲಿ ಇನ್ನಾವುದಕ್ಕೂ ಅಲ್ಲ". " ನಮ್ಮ ಭವಿಷ್ಯ ನೀರಿನ ಮೇಲೆ (ಸಮುದ್ರ) ನಿಂತಿದೆ" "ಜರ್ಮನಿಯ ಮಹತ್ವಕ್ಕೆ ಸಮುದ್ರದ ಅವಶ್ಯಕತೆ" ಎಂಬ ಕೈಸರ್ ವಿಲಿಯಂನ ಘೋಷಣೆಗಳು ಇಂಗ್ಲೆಂಡಿಗೆ ಭೀತಿಯನ್ನುಂಟುಮಾಡಿದವು.

### *102.9.2 ಆರ್ಥಿಕ ಪೈಪೋಟಿ*

ಗ್ರೇಟ್ ಬ್ರಿಟನ್ ಮತ್ತು ಜರ್ಮನಿಯ ನಡುವಿನ ಆರ್ಥಿಕ ಪೈಪೋಟಿ ಮತ್ತಷ್ಟು ಘರ್ಷಣೆಗೆ ಅವಕಾಶ ಮಾಡಿಕೊಟ್ಟಿತು. 1870 ರ ದಶಕದ ಪ್ರಾರಂಭದಲ್ಲಿ ಜರ್ಮನಿಯು ಗ್ರೇಟ್ ಬ್ರಿಟನ್ನಿಗೆ ಕೈಗಾರಿಕಾ ಕ್ಷೇತ್ರದಲ್ಲಿ ಯಾವುದೇ ಪೈಪೋಟಿ ಒಡ್ಡಲಿಲ್ಲ. ಜರ್ಮನಿಯ ಕೈಗಾರಿಕಾ ಉತ್ಪಾದನೆಗಳು ಬಹಳ ಕಡಿಮೆ ಬೆಲೆಗೆ ದೊರಕುತ್ತಿದ್ದವು. ಅವುಗಳ ಗುಣಮಟ್ಟವು ಅಷ್ಟೊಂದು ಉತ್ತಮವಾಗಿರಲಿಲ್ಲ. ಆದರೆ ಅನಂತರ ಬಿಸ್ಮಾರ್ಕನ ಪ್ರೋತ್ಸಾಹದಿಂದಾಗಿ ಜರ್ಮನಿಯ ಕೈಗಾರಿಕೆಗಳ ಬೆಳವಣಿಗೆ ತ್ವರಿತಗತಿಯಲ್ಲಿ ಉಂಟಾಯಿತು. ಆದರೆ 20 ನೆಯ ಶತಮಾನದ ವೇಳೆಗೆ ಜರ್ಮನಿ ಕೈಗಾರಿಕೆಯ ಬೆಳವಣಿಗೆಯಲ್ಲಿ ಫ್ರಾನ್ಸನ್ನು ಮೀರಿಸಿತು. ಅದು ಆರ್ಥಿಕ ಪೈಪೋಟಿಯಲ್ಲಿ ಗ್ರೇಟ್ ಬ್ರಿಟನ್‌ನನ್ನು ಹಿಂದಕ್ಕೆ ಹಾಕಲು ಪ್ರಯತ್ನ ನಡೆಸಿತು. ಜರ್ಮನಿಯ ವಸ್ತುಗಳು ಪ್ರಪಂಚದ ಮೂಲೆ ಮೂಲೆಗಳನ್ನು ತಲುಪಿದವು. ಜರ್ಮನಿಯ ಇಂತಹ ಅದ್ಭುತ ಬೆಳವಣಿಗೆಯನ್ನು ನೋಡಿ ಯೂರೋಪಿನ ಎಲ್ಲಾ ರಾಷ್ಟ್ರಗಳಿಗೂ ಅದರಲ್ಲಿ ವಿಶೇಷವಾಗಿ ಗ್ರೇಟ್‌ಬ್ರಿಟನ್‌ಗೆ ಭಯ ಉಂಟಾಯಿತು.

### *102.9.3 ವಸಾಹತು ಪೈಪೋಟಿ*

ವಸಾಹತುಗಳ ಸ್ಥಾಪನೆಗೆ ಸಂಬಂಧಿಸಿದಂತೆಯು ಕೂಡ ಗ್ರೇಟ್ ಬ್ರಿಟನ್ ಮತ್ತು ಜರ್ಮನಿಯ ನಡುವೆ ಪೈಪೋಟಿ ಬಿರುಸಿನಿಂದ ಕೂಡಿತ್ತು. ಕೈಗಾರಿಕಾ ಸಿದ್ಧವಸ್ತುಗಳನ್ನು ಪ್ರಪಂಚದ ಎಲ್ಲಾ ಕಡೆಯು

ಮಾರಾಟ ಮಾಡಲು ಎರಡು ರಾಷ್ಟ್ರಗಳು ಪೈಪೋಟಿ ನಡೆಸಿದವು. ಆದ್ದರಿಂದ ಆದಷ್ಟು ವಸಾಹತುಗಳನ್ನು ಸ್ಥಾಪಿಸಲು ಪೈಪೋಟಿ ಪ್ರಾರಂಭಿಸಿದರು. ಆರ್ಥಿಕ ರಾಷ್ಟ್ರೀಯತೆ ಗ್ರೇಟ್ ಬ್ರಿಟನ್ ಮತ್ತು ಜರ್ಮನಿಯಲ್ಲಿ ಆಳವಾಗಿ ಬೇರು ಬಿಟ್ಟಿತು. ಈ ತೀವ್ರ ಪೈಪೋಟಿ ಎರಡು ರಾಷ್ಟ್ರಗಳ ಸಂಬಂಧವನ್ನು ಹದಗೆಡಿಸಿತು. ವಸಾಹತುಗಳನ್ನು ವಶಪಡಿಸಿಕೊಳ್ಳುವ ದೃಷ್ಟಿಯಿಂದ ಇತರ ಯೂರೋಪಿಯನ್ ರಾಷ್ಟ್ರಗಳೊಡನೆ ಘರ್ಷಣೆಗೆ ಇಳಿಯಿತು. ಅದರಲ್ಲೂ ಗ್ರೇಟ್ ಬ್ರಿಟನ್‌ನೊಡನೆ ಘರ್ಷಣೆಗೆ ಇಳಿಯಿತು.

### *102.9.4 ಯುದ್ಧದ ಪ್ರಾರಂಭ ಮತ್ತು ಜರ್ಮನಿಯ ದಿಗ್ವಿಜಯಗಳು*

20ನೆಯ ಶತಮಾನದ ಪ್ರಾರಂಭದ ವೇಳೆಗೆ ಪ್ರಪಂಚದಲ್ಲಿ ಕ್ಷೋಭೆ ಉಂಟಾಯಿತು. ಮೊದಲನೆಯ ಜಾಗತಿಕ ಯುದ್ಧ ಪ್ರಾರಂಭವಾಗುವ ವೇಳೆಗೆ ಎರಡು ಪ್ರಬಲ ಶಕ್ತಿ ಬಣಗಳು ರೂಪುಗೊಂಡವು. ಜರ್ಮನಿ, ಆಸ್ಟ್ರಿಯ ಮತ್ತು ಇಟಲಿಗಳು ಟ್ರಿಪಲ್ ಅಲೆಯನ್ಸ್‌ನ್ನು ಸ್ಥಾಪಿಸಿಕೊಂಡು ಅದರ ಶಕ್ತಿ ವರ್ಧನೆಗಾಗಿ ಪ್ರಯತ್ನಿಸಿದವು. ಇದಕ್ಕೆ ವಿರುದ್ಧವಾಗಿ ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾಗಳು ಟ್ರಿಪಲ್ ಆಂತಾಂತ್ ಶಕ್ತಿ ಗುಂಪನ್ನು ಪ್ರಬಲಗೊಳಿಸಲು ಸಜ್ಜಾದವು. ಈ ಎರಡು ಬಣಗಳಲ್ಲಿ ದ್ವೇಷ ವೈಷಮ್ಯಗಳು ಮತ್ತು ಸ್ಪರ್ಧಾ ಮನೋಭಾವ ಮೂಡಿ ಯೂರೋಪಿನ ರಾಜಕೀಯ ಪರಿಸ್ಥಿತಿಯನ್ನು ಪ್ರಕ್ಷುಬ್ದಗೊಳಿಸಿತು. ಬಾಲ್ಕನ್ ರಾಜ್ಯಗಳಲ್ಲಿ ನಡೆದ ಘಟನೆಯ ಮೊದಲನೆ ಮಹಾಯುದ್ಧ ಪ್ರಾರಂಭವಾಗುವುದಕ್ಕೆ ತಕ್ಷಣದ ಕಾರಣವಾಯಿತು.

ಬೋಸ್ನಿಯಾದ ರಾಜಧಾನಿ ಸರಾಜಿವೊದಲ್ಲಿ ಉನ್ಮತ್ತಾಭಿಮಾನಿ ಸರ್ಬಿಯನ್ನರ ಒಂದು ಗುಂಪು 1914 ರ ಜೂನ್ 28 ರಂದು ಆಸ್ಟ್ರಿಯಾದ ಉತ್ತರಾಧಿಕಾರಿ ಫ್ರಾನ್ಸಿಸ್ ಫರ್ಡಿನೆಂಡ್‌ನನ್ನು ಮತ್ತು ಅವನ ಮಡದಿಯನ್ನು ಹತ್ಯೆಗೈದರು. ಈ ಹತ್ಯೆಯ ಸುದ್ದಿ ಯೂರೋಪಿನ ಅನೇಕ ರಾಷ್ಟ್ರಗಳಿಗೆ ಆಘಾತವನ್ನುಂಟು ಮಾಡಿತು. ಆಸ್ಟ್ರಿಯ - ಹಂಗೇರಿ ಸರ್ಬಿಯಾಕ್ಕೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಆಜ್ಞಾಪಿಸಿತು. ಆದರೆ ಈ ಬೇಡಿಕೆಗಳನ್ನು ನಮ್ರತೆಯಿಂದ ಸರ್ಬಿಯ ತಿರಸ್ಕರಿಸಿತು. ಜರ್ಮನಿಯ ಬೆಂಬಲ ಹೊಂದಿದ್ದ ಆಸ್ಟ್ರಿಯಾ-ಹಂಗೇರಿ ಸರ್ಬಿಯಾ ವಿರುದ್ಧ ಯುದ್ಧ ಸಾರಿತು. ರಷ್ಯಾವು ತನ್ನ ಸೈನ್ಯವನ್ನು ಸರ್ಬಿಯಾದ ಪರವಾಗಿ ಕಳುಹಿಸಿತು. ಜರ್ಮನಿಯು ರಷ್ಯಾದ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಳ್ಳಬೇಕೆಂದು ಸೂಚಿಸಿತು. ರಷ್ಯಾ ಯಾವಾಗ ತನ್ನ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಳ್ಳಲಿಲ್ಲವೋ ಆಗ ಜರ್ಮನಿ ಯುದ್ಧವನ್ನು ಘೋಷಿಸಿತು. ಈ ಸಮಯದಲ್ಲಿ ಫ್ರಾನ್ಸ್ ತಟಸ್ಥವಾಗಿರಬೇಕೆಂದು ಜರ್ಮನಿಯು ಸೂಚಿಸಿತು. ಆದರೆ ಯಾವಾಗ ಫ್ರಾನ್ಸ್‌ನಿಂದ ಯಾವ ಉತ್ತರವು ಬರಲಿಲ್ಲವೋ ಆಗ, ಅದರ ವಿರುದ್ಧ ಜರ್ಮನಿ ಯುದ್ಧ ಸಾರಿತು. ಯಾವಾಗ ಬೆಲ್ಜಿಯಂ ಗಡಿಯನ್ನು ದಾಟಿ ಅದರ ಮೇಲೆ ದಾಳಿ ಮಾಡಿ ಬೆಲ್ಜಿಯಂ ತಟಸ್ಥ ಒಪ್ಪಂದವನ್ನು ಮುರಿಯಿತೊ ಆಗ ಗ್ರೇಟ್ ಬ್ರಿಟನ್ ಕೂಡ ಜರ್ಮನಿಯ ವಿರುದ್ಧ ಯುದ್ಧ ಸಾರಿತು. ಟರ್ಕಿಯು ಜರ್ಮನಿಯೊಡನೆ 1914 ರ ಆಗಸ್ಟ್‌ನಲ್ಲಿ ಒಂದು ಗುಪ್ತ ಒಪ್ಪಂದವನ್ನು ಮಾಡಿಕೊಂಡು ಜರ್ಮನಿಯ ಪರವಾಗಿ ಯುದ್ಧ ಸಾರಿತು. ಬಲ್ಗೇರಿಯಾವು ಕೂಡ 1915 ರ ಸೆಪ್ಟೆಂಬರ್‌ನಲ್ಲಿ ಜರ್ಮನಿಯ ಪರವಾಗಿ ಯುದ್ಧ ಸಾರಿತು. ಆದರೆ ತ್ರಿರಾಷ್ಟ್ರ ಮೈತ್ರಿ ಒಕ್ಕೂಟದ (Triple Alliance) ನ ಸದಸ್ಯನಾಗಿದ್ದ ಇಟಲಿ ಮಾತ್ರ ಟ್ರಿಪಲ್ ಎನ್‌ಟಿಟಿ ಸದಸ್ಯರ ಪರವಾಗಿ ಯುದ್ಧದಲ್ಲಿ ಭಾಗವಹಿಸಿತು. 1915 ರಲ್ಲಿ ಅದು ಕೂಡ ಜರ್ಮನಿಯ ವಿರುದ್ಧ ಯುದ್ಧ ಸಾರಿತು.

ಯುದ್ಧದ ಪ್ರಾರಂಭದಲ್ಲಿ ಜರ್ಮನಿಯ ಸೈನ್ಯವು ಪೂರ್ವ ಹಾಗೂ ಪಶ್ಚಿಮದ ಗಡಿಗಳೆರಡು ಕಡೆಯು ಮುನ್ನುಗ್ಗುವುದರಲ್ಲಿ ಯಶಸ್ವಿಯಾಯಿತು. ಪಶ್ಚಿಮದ ಗಡಿಯಲ್ಲಿ ಜರ್ಮನಿಯ ಸೈನ್ಯವು ಪ್ಯಾರಿಸ್‌ನ ಸಮೀಪದವರೆಗೂ ಮುಂದುವರಿದವು. ಪೂರ್ವದ ಗಡಿಯಲ್ಲಿ ಟರ್ಕಿ, ಆಸ್ಟ್ರಿಯ-ಹಂಗೇರಿ ಮತ್ತು ಜರ್ಮನಿ ರಷ್ಯಾದ ವಿರುದ್ಧ ಅನೇಕ ಸ್ಥಳಗಳಲ್ಲಿ ಜಯಗಳಿಸಿದವು. ಬಲ್ಗೇರಿಯ ಸರ್ಬಿಯಾವನ್ನು ಸದೆಬಡಿಯಿತು. ಜಟ್‌ಲ್ಯಾಂಡ್‌ನಲ್ಲಿ ನಡೆದ ನೌಕಾಯುದ್ಧದಲ್ಲಿ ಬ್ರಿಟಿಷ್ ಮತ್ತು ಜರ್ಮನಿಯ ನೌಕಾದಳಗಳಿಗೆ ಹೆಚ್ಚಿನ ನಷ್ಟ ಉಂಟಾಯಿತು. ಅಂತಿಮವಾಗಿ ಇಂಗ್ಲೆಂಡ್‌ನ ನೌಕಾದಳ

ಯಶಸ್ಸನ್ನು ಪಡೆಯಿತು. ನೌಕಾ ಯುದ್ಧದಲ್ಲಿ ಸೋಲನ್ನನುಭವಿಸಿದ ಜರ್ಮನಿ, ಸಬ್‌ಮೆರಿನ್‌ಗಳ ಮೂಲಕ ಟ್ರಿಪಲ್ ಆಂತಾಂತ್ ಶಕ್ತಿಗಳಿಗೆ ಆಹಾರ ಸಾಮಾಗ್ರಿಗಳನ್ನು ಸರಬರಾಜು ಮಾಡುತ್ತಿದ್ದ ತಟಸ್ಥ ರಾಷ್ಟ್ರಗಳ ಹಡಗುಗಳನ್ನು ಧ್ವಂಸ ಮಾಡಲು ಪ್ರಾರಂಭಿಸಿದನು. ಪ್ರಮುಖವಾಗಿ ಅಮೇರಿಕಾಕ್ಕೆ ಸೇರಿದ್ದ ಲೂಸಿಟಾನಿಯ ಎಂಬ ನೌಕೆಯನ್ನು ಜರ್ಮನ್ ಸಬ್‌ಮೆರಿನ್ ಹೊಡೆದುರುಳಿಸಿತು. ಇದರ ಪರಿಣಾಮವಾಗಿ 1917 ರ ಮಾರ್ಚ್ ತಿಂಗಳಲ್ಲಿ ಅಮೇರಿಕ ಜರ್ಮನಿಯ ವಿರುದ್ಧ ಯುದ್ಧ ಸಾರಿತು.

ರಷ್ಯಾವು ಯುದ್ಧದಲ್ಲಿ ಉಂಟಾದ ಸೋಲಿನಿಂದ ಚೇತರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅಲ್ಲಿಯ ಆರ್ಥಿಕ ಪರಿಸ್ಥಿತಿ ತುಂಬಾ ಹದಗೆಟ್ಟಿತು. ಇದರ ಪರಿಣಾಮವಾಗಿ 1917 ರ ಅಕ್ಟೋಬರ್ ತಿಂಗಳಿನಲ್ಲಿ ಕ್ರಾಂತಿ ನಡೆಯಿತು. ಬೋಲ್ಸೆವಿಕ್ಕರು ಅಧಿಕಾರಕ್ಕೆ ಬಂದರು. ಲೆನಿನ್ ಜರ್ಮನಿಯೊಡನೆ ಬ್ರೆಸ್ಟ್ ಲಿಟೋವೆಸ್ಕ್ ಒಪ್ಪಂದವನ್ನು ಮಾಡಿಕೊಂಡನು.

### *102.9.5 ಜರ್ಮನಿಯ ಸೋಲು ಮತ್ತು ಕೈಸರ್‌ನ ಪತನ*

ಪೂರ್ವದ ಗಡಿಯಲ್ಲಿ ರಷ್ಯಾದ ವಿರುದ್ಧ ಜಯಗಳಿಸಿದ ಮೇಲೆ ಜರ್ಮನಿ ಮತ್ತು ಅದರ ಮಿತ್ರರಾಷ್ಟ್ರಗಳು ಪಶ್ಚಿಮದ ಕಡೆ ಗಮನ ಹರಿಸಿ ಫ್ರಾನ್ಸ್ ಮೇಲೆ ಧಾಳಿ ಮಾಡಿದವು. ಫ್ರಾನ್ಸ್ ಅಪಾರ ನಷ್ಟವನ್ನನುಭವಿಸಿತು. ಆದರೆ ಅಂತಿಮವಾಗಿ ಟ್ರಿಪಲ್ ಎನ್‌ಟೆಟಿ ರಾಷ್ಟ್ರಗಳು ಜರ್ಮನಿಯ ವಿರುದ್ಧ ಜಯಗಳಿಸುವುದರಲ್ಲಿ ಯಶಸ್ವಿಯಾದವು. ಇದೇ ಸಮಯದಲ್ಲಿ ಬಲ್ಗೇರಿಯಾ ಎನ್‌ಟೆಟಿ ರಾಷ್ಟ್ರಗಳಿಗೆ ಶರಣಾಯಿತು. ಆಸ್ಟ್ರಿಯಾ ಮತ್ತು ಹಂಗೇರಿ ಕೂಡ ಸೋತು ಶರಣಾಯಿತು. ಅಂತಿಮವಾಗಿ ಜರ್ಮನಿಯ ದಂಡನಾಯಕನ ಸಲಹೆ ಮೇರೆಗೆ ಯುದ್ಧವನ್ನು ನಿಲ್ಲಿಸಿ ಮಿತ್ರ ರಾಷ್ಟ್ರಗಳೊಡನೆ (Triple Entente) ಒಂದು ಒಪ್ಪಂದ ಮಾಡಿಕೊಳ್ಳಲು ನಿರ್ಧರಿಸಿದನು. ಅದರಂತೆ ಯುದ್ಧವನ್ನು ನಿಲ್ಲಿಸುವುದಾಗಿ ಘೋಷಿಸಿದ ಮೇಲೆ ಹೊಸದಾಗಿ ನೇಮಕಗೊಂಡಿದ್ದ ಛಾನ್ಸಲರ್ ಮಾಕ್ಸಿಮಿಲಿಯನ್‌ಗೆ ಸಂಧಾನದ ಮಾತುಕತೆಗಳನ್ನು ಪ್ರಾರಂಭಿಸುವಂತೆ ಆಜ್ಞಾಪಿಸಿದನು. ಈ ಮಧ್ಯೆ ಜರ್ಮನಿಯಲ್ಲಿ ಅನೇಕ ದಂಗೆಗಳು ಉಂಟಾದವು. ಈ ಕ್ಷಿಪ್ರಗತಿಯ ಬೆಳವಣಿಗೆಗಳು ಕೈಸರ್ ವಿಲಿಯಂ ಮತ್ತು ಅವನ ಸರ್ಕಾರದ ಪತನಕ್ಕೆ ಕಾರಣವಾದವು. ಕೈಸರ್ ಎರಡನೆಯ ವಿಲಿಯಂ ಜರ್ಮನಿಯಿಂದ ಪಲಾಯನ ಮಾಡಿ ಹಾಲೆಂಡ್‌ನಲ್ಲಿ ಆಶ್ರಯ ಪಡೆದನು. ಜರ್ಮನಿಯಲ್ಲಿ ಗಣರಾಜ್ಯ ಸ್ಥಾಪನೆಯಾಯಿತು. ಈ ಗಣರಾಜ್ಯ 1918 ರಲ್ಲಿ ನಡೆದ ಪ್ಯಾರಿಸ್ ಶಾಂತಿ ಒಪ್ಪಂದಕ್ಕೆ ಸಹಿ ಹಾಕುವುದರ ಮೂಲಕ ಒಂದನೆಯ ಜಾಗತಿಕ ಯುದ್ಧ ಕೊನೆಗೊಂಡಿತು.

## 102.10 ಸಂಕ್ಷಿಪ್ತ ಅವಲೋಕನ

ಎರಡನೆ ವಿಲಿಯಂನು ಜರ್ಮನಿಯ ಚಕ್ರವರ್ತಿಯಾದ ಮೇಲೆ ಜರ್ಮನಿಯ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯ ಪ್ರಾರಂಭವಾಗುತ್ತದೆ. ಅವನು ಜರ್ಮನಿಯನ್ನು ಯುರೋಪಿನಲ್ಲಿಯೇ ಅಲ್ಲದೆ, ಇಡೀ ಪ್ರಪಂಚದಲ್ಲೇ ಪ್ರಬಲ ಶಕ್ತಿಯನ್ನಾಗಿ ಮಾಡುವ ಆಕಾಂಕ್ಷೆ ಹೊಂದಿದ್ದನು. ಕೈಗಾರಿಕೆಯ ಬೆಳವಣಿಗೆ, ವ್ಯವಸಾಯದ ಅಭಿವೃದ್ಧಿ, ವ್ಯಾಪಾರಕ್ಕೆ ಪ್ರೋತ್ಸಾಹ ಮತ್ತು ವಸಾಹತುಗಳನ್ನು ಸ್ಥಾಪಿಸುವುದರ ಮೂಲಕ ಅದನ್ನು ಆರ್ಥಿಕವಾಗಿ ಪ್ರಬಲ ರಾಷ್ಟ್ರವನ್ನಾಗಿ ಮಾಡಿದನು. ಜರ್ಮನಿಯ ವಸ್ತುಗಳು ವಿಶ್ವದ ಎಲ್ಲಾ ಸ್ಥಳಗಳಲ್ಲೂ ದೊರಕುವಷ್ಟರ ಮಟ್ಟಿಗೆ ಜರ್ಮನಿಯ ಕೈಗಾರಿಕೆ ಬೆಳೆಯಿತು. ಸೈನ್ಯದ ಮತ್ತು ನೌಕಾ ಬಲದ ವಿಸ್ತರಣೆಯ ಮೂಲಕ ಜರ್ಮನಿ ವಿಶ್ವದಲ್ಲೇ ಒಂದು ಪ್ರಬಲ ಸೈನಿಕ ಶಕ್ತಿ ಎನಿಸಿಕೊಂಡಿತು. ಆಫ್ರಿಕಾ ಮತ್ತು ಏಷ್ಯಾಗಳಲ್ಲಿ ಅನೇಕ ವಸಾಹತುಗಳನ್ನು ಸ್ಥಾಪಿಸಿದನು.

ಬಿಸ್ಮಾರ್ಕನು ಅನುಸರಿಸಿದ್ದ ಹೊಂದಾಣಿಕೆಯ ವಿದೇಶಾಂಗ ನೀತಿಗೆ ಕೈಸರ್ ವಿಲಿಯಂ ವಿದಾಯ ಹೇಳಿದನು. ಅವನು ವಿಶ್ವರಾಜಕೀಯ ನೀತಿಯನ್ನು ಅನುಸರಿಸಿದನು. ವಿಶ್ವದ ಯಾವುದೇ ಭಾಗದಲ್ಲಾಗಲಿ ಯಾವ ಘಟನೆಯು ಜರ್ಮನಿಯು ಭಾಗವಹಿಸದೆ ನಡೆಯಬಾರದು ಎಂಬ

ನಿಲುವನ್ನು ಹೊಂದಿದ್ದನು. ಬಿಸ್ಮಾರ್ಕನ ಕಾಲದಲ್ಲಿ ಜರ್ಮನಿಯ ಮಿತ್ರರಾಷ್ಟ್ರವಾಗಿದ್ದ ರಷ್ಯಾವನ್ನು ರೀಇನ್ಶೂರೆನ್ಸ್ ಒಪ್ಪಂದವನ್ನು ನವೀಕರಿಸದೆ ದೂರ ಮಾಡಿದನು. ಮೊರೊಕ್ಕೊ ವಿಷಯದಲ್ಲಿ ವಿಶ್ವರಾಷ್ಟ್ರಗಳ ವಿರೋಧದಿಂದಾಗಿ ಜರ್ಮನಿ ಅಪಮಾನವನ್ನನುಭವಿಸಿತು. ಆದರೆ ಕೈಸರ್ ವಿಲಿಯಂನ ಹದ್ದುಮೀರಿದ ವಿದೇಶಾಂಗ ನೀತಿ ಮೊದಲನೆಯ ಜಾಗತಿಕ ಯುದ್ಧಕ್ಕೆ ಕಾರಣವಾಯಿತು. ಇಂಗ್ಲೆಂಡಿನೊಡನೆ ಪೈಪೋಟಿಗಿಳಿದನು. ನೌಕಾಬಲದ ಪೈಪೋಟಿ, ಶಸ್ತ್ರಾಸ್ತ್ರ ಪೈಪೋಟಿ, ಆರ್ಥಿಕ ಪೈಪೋಟಿ ಮತ್ತು ವಸಾಹತು ಪೈಪೋಟಿ ಗ್ರೇಟ್ ಬ್ರಿಟನ್ ಮತ್ತು ಇನ್ನಿತರ ಯುರೋಪಿಯನ್ ರಾಷ್ಟ್ರಗಳೊಡನೆ ಘರ್ಷಣೆಗೆ ಕಾರಣವಾಯಿತು. ಟ್ರಿಪಲ್ ಆಂತಾಂತ್ (Triple Entente) ಮತ್ತು ತ್ರಿರಾಷ್ಟ್ರಗಳ (Triple Alliance) ನಡುವೆ ಯುದ್ಧ ಪ್ರಾರಂಭವಾಯಿತು. ತ್ರಿರಾಷ್ಟ್ರದ ಸದಸ್ಯ ಇಟಲಿ ಮಾತ್ರ ಜರ್ಮನಿಯ ಪರವಾಗಿ ಯುದ್ಧದಲ್ಲಿ ಭಾಗವಹಿಸಲಿಲ್ಲ. ಕೈಸರ್ ವಿಲಿಯಂನ ಪರವಾಗಿ ಟರ್ಕಿ, ಆಸ್ಟ್ರಿಯ-ಹಂಗೇರಿ ಮತ್ತು ಬಲ್ಗೇರಿಯ ಭಾಗವಹಿಸಿದವು. ನಾಲ್ಕು ವರ್ಷಗಳ ಕಾಲ ನಡೆದ ಯುದ್ಧದಲ್ಲಿ ಅಂತಿಮವಾಗಿ ಕೈಸರ್ ಸೋಲನ್ನನುಭವಿಸಿದನು. ಜರ್ಮನಿಯ ವಿದೇಶಾಂಗ ನೀತಿಯೆ ಜರ್ಮನಿಯ ವಿನಾಶಕ್ಕೆ ಕಾರಣವಾಯಿತು.

## 102.11 ಕ್ಲಿಷ್ಟ ಪದಗಳ ಅರ್ಥ

| | |
|---|---|
| ವೆಲ್ಟ್ ಪಾಲಿಟಿಕ್ | ವಿಶ್ವರಾಜಕೀಯ |

## 102.12 ಮಾದರಿ ಪ್ರಶ್ನೆಗಳು

1. ಕೈಸರ್ ಎರಡನೆಯ ವಿಲಿಯಂನ ಒಳಾಡಳಿತ ನೀತಿಯನ್ನು ಕುರಿತು ವಿವರಿಸಿ
2. ಕೈಸರ್ ಎರಡನೆಯ ವಿಲಿಯಂ ಮೊದಲನೆಯ ಜಾಗತಿಕ ಯುದ್ಧಕ್ಕೆ ಎಷ್ಟರ ಮಟ್ಟಿಗೆ ಕಾರಣನಾದನು ಎಂಬುದನ್ನು ಪರಿಶೀಲಿಸಿ.

## 103.13 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


| | |
|---|---|
| Craig .G.A. | **Europe Since 1815,** London 1966 |
| Fisher HAL | **A History of Europe Vol - II**, Delhi 1981. |
| Ketelbey, C.D.M. | **A History of Modern Times 1789**, Bombay - 1976 |
| Pinson .K.S. | **Modern Germany : History and Civilization** |


ಪ್ರೊ|| ಶಿವಣ್ಣ

# [illegible]

# [illegible]

# ಟಿಪ್ಪಣಿಗಳು


ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4-060/2013-2014 ದಿನಾಂಕ : 24-09-2013
ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 220 GSM ಆರ್ಟ್‌ಕಾರ್ಡ್
ಮುದ್ರಕರು : ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು. ಪ್ರತಿಗಳು : 5000

# Karnataka State Open University

**Mukthagangotri, Mysore - 570 006**

The Open University system has been initiated in order to augment opportunities for higher education and as an instrument of democratizing education.


*National Education Policy 1986*




♣ **REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary
Mandya
Kolar
Bijapur
Belagaum
Ramanagar
Bangalore (another one)
Chikmagalur
Udupi
Karwar
Bidar
Mysore

- ✿ **HEAD QUARTERS**
- ★ **Total Study Centres : 123**
- ♣ **Regional Centres : 21**
- ❄ **B.Ed Study Centres : 10**
- ✦ **M.Ed Study Centres : 06**


Multimedia learning material
STUDENT
INSTRUCTIONAL SYSTEM